25 February 2026 Wednesday | SINCE 1957

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

# ವರ್ತಮಾನ

ಸಂಪಾದಕ: ಕೆ.ಎನ್.ರವಿ

ಭವಿಷ್ಯದ ಮುನ್ನುಡಿ

**ಭಾವನಾಂತರಂಗ**

ಶಿಕ್ಷಕರು ಕಲಿಸಿದ ಪಾಠಕ್ಕಿಂತ, ಜೀವನದ ಅನುಭವದ ಪಾಠ ಚೆನ್ನಾಗಿ ನೆನಪಿನಲ್ಲಿ ಉಳಿಯುತ್ತದೆ!

-ಸ್ನೇಹಾ ಆನಂದ್

info.varthaman@gmail.com


ಸಿಲ್ಕ್ ಕಾರ್ಖಾನೆಯಲ್ಲಿ ಕ್ರೀಡಾಂಗಣ ನಿರ್ಮಾಣಕ್ಕೆ ಚಿಂತನೆಗೆ ವಿರೋಧ — ಪುಟ ಸಂ. 2


ಶೆಟ್ಟಳ್ಳಿ, ಕುರಟ್ಟಿ ಹೊಸೂರು ಗ್ರಾಪಂಗಳಿಗೆ ಜಿಪಂ ಸಿಇಒ ಭೇಟಿ — ಪುಟ ಸಂ. 3


ಜೀವನದಲ್ಲಿ ಶರಣ ಸಾಹಿತ್ಯ ಅಳವಡಿಸಿಕೊಳ್ಳಿ: ಗಣೇಶ್ ಪ್ರಸಾದ್ — ಪುಟ ಸಂ. 4

9742504916 | ಮೈಸೂರು | ಮಂಡ್ಯ | ಬೆಂಗಳೂರು | ಹಾಸನ | ಚಾಮರಾಜನಗರ | ರಾಮನಗರ | ಬೆಂಗಳೂರು ಗ್ರಾಮಾಂತರ | ಕೊಡಗು | ಕಾರ್ಯನಿರ್ವಾಹಕ ಸಂಪಾದಕ - ಕೆ.ಆರ್.ಮಿಹಿರ್ ಆಕಾಶ್

VARTHAMAN | Volume: 69 | Issue: 106 | Pages: 06 | KA/SK/MYS/1098/2023-2025 | R.N.I. No.3577/1957 | www.varthaman.in | Price-3

# ಸ್ವಯಂಚಾಲಿತ ಮ್ಯುಟೇಶನ್ ವ್ಯವಸ್ಥೆ ಜಾರಿ

## ಮಾನವ ಹಸ್ತಕ್ಷೇಪ ರಹಿತ: ಕಂದಾಯ ಸಚಿವ ಕೃಷ್ಣಬೈರೇಗೌಡ ಚಾಲನೆ

**ಬೆಂಗಳೂರು:** ನೋಟಿಸ್ ಅವಧಿ ಮುಕ್ತಾಯವಾದ ನಂತರ ತಂತ್ರಾಂಶದ ಮೂಲಕ ಮಾನವ ಹಸ್ತಕ್ಷೇಪ ಇಲ್ಲದೆ ಸರ್ವರ್ ಸಹಿ ಮೂಲಕ ಸ್ವಯಂ ಚಾಲಿತವಾಗಿ ಮ್ಯುಟೇಶನ್ ಅನುಮೋದನೆಗೊಳ್ಳುವ ಹೊಸ ವ್ಯವಸ್ಥೆಗೆ ಕಂದಾಯ ಸಚಿವ ಕೃಷ್ಣಬೈರೇಗೌಡ ಚಾಲನೆ ನೀಡಿದ್ದಾರೆ.

ವಿಕಾಸಸೌಧದಲ್ಲಿ ಮಂಗಳವಾರ ನಡೆದ ಕಾರ್ಯಕ್ರಮದಲ್ಲಿ ಹೊಸ ತಂತ್ರಾಂಶಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಎಲ್ಲಾ 7 ದಿನಗಳ ಮತ್ತು 15 ದಿನಗಳ ನೋಟಿಸ್ ಅವಧಿ ಹೊಂದಿರುವ ಮ್ಯುಟೇಶನ್ ಸ್ವಯಂಚಾಲಿತ ಆಗಲಿವೆ. ಇದರಿಂದಾಗಿ ನೋಟಿಸ್ ಅವಧಿ ಹೊಂದಿರುವ ಮ್ಯುಟೇಶನ್‌ಗಳು ಕ್ರಯ, ವಿಭಾಗ, ದಾನ, ಪೌತಿ, ವಿಲ್ ಆಗಿರುತ್ತವೆ. ಇವೆಲ್ಲವನ್ನೂ ಸ್ವಯಂ ಚಾಲಿತವಾಗಿ ಅನುಮೋದನೆಗೊಳ್ಳುತ್ತವೆ ಎಂದು ತಿಳಿಸಿದರು.

ಒಂದು ವೇಳೆ 7 ಕೆಲಸದ ದಿನಗಳು ಅಥವಾ 15 ಕೆಲಸದ ದಿನಗಳು ನೋಟಿಸ್ ಅವಧಿಯೊಳಗೆ ಕಂದಾಯ ನಿರೀಕ್ಷಕರು (ಸರ್ಕಾರಿ ಆಕ್ಷೇಪ) ಅಥವಾ ಸಾರ್ವಜನಿಕರು ಯಾವುದೇ ತಕರಾರು ನೀಡಿದಿದ್ದಲ್ಲಿ, ಅಂತಹ ಮ್ಯುಟೇಶನ್ ಅನ್ನು ಪೂರ್ಣಗೊಳಿಸದೆ, ಆರ್‌ಸಿಸಿಎಂಎಸ್ ತಂತ್ರಾಂಶದ ತಹಶೀಲ್ದಾರ್ ನ್ಯಾಯಾಲಯಕ್ಕೆ ಆ ಪ್ರಕರಣವನ್ನು ವರ್ಗಾಯಿಸಲಾಗುತ್ತದೆ. ತಹಶೀಲ್ದಾರ್ ನಿರ್ಧಾರದಂತೆ ಮುಂದಿನ ಕ್ರಮ ಕೈಗೊಳ್ಳಲಾಗುತ್ತದೆ ಎಂದು ಹೇಳಿದರು.

ಈ ಹಿಂದೆ ಮ್ಯುಟೇಶನ್‌ಗಳಿಗೆ ಆಕ್ಷೇಪಣೆ ಪುಟ 2ಕ್ಕೆ





### ಪಹಣಿಗೆ ಆಧಾರ್ ಕಡ್ಡಾಯ

ಪಹಣಿಗಳಿಗೆ (ಆರ್‌ಟಿಸಿ) ಆಧಾರ್ ಅನ್ನು ಕಡ್ಡಾಯವಾಗಿ ಜೋಡಣೆ ಮಾಡಬೇಕು ಎಂದು ಕಂದಾಯ ಸಚಿವ ಕೃಷ್ಣಬೈರೇಗೌಡ ಅವರು ಮನವಿ ಮಾಡಿದರು. ಆಧಾರ್ ಜೋಡಣೆ ಮಾಡುವಂತೆ ಹಲವು ಬಾರಿ ಮನವಿ ಮಾಡಿದ್ದೇವೆ. ಪುಟ 2ಕ್ಕೆ

# ಅಪ್ರಾಪ್ತರಿಂದ ಬಾಲಕನ ಹತ್ಯೆ

## ಶಿವಮೊಗ್ಗದಲ್ಲಿ ಸಂಚಲನ ಸೃಷ್ಟಿ, ಪೊಲೀಸ್ ಹೈಅಲರ್ಟ್

**ಶಿವಮೊಗ್ಗ:** ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಯೊಬ್ಬನನ್ನು ಅನ್ಯಕೋಮಿನ ಅಪ್ರಾಪ್ತರ ಗುಂಪು ಹತ್ಯೆ ಮಾಡಿರುವ ಘಟನೆ ನಡೆದಿದೆ. ಜಿಲ್ಲೆಯಲ್ಲಿ ಘಟನೆ ಭಾರಿ ಸಂಚಲನ ಮೂಡಿಸಿದೆ. ಈ ಹಿನ್ನೆಲೆಯಲ್ಲಿ ಜಿಲ್ಲಾದ್ಯಂತ ಪೊಲೀಸ್ ಇಲಾಖೆ ಹೈಅಲರ್ಟ್ ಘೋಷಿಸಿದೆ.



ಶಿವಮೊಗ್ಗ ತಾಲೂಕಿನ ಊರಗಡೂರಿನ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿ ಸಂಕೇತ್ (15) ಹತ್ಯೆಯಾದ ಬಾಲಕ. ಶಾಲೆಯಲ್ಲಿ ವಿಶೇಷ ತರಗತಿ ಮುಗಿಸಿ ಸೋಮವಾರ ರಾತ್ರಿ 8 ಗಂಟೆ ಹೊತ್ತಿಗೆ ಮನೆಗೆ ತೆರಳುವಾಗ ದುರ್ಘಟನೆ ನಡೆದಿದೆ. ಘಟನೆ ಹಿನ್ನೆಲೆಯಲ್ಲಿ ಮಂಗಳವಾರ ನಗರದಲ್ಲಿ ಬೂದಿಮುಚ್ಚಿದ ಕೆಂಡದಂತಹ ಸ್ಥಿತಿ ನಿರ್ಮಾಣವಾಗಿದೆ.

ಸಂಕೇತ್‌ನ ಸ್ನೇಹಿತ ಗಿರೀಶ್ ಜೊತೆಗೆ ಅನ್ಯಕೋಮಿನ ಮೂವರು ಅಪ್ರಾಪ್ತರು ಜಗಳವಾಡುತ್ತಿದ್ದರು. ಜಗಳ ಬಿಡಿಸಲು ಹೋದಾಗ ಸಂಕೇತ್‌ನ ಎದೆಗೆ ಗುದ್ದಿದ್ದಾರೆ. ಪುಟ 2ಕ್ಕೆ

### 15 ಲಕ್ಷ ಪರಿಹಾರ ಘೋಷಣೆ

ಮೃತ ಬಾಲಕನ ಕುಟುಂಬಕ್ಕೆ ರಾಜ್ಯ ಸರ್ಕಾರ 15 ಲಕ್ಷ ರೂ. ಪರಿಹಾರ ಘೋಷಿಸಿದೆ. ಹತ್ಯೆಯಾದ ಸಂಕೇತ್ ಕುಟುಂಬಕ್ಕೆ ಮುಖ್ಯಮಂತ್ರಿ ಪರಿಹಾರ ನಿಧಿಯಿಂದ 10 ಲಕ್ಷ, ಶಿಕ್ಷಣ ಇಲಾಖೆಯಿಂದ 5 ಲಕ್ಷ ರೂಪಾಯಿ ಪರಿಹಾರ ಘೋಷಣೆ ಮಾಡಲಾಗಿದೆ. ಸರ್ಕಾರದ ಪರವಾಗಿ ಡಿಸಿ ಪ್ರಭುಲಿಂಗ ಕವಳಿಕಟ್ಟಿ ಪರಿಹಾರ ಘೋಷಣೆ ಮಾಡಿದರು. ಸಿಎಂ, ಉಸ್ತುವಾರಿ ಸಚಿವ ರೊಂದಿಗೆ ಮಾತಾಡಿ ಪರಿಹಾರ ಘೋಷಣೆ ಮಾಡಲಾಗಿದೆ. ಈ ಪ್ರಕರಣದಲ್ಲಿ ಈಗಾಗಲೇ ಏಳು ಮಂದಿ ಆರೋಪಿಗಳನ್ನು ಬಂಧಿಸಲಾಗಿದೆ. ಅಟ್ರಾಸಿಟಿ ಕೇಸ್ ಕೂಡ ದಾಖಲಾಗಿದೆ. ಮೃತ ಸಂಕೇತ ಜೊತೆಗೆ ಗಾಯಾಳು ಆಗಿರುವ ಗಿರೀಶ್ ಗೆ ಪರಿಹಾರ ನೀಡಲಾಗುವುದು ಎಂದು ಜಿಲ್ಲಾಧಿಕಾರಿ ತಿಳಿಸಿದ್ದಾರೆ.

## 9ನೇ ತರಗತಿ ವಿದ್ಯಾರ್ಥಿ ಹೃದಯಾಘಾತದಿಂದ ಸಾವು

**ದಾವಣಗೆರೆ:** ಜಗಳೂರು ತಾಲೂಕಿನ ಗೋಗುದ್ದು ಗ್ರಾಮದಲ್ಲಿ 9ನೇ ತರಗತಿ ವಿದ್ಯಾರ್ಥಿ ಹೃದಯಾಘಾತದಿಂದ ಸಾವನ್ನಪ್ಪಿರುವ ಘಟನೆ ನಡೆದಿದೆ. ಮುಜಾಮಿಲ್ (15) ಮೃತ ವಿದ್ಯಾರ್ಥಿ.



ಗೋಗುದ್ದು ಗ್ರಾಮದ ಚಮನ್ ಸಾಬ್ ಹಾಗೂ ಫಾತಿಮಾ ದಂಪತಿ ಪುತ್ರ ಹನುಮಂತಪುರ ಗ್ರಾಮದ ರಾಜೀವ್ ಗಾಂಧಿ ವಸತಿ ಶಾಲೆಯಲ್ಲಿ 9ನೇ ತರಗತಿ ಓದುತ್ತಿದ್ದ. ಮನೆಯಲ್ಲಿ ಬೆಳಗಿನ ಜಾವ ಬಹಿರ್ದೆಸೆಗೆ ಹೋಗಿದ್ದಾಗ ಹೃದಯಾಘಾತವಾಗಿದೆ. ಆಸ್ಪತ್ರೆಗೆ ಸಾಗಿಸುವ ಮಾರ್ಗ ಮಧ್ಯೆ ಬಾಲಕ ಸಾವನ್ನಪ್ಪಿದ್ದಾನೆ.

ಮಗನನ್ನು ಕಳೆದುಕೊಂಡ ಪೋಷಕರ ಆಕ್ರಂದ್ರನ ಮುಗಿಲು ಮುಟ್ಟಿದೆ.

## ರೇಣುಕಾಸ್ವಾಮಿ ಹತ್ಯೆ ಪ್ರಕರಣ: ಪೊಲೀಸರ ವಿರುದ್ಧವೇ ದೂರು

**ಬೆಂಗಳೂರು:** ಚಿತ್ರದುರ್ಗದ ರೇಣುಕಾಸ್ವಾಮಿ ಹತ್ಯೆ ಪ್ರಕರಣದ ಆರೋಪಿಗಳಿಂದ ಕೋರ್ಟ್‌ಗೆ ದಿನಕ್ಕೊಂದು ಅರ್ಜಿ ಸಲ್ಲಿಕೆಯಾಗುತ್ತಿದೆ. ನಮ್ಮ ಮೊಬೈಲ್ ವಶಕ್ಕೆ ಪಡೆಯುವಾಗ ಕಾಮಾಕ್ಷಿಪಾಳ್ಯ ಪೊಲೀಸ್ ಠಾಣೆಯಲ್ಲಿ ವಶಕ್ಕೆ ಪಡೆದುಕೊಂಡಿಲ್ಲ. ಬೇರೊಂದು ಜಾಗದಲ್ಲಿ ವಶಕ್ಕೆ ಪಡೆದು ಅದನ್ನ ಕಾಮಾಕ್ಷಿಪಾಳ್ಯ ಎಂದಿದ್ದಾರೆಂದು ಪೊಲೀಸರ ವಿರುದ್ಧವೇ ಮೂವರು ಆರೋಪಿಗಳು ಕೋರ್ಟ್‌ಗೆ ಅರ್ಜಿ ಸಲ್ಲಿಕೆ ಮಾಡಿದ್ದಾರೆ.



ದೋಷಾರೋಪ ಪಟ್ಟಿ ಸಲ್ಲಿಕೆಯಾದಾಗ ಫೋಟೋದಲ್ಲಿ ವೈಟ್ ಕಲರ್ ಟೈಲ್ಸ್ ಇದೆ. ಪೊಲೀಸ್ ಠಾಣೆಯಲ್ಲಿ ಹಳೆಯ ಮಾದರಿ ಮೊಜಾಯಿಕ್ ಇದೆ. ಖುದ್ದಾಗಿ ನ್ಯಾಯಾಧೀಶರೇ ಜೈಲಿಗೆ ಭೇಟಿ ಕೊಡ ಬೇಕು. ಸ್ಟೇಷನ್ ಸಿಸಿಟಿವಿಯನ್ನು ವಶಕ್ಕೆ ಪಡೆಯಬೇಕು. ಬದಲಾ ವಣೆ ಮಾಡದಂತೆ ಎಚ್ಚರಿಕೆ ವಹಿಸಬೇಕು ಅಂತ ಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದಾರೆ. ಅರ್ಜಿ ಸ್ವೀಕಾರ ಮಾಡಿರುವ ನ್ಯಾಯಾಲಯ ಮುಂದಿನ ವಿಚಾರಣೆ ತನಕ ಸಿಸಿಟಿವಿ ದೃಶ್ಯ ನಾಶ ಮಾಡದಂತೆ ಪೊಲೀಸರಿಗೆ ಸೂಚನೆ ನೀಡಿದೆ.

# ಮುಖ್ಯಮಂತ್ರಿ ಬದಲಾವಣೆ ಎಚ್‌ಸಿಎಂಗೆ ಮಾಹಿತಿ

## ಹೀಗಾಗಿಯೇ ದಲಿತ ಸಿಎಂ ಪ್ರಸ್ತಾಪ: ಡಿ.ಕೆ.ಶಿವಕುಮಾರ್ ಲೇವಡಿ

**ಬೆಂಗಳೂರು:** ಸಚಿವ ಮಹದೇವಪ್ಪ ಕೂಡ ನಮ್ಮ ಹೈಕಮಾಂಡ್ ಆಗಿರುವುದರಿಂದ ರಾಜ್ಯದಲ್ಲಿ ಮುಖ್ಯಮಂತ್ರಿ ಬದಲಾವಣೆ ವಿಚಾರ ಅವರಿಗೆ ತಿಳಿದಿರಬೇಕು. ಹೀಗಾಗಿ, ದಲಿತ ಮುಖ್ಯಮಂತ್ರಿ ವಿಚಾರವನ್ನು ಅವರು ಪ್ರಸ್ತಾಪ ಮಾಡಿದ್ದಾರೆ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಲೇವಡಿ ಮಾಡಿದ್ದಾರೆ.

ನಗರದಲ್ಲಿ ಸುದ್ದಿಗಾರರ ಜೊತೆ ಮಂಗಳವಾರ ಮಾತನಾಡಿ ಪ್ರಶ್ನೆಗಳಿಗೆ ಪ್ರತಿಕ್ರಿಯಿಸಿದ ಅವರು, ಮಹದೇವಪ್ಪ ಅವರ ಹೇಳಿಕೆ ನೋಡಿದೆ. ಅವರಿಗೆ ಮುಖ್ಯಮಂತ್ರಿ ಬದಲಾವಣೆ ಮಾಹಿತಿ ಇರಬಹುದು. ಆದರೆ, ಆ ವಿಚಾರವಾಗಿ ನನಗೆ ಯಾವುದೇ ಮಾಹಿತಿ ಇಲ್ಲ ಎಂದು ಹೇಳಿದರು.

ನಿಮ್ಮನ್ನು ಮತ್ತು ಮುಖ್ಯಮಂತ್ರಿ ಅವರನ್ನು ಹೈಕಮಾಂಡ್ ನಾಯಕರು ದೆಹಲಿಗೆ ಆಹ್ವಾನಿಸಿದ್ದಾರೆಯೇ ಎಂಬ ಪ್ರಶ್ನೆಗೆ, ನನಗೆ ಯಾವುದೇ ಕರೆ ಬಂದಿಲ್ಲ. ಆದರೆ, ಇಲಾಖೆಗೆ ಸಂಬಂಧಿಸಿದ ಕೆಲಸಗಳ ಮೇಲೆ ನಾನು ದೆಹಲಿಗೆ ಹೋಗಬೇಕಾಗಿದೆ ಎಂದು ತಿಳಿಸಿದರು.



### ಮಂತ್ರಿಮಂಡಲ ಮಾಡುವೆ ಎಂದಿಲ್ಲ

ನಿಮ್ಮ ಮಂತ್ರಿಮಂಡಲದಲ್ಲಿ ಹೊಸ ಶಾಸಕರು ಸೇರ್ಪಡೆ ಆಗಲಿದ್ದಾರಾ ಎಂಬ ಪ್ರಶ್ನೆಗೆ, ನಾನು ಮಂತ್ರಿಮಂಡಲ ಮಾಡುತ್ತೇನೆ ಎಂದು ಹೇಳಿಲ್ಲ. ಸಚಿವ ಸಂಪುಟ ವಿಸ್ತರಣೆ ಮಾಡುತ್ತೇನೆ ಎಂದು ಮುಖ್ಯಮಂತ್ರಿ ಹೇಳಿದ್ದಾರೆ. ಅವರು ಸಂಚಿವ ಸಂಪುಟ ವಿಸ್ತರಣೆ ಮಾಡುವ ಕಾರಣಕ್ಕೆ ಕೆಲವರು ಪತ್ರ ಬರೆದಿದ್ದಾರೆ. ದೆಹಲಿಗೆ ಹೋಗುತ್ತಾರೆ, ಹೊರಗಡೆ ಹೋಗುತ್ತಾರೆ. ಅವರಿಗೂ ಆಸೆ ಇರುತ್ತದೆ ಎಂದು ಡಿ.ಕೆ.ಶಿವಕುಮಾರ್ ವ್ಯಂಗ್ಯವಾಡಿದರು.

ಎಲ್ಲರಿಗೂ ಮಂತ್ರಿಯಾಗುವ ಆಸೆ ಇರುತ್ತದೆ. ಮೋದಿ ಅವರು ಶಾಸಕರಾಗದೇ ಮುಖ್ಯಮಂತ್ರಿ ಆಗಲಿಲ್ಲವೇ. ಶಾಸಕರು ಕೇಳುವುದರಲ್ಲಿ ತಪ್ಪೇನೂ ಇಲ್ಲ. ಆದರೆ 31 ಶಾಸಕರು ಹೈಕಮಾಂಡ್‌ಗೆ ಬರೆದಿರುವ ಪತ್ರ ತಲುಪಿಲ್ಲ ನನಗೆ ಎಂದು ತಿಳಿಸಿದರು. ಪುಟ 2ಕ್ಕೆ

ನೀವು ಕೆಪಿಸಿಸಿ ಅಧ್ಯಕ್ಷರಾಗಿದ್ದರೂ ಸಚಿವರ ಹೇಳಿಕೆಗಳ ಬಗ್ಗೆ ನೀವು ಮೌನವಾಗಿದ್ದೀರಿ ಎಂದು ಕೇಳಿದಾಗ, ಸಚಿವರು ಮತ್ತು ಶಾಸಕರನ್ನು ನಿಯಂತ್ರಣ ಮಾಡಬೇಕಿರುವುದು ಮುಖ್ಯಮಂತ್ರಿ, ಪಕ್ಷದ ವಿಚಾರವಾಗಿ ದೆಹಲಿಗೆ ಮಾಹಿತಿ ನೀಡುವ ಕೆಲಸವನ್ನು ನಾನು ಮಾಡುತ್ತಿದ್ದೇನೆ ಎಂದು ಶಿವಕುಮಾರ್ ತಿಳಿಸಿದರು.

ಸತೀಶ ಜಾರಕಿಹೊಳಿ ನಿಮ್ಮ ಜತೆ ಚರ್ಚೆ ಮಾಡಿದ್ದಾರಾ ಎಂಬ ಪ್ರಶ್ನೆಗೆ, ಜಾರಕಿಹೊಳಿ ಅವರು ಪಕ್ಷದ ಹಿರಿಯ ನಾಯಕರು. ನನ್ನ ಜತೆ ಕಾರ್ಯಾಧ್ಯಕ್ಷರಾಗಿ ಕೆಲಸ ಮಾಡಿದ್ದಾರೆ. ನಾವು ವಾರಕ್ಕೊಮ್ಮೆ ಮಾತನಾಡುತ್ತಿರುತ್ತೇವೆ. ನಾವು ಸಮಾನ ಮನಸ್ಕರು. ನಮ್ಮ ಪಕ್ಷವನ್ನು ಮತ್ತೆ ಅಧಿಕಾರಕ್ಕೆ ತರಲು ನಾವೆಲ್ಲ ಯೋಜನೆ ರೂಪಿಸುತ್ತಿದ್ದೇವೆ ಎಂದು ತಿಳಿಸಿದರು. ಪರಮೇಶ್ವರ ಅವರಿಗೆ ಮೊದಲು ಕೂಲಿ ಕೊಡಲಿ ಎಂಬ ಶಾಸಕ ಕೆ.ಎನ್. ರಾಜಣ್ಣ ಅವರ ಹೇಳಿಕೆ ಬಗ್ಗೆ ಕೇಳಿದಾಗ, ಅವರು ದೊಡ್ಡವರು ಎಂದಷ್ಟೇ ಪ್ರತಿಕ್ರಿಯಿಸಿದರು. ಪುಟ 2ಕ್ಕೆ


## ಹುಣಸೂರಿನಲ್ಲಿ 8 ಕೆಜಿ ಚಿನ್ನ ಕದ್ದು ನೇಪಾಳದಲ್ಲಿ ಮಾರಾಟ

**ಮೈಸೂರು:** ಹುಣಸೂರು ಪಟ್ಟಣದಲ್ಲಿ ಚಿನ್ನ ದಂಗಡಿಯಲ್ಲಿ ದರೋಡೆ ಮಾಡಿದ್ದ ಸುಮಾರು 10 ಕೋಟಿ ರೂ. ಮೌಲ್ಯದ ಚಿನ್ನವನ್ನು ದರೋ ಡೆಕೋರರು ನೇಪಾಳದಲ್ಲಿ ಮಾರಾಟ ಮಾಡಿ ರುವುದು ಬೆಳಕಿಗೆ ಬಂದಿದೆ.

ಹುಣಸೂರಿನಲ್ಲಿ 8 ಕೆಜಿ ಚಿನ್ನ ಕದ್ದವರು ಸಿಕ್ಕರೂ ಚಿನ್ನ ಮಾತ್ರ ಇನ್ನೂ ಸಿಕ್ಕಿಲ್ಲ. ಪ್ರಕರಣದ ಮಾಸ್ಟರ್ ಮೈಂಡ್ ಸೇರಿ ನಾಲ್ವರು ಆರೋಪಿಗಳ ಸೆರೆಯಾಗಿದೆ. ಸುಮಾರು 10 ಕೋಟಿ ಬೆಲೆಯ ಚಿನ್ನ ರಿಕವರಿಗೆ ಮೈಸೂರು ಜಿಲ್ಲಾ ಪೊಲೀಸರು ಎಳ್ಳು ನೀರು ಬಿಡುವ ಸಾಧ್ಯತೆ ಇದೆ. ಈಗ ಇದು ಪೊಲೀಸರಿಗೆ ತಲೆನೋವಾಗಿದೆ.

ಅಂತರರಾಜ್ಯ ಕಳ್ಳರಿಂದ ಕದ್ದ ಚಿನ್ನ ಮಾರಾಟ ಆಗಿದೆ. ಅಂತರರಾಷ್ಟ್ರ ಮಟ್ಟದಲ್ಲಿ. ಹೈಟೆಕ್ ತಂತ್ರಜ್ಞಾನದ ಜೊತೆಗೆ ನಡೆದಿದ್ದ ದರೋಡೆ ಇದಾಗಿದೆ. ದರೋಡೆಗೆ ಮಾತ್ರವಲ್ಲ, ಚಿನ್ನ ವಿಲೇವಾರಿಗೂ ಮಾಸ್ಟರ್ ಪ್ಲ್ಯಾನ್ ಮಾಡಿದ್ದಾರೆ. ಹುಣಸೂರಿನಲ್ಲಿ ಕದ್ದ ಚಿನ್ನವನ್ನು ನೇಪಾಳದಲ್ಲಿ ಮಾರಾಟ ಮಾಡಲಾಗಿದೆ. ಈ ಸಂಬಂಧ ಪೊಲೀಸರಿಗೆ ಮಾಹಿತಿ ಸಿಕ್ಕರೂ ನೇಪಾಳಕ್ಕೆ ಹೋಗಿ ರಿಕವರಿ ಮಾಡಲು ಆಗದ ಪರಿಸ್ಥಿತಿ ಇದೆ.

ಚಿನ್ನ ಕದ್ದು ಬೇರೆ ದೇಶಕ್ಕೆ ಚಿನ್ನ ವಿಲೇವಾರಿ ಮಾಡಲಾಗಿದೆ. ಹೀಗಾಗಿ, ಪುಟ 2ಕ್ಕೆ




# ಸಿಲ್ಕ್ ಪ್ಯಾಕ್ಟರಿ ಜಾಗ ಕೊಡಲ್ಲ


## ಸರ್ಕಾರಕ್ಕೆ ಸಂಸದ ಯದುವೀರ್ ಒಡೆಯರ್ ಎಚ್ಚರಿಕೆ



**ಮೈಸೂರು:** ತಿ.ನರಸೀಪುರದ ಸಿಲ್ಕ್ ಪ್ಯಾಕ್ಟರಿ ಜಾಗವನ್ನು ಕ್ರೀಡಾಂಗಣಕ್ಕೆ ನೀಡಲು ಸಾಧ್ಯವಿಲ್ಲ. ಯಾವುದೇ ಕಾರಣಕ್ಕೂ ಮಹಾರಾಜರ ಕಾಲದಲ್ಲಿ ನಿರ್ಮಿಸಿರುವ ಐತಿಹಾಸಿಕ ಸಿಲ್ಕ್ ಪ್ಯಾಕ್ಟರಿಯನ್ನು ಮುಚ್ಚಲು ಬಿಡು ವುದಿಲ್ಲ ಎಂದು ಸಂಸದ ಯದು ವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಸರ್ಕಾರಕ್ಕೆ ಎಚ್ಚ ರಿಕೆ ನೀಡಿದರು.



ಶಿಲ್ಕ್ ಪ್ಯಾಕ್ಟರಿ ಉಳಿ ವಿಗೆ ಆಗ್ರಹಿಸಿ ಸಿಬ್ಬಂದಿ ನಡೆಸುತ್ತಿರುವ ಪ್ರತಿಭಟನೆ ಸ್ಥಳಕ್ಕೆ ಭೇಟಿ ನೀಡಿ ಮಾತನಾಡಿದ ಅವರು, 1912ರಲ್ಲಿ ಮೈಸೂರು ಸಂಸ್ಥಾನದ ಆಡಳಿತಾವಧಿ ಪುಟ 2ಕ್ಕೆ



## ಇನ್ಮುಂದೆ ಕೇರಳಂ

**ನವದೆಹಲಿ:** ಕೇರಳ ಸರ್ಕಾರದ ಮನವಿಯಂತೆ ರಾಜ್ಯದ ಹೆಸರನ್ನು 'ಕೇರಳಂ' ಎಂದು ಬದಲಾಯಿಸಲು ಕೇಂದ್ರ ಸಚಿವ ಸಂಪುಟ ಅನುಮೋದನೆ ನೀಡಿದೆ ಎಂದು ಮೂಲಗಳು ತಿಳಿಸಿವೆ.

ಈ ವರ್ಷದ ಏಪ್ರಿಲ್–ಮೇ ತಿಂಗಳಲ್ಲಿ ಕೇರಳದಲ್ಲಿ ಚುನಾವಣೆಗಳು ನಡೆಯಲಿವೆ. ಅದಕ್ಕೂ ಮುನ್ನ ಈ ಬೆಳವಣಿಗೆಯಾಗಿದೆ. 2023ರ ಆಗ ಸ್ಟ್‌ನಲ್ಲಿ ರಾಜ್ಯದ ಹೆಸರನ್ನು 'ಕೇರಳಂ' ಎಂದು ಕೇಂದ್ರ ಸರ್ಕಾರವು ಬದಲಾ ಯಿಸಬೇಕು ಎಂದು ಒತ್ತಾಯಿಸಿ, ಕೇರಳ ವಿಧಾನಸಭೆಯಲ್ಲಿ ಬಹುಮತದ ನಿರ್ಣಯ ಕೈಗೊಳ್ಳಲಾಗಿತ್ತು. ಕೇಂದ್ರ ಗೃಹ ಸಚಿವಾಲಯವು ಕೆಲವು ತಾಂತ್ರಿಕ ಬದಲಾವಣೆಗಳನ್ನು ಸೂಚಿಸಿದ್ದ ಕಾರಣ, 2024ರ ಜುಲೈ 24ರಂದು ಎರಡನೇ ಬಾರಿ ನಿರ್ಣಯವನ್ನು ಮಾಡಲಾಗಿತ್ತು.

ಪ್ರಧಾನ ಮಂತ್ರಿ ಕಾರ್ಯಾಲಯದ (ಪಿಎಂಒ) ಹೊಸ ಕಟ್ಟಡವಾದ ಸೇವಾತೀರ್ಥದಲ್ಲಿ ಮಂಗಳವಾರ ನಡೆದ ಮೊದಲ

## ಮಹಾರಾಣಿ ಕಲಾ ಕಾಲೇಜಿಗೆ 10 ಹೊಸ ಕೊಠಡಿ ಶಾಸಕರಿಂದ ಹಸ್ತಾಂತರ

**ಮೈಸೂರು:** ಮಹಾರಾಣಿ ಮಹಿಳಾ ಕಲಾ ಕಾಲೇಜಿನ 10 ನೂತನ ಕೊಠಡಿಗಳನ್ನು ಶಾಸಕ ಕೆ.ಹರೀಶಗೌಡ ಅವರು ಕಾಲೇಜಿಗೆ ಹಸ್ತಾಂತರಿಸಿದರು.

ಮಹಾನಗರ ಪಾಲಿಕೆ ವತಿಯಿಂದ ಕಾಲೇಜಿನ ದಿವ್ಯಾಂಗ ವಿದ್ಯಾರ್ಥಿನಿಯರಿಗಾಗಿ ವಿಕಲಚೇತನರ ಸಮುದಾಯ ಕಾರ್ಯಕ್ರಮ ಶೇ.5ರ ಅನುದಾನದಡಿಯಲ್ಲಿ 23 ಕಂಪ್ಯೂಟರ್, ಟೇಬಲ್, ಕುರ್ಚಿಗಳನ್ನು ನೀಡಲು ಬಾಕಿ ಇದೆ. ಅವುಗಳನ್ನು ಕೂಡಲೇ ನೀಡಲು ಕ್ರಮವಹಿಸುವಂತೆ ವಿದ್ಯಾರ್ಥಿನಿಯರ ಕೋರಿದ್ದರು. ಈ ಹಿನ್ನೆಲೆಯಲ್ಲಿ ಮಹಾರಾಣಿ ಮಹಿಳಾ ಕಲಾ ಕಾಲೇಜಿಗಾಗಿ 14 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸುತ್ತಿರುವ ಹೊಸ ಕಟ್ಟಡದಲ್ಲಿ 24 ಕೊಠಡಿಗಳ ಪೈಕಿ ಈಗಾಗಲಿ ಸಂಪೂರ್ಣಗೊಂಡಿರುವ



10 ಕೊಠಡಿಗಳನ್ನು ಕಾಲೇಜಿನ ಪ್ರಾಂಶುಪಾಲೆ ಡಾ.ಅನಿತಾಗೆ ಕರ್ನಾಟಕ ಹೌಸಿಂಗ್ ಬೋರ್ಡ್ ಇಂಜಿನಿಯರ್‌ಗಳ ಮೂಲಕ ಹಸ್ತಾಂತರಿಸಿದರು.

ಮಹಾನಗರ ಪಾಲಿಕೆ ವತಿಯಿಂದ ವಿಕಲಚೇತನರ ಸಮುದಾಯ ಕಾರ್ಯಕ್ರಮ ಶೇ.5ರ ಅನುದಾನದಡಿಯಲ್ಲಿ ಕಂಪ್ಯೂಟರ್, ಪುಟ 2ಕ್ಕೆ

# ಧಾರ್ಮಿಕ ಭಾವನೆಗಳ ಚೇಷ್ಟೆ ಬೇಡ

## ಸೂಪರ್ ಸ್ಟಾರ್ ಆದರೂ ನಾಲಿಗೆ ಮೇಲೆ ಹಿಡಿತ ಅಗತ್ಯ | ರಣವೀರ್‌ಗೆ ಹೈಕೋರ್ಟ್ ಚಾಟಿ

**ಬೆಂಗಳೂರು:** ಕಾಂತಾರ ಚಾಪ್ಟರ್–1 ಚಿತ್ರದ ದೈವಪಾತ್ರಗಳನ್ನು ಅಣಕಿಸಿದ ಆರೋಪ ಎದುರಿಸುತ್ತಿರುವ ಬಾಲಿವುಡ್ ನಟ ರಣವೀರ್ ಸಿಂಗ್ ತನಿಖೆಗೆ ಸಹಕರಿಸಬೇಕು ಮತ್ತು ತನಿಖೆಗೆ ಸಹಕರಿಸಿದರೆ ಅವರ ವಿರುದ್ಧ ಯಾವುದೇ ಆತುರದ ಕ್ರಮ ಕೈಗೊಳ್ಳಬಾರದು ಎಂದು ಹೈಕೋರ್ಟ್ ಪ್ರಾಸಿಕ್ಯೂಷನ್ ಗೆ ಆದೇಶಿಸಿದೆ.

ನನ್ನ ವಿರುದ್ಧ ನಗರದ ಮ್ಯಾಜಿಸ್ಟ್ರೇಟ್ ಕೋರ್ಟ್‌ನಲ್ಲಿ ದಾಖಲಾಗಿರುವ ಖಾಸಗಿ ದೂರು ಮತ್ತು ಹೈಗ್ರೌಂಡ್ಸ್ ಠಾಣೆ ಪೊಲೀಸರು ದಾಖಲಿಸಿರುವ ಎಫ್‌ಐಆರ್ ರದ್ದುಪಡಿಸಬೇಕು ಎಂದು ನಟ ರಣವೀರ್ ಸಿಂಗ್ ಸಲ್ಲಿಸಿರುವ ಕ್ರಿಮಿನಲ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು. ಅರ್ಜಿಗೆ ಸಂಬಂಧಿಸಿದಂತೆ



ಆಕ್ಷೇಪಣೆ ಸಲ್ಲಿಸಲು ಪ್ರಾಸಿಕ್ಯೂಷನ್ ಗೆ ನಿರ್ದೇಶಿಸಿದ ನ್ಯಾಯಪೀಠ ವಿಚಾರಣೆ ಮುಂದೂಡಿತು.

ರಣವೀರ್ ಸಿಂಗ್ ದೊಡ್ಡ ನಟ ಇರಬಹುದು. ಆದರೆ, ಮತ್ತೊಬ್ಬರ ಧಾರ್ಮಿಕ ಭಾವನೆಗಳನ್ನು ಚೇಷ್ಟೆ ಮಾಡುವ ಮೂಲಕ ಅಣಕಿಸಿ ಸವಾರಿ ಮಾಡುವುದು ಸಲ್ಲ. ಸೂಪರ್ ಸ್ಟಾರ್ ಆದರೇನು? ನಾಲಿಗೆ ಮೇಲೆ ಹಿಡಿತ ಇರಬೇಕು ಎಂದು ನ್ಯಾಯಮೂರ್ತಿ ನಾಗಪ್ರಸನ್ನ ಅವರು ರಣವೀರ್ ನಡೆಯನ್ನು ತೀವ್ರ ತರಾಟೆಗೆ ತೆಗೆದುಕೊಂಡರು. ಪುಟ 2ಕ್ಕೆ

### ಪೆಂಜುರ್ಲಿ ದೈವ ಹಾಸ್ಯ ಮಾಡಿದ್ದ ರಣವೀರ್ ಸಿಂಗ್

ಗೋವಾದಲ್ಲಿ ಕಳೆದ ವರ್ಷ ನಡೆದ ಭಾರತೀಯ ಅಂತರಾಷ್ಟ್ರೀಯ ಚಲನಚಿತ್ರೋತ್ಸವ ಸಮಾರಂಭದಲ್ಲಿ ರಣವೀರ್ ಸಿಂಗ್, ಕಾಂತಾರ ಚಾಪ್ಟರ್–1 ಕುರಿತು ಮಾತನಾಡಿದ್ದರು. ಕರಾವಳಿ ಕರ್ನಾಟಕದ ಪಂಜುರ್ಲಿ, ಗುಳಿಗ ದೈವಗಳ ದೈವೀಕ ಅಭಿವ್ಯಕ್ತಿಯನ್ನು ಒರಟು, ಹಾಸ್ಯಮಯ ಮತ್ತು ಅವಹೇಳನಕಾರಿ ರೀತಿಯಲ್ಲಿ ಅನುಕರಣೆ ಮಾಡಿದ್ದಾರೆ. ಚಾಮುಂಡಿ ದೈವವನ್ನು ಹೆಣ್ಣು ದೆವ್ವ ಎಂದು ಕರೆದು ಅಪಮಾನ ಮಾಡಿದ್ದಾರೆ. ಈ ಮೂಲಕ ಲಕ್ಷಾಂತರ ಭಕ್ತರ ಧಾರ್ಮಿಕ ಮನೋಭಾವನೆಗೆ ಧಕ್ಕೆ ಪುಟ 2ಕ್ಕೆ

# ಛಲವಾದಿ ತೆಗಳುಭಟರ ಪಡೆ ಅಧ್ಯಕ್ಷ!

## ತೆಗಳುವುದೇ ಕಾಯಕದ ನಾರಾಯಣಸ್ವಾಮಿ | ಪ್ರಿಯಾಂಕ್ ಖರ್ಗೆ ವ್ಯಂಗ್ಯ

**ಬೆಂಗಳೂರು:** ಛಲವಾದಿ ನಾರಾಯಣಸ್ವಾಮಿ ತೆಗಳುಭಟರ ಪಡೆ ಅಧ್ಯಕ್ಷರಾಗಿ, ತೆಗಳುವುದನ್ನೇ ಕಾಯಕ ಮಾಡಿಕೊಂಡಿದ್ದಾರೆ ಎಂದು ಸಚಿವ ಪ್ರಿಯಾಂಕ್ ಖರ್ಗೆ ವ್ಯಂಗ್ಯ ಮಾಡಿದ್ದಾರೆ

ಸಚಿವ ಪ್ರಿಯಾಂಕ್ ಖರ್ಗೆಗೆ ದಲಿತತ್ವ ಇಲ್ಲ. ಬಾಬಾ ಸಾಹೇಬ್ ಅಂಬೇಡ್ಕರ್ ಹೆಸರು ಹೇಳುತ್ತಾರೆಯೇ ಹೊರತು ದಲಿತತ್ವ ಅವರ ಕುಟುಂಬದಲ್ಲಿ ಇಲ್ಲ ಎಂದು ವಿಧಾನಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಹೇಳಿಕೆಗೆ ಪ್ರಿಯಾಂಕ್ ಖರ್ಗೆ ತಿರುಗೇಟು ನೀಡಿದ್ದಾರೆ.

ಸೂರ್ಯ, ಚಂದ್ರ ಮತ್ತು ಸತ್ಯ ಈ ಮೂರು ವಿಷಯಗಳನ್ನು ಯಾರೂ ಸಹ ದೀರ್ಘಕಾಲ ಮುಚ್ಚಿಡಲು ಸಾಧ್ಯವಿಲ್ಲ. ಬುದ್ಧನ ಈ ಮಾತು ಛಲವಾದಿ ನಾರಾಯಣಸ್ವಾಮಿ ವಿಷಯದಲ್ಲಿ ಹೆಚ್ಚು ಪ್ರಸ್ತುತ ಎನಿಸಿಕೊಳ್ಳುತ್ತದೆ. ಅವರು ನನ್ನ ಬಗ್ಗೆ ಮಾತನಾಡುವುದನ್ನು ನಿಲ್ಲಿಸಿದ ದಿನವೇ ಅವರ ರಾಜಕೀಯ ಜೀವನ ಅಂತ್ಯವಾಗುತ್ತದೆ,




ಇದೇ ಆ ಸತ್ಯ ಎಂದು ಟ್ವೀಟ್ ಮಾಡಿ ತಿವಿದಿದ್ದಾರೆ.

ದಲಿತತ್ವವನ್ನು ನಾರಾಯಣಸ್ವಾಮಿ ಸಿಂಪಥಿ ಕಾರ್ಡ್ ಆಗಿ ಬಳಸಿಕೊಂಡರೆ. ನಾವು ದಲಿತತ್ವವನ್ನು ಸ್ವಾಭಿಮಾನದ ಹೋರಾಟವಾಗಿ ಕಾಣುತ್ತೇವೆ. ಬಾಬಾ ಸಾಹೇಬರು ಇದನ್ನೇ ನಮಗೆ ಹೇಳಿಕೊಟ್ಟಿದ್ದು. ನಾನು ಶೋಷಣೆಯನ್ನು ಅನುಭವಿಸಿದ್ದೇನೆ ಎನ್ನುವ ನಾರಾಯಣಸ್ವಾಮಿ ಅವರು ಇಂದು ಆ ಶೋಷಣೆಗೆ ಕಾರಣವಾದ ಸಿದ್ಧಾಂತದವರ ಜೊತೆಯೇ ನಿಂತಿರುವುದು ಅವರ ಡೋಂಗಿತನವನ್ನು ಸಾರುತ್ತದೆ ಪುಟ 2ಕ್ಕೆ

### ಚಡ್ಡಿ ಹೊತ್ತು ಹುದ್ದೆ ಪಡೆದಿಲ್ಲ!

ನಾರಾಯಣಸ್ವಾಮಿಯವರೇ, ನಾನು ಚಡ್ಡಿ ಹೊತ್ತು ಹುದ್ದೆ ಪಡೆಯಲಿಲ್ಲ. ನಾನು ಎಲೆಕ್ಟೆಡ್ ರಾಜಕಾರಣಿ, ನೀವು ಸದ್ಯಕ್ಕೆ ಸೆಲೆಕ್ಟೆಡ್ ರಾಜಕಾರಿಣಿ. ಹೆಬ್ಬಾಳ ಕ್ಷೇತ್ರದಲ್ಲಿ ಜನರಿಂದ ತಿರಸ್ಕೃತರಾಗಿದ್ದ ತಾವು ಒಮ್ಮೆಯಾದರೂ ಎಲೆಕ್ಟೆಡ್ ರಾಜಕಾರಿಣಿಯಾಗಿ ನಂತರ ನನ್ನ ಬಗ್ಗೆ ಮಾತನಾಡಿ ಎಂದು ಪ್ರಿಯಾಂಕ್ ಖರ್ಗೆ ಪುಟ 2ಕ್ಕೆ

# ಕುತೂಹಲ, ಕ್ರಿಯಾಶೀಲತೆಯೇ ವಿಜ್ಞಾನದ ಜೀವಾಳ



ಮೈಸೂರು: ಕುತೂಹಲ ಮತ್ತು ಕ್ರಿಯಾಶೀಲತೆ ವಿಜ್ಞಾನದ ಜೀವಾಳ ಎಂದು ಜೆಎಸ್ ಎಸ್ ಮಹಾ ವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ.ಸಿ.ಜಿ.ಬೆಟಸೂರಮಠ ಅಭಿಪ್ರಾಯಪಟ್ಟರು.

ಸರಸ್ವತಿಪುರಂನ ಜೆಎಸ್ಎಸ್ ಮಹಿಳಾ ಕಾಲೇಜಿನ ನವಜ್ಯೋತಿ ಸಭಾಂಗಣದಲ್ಲಿ ಸೈನ್ಸ್ ರೋಸ್ಟ್ರಮ್ ವತಿಯಿಂದ ಎರಡು ದಿನಗಳ ರಾಜ್ಯಮಟ್ಟದ 'ವಿಸ್ತಾರ 2026' ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಕುತೂಹಲ ಮತ್ತು ಕ್ರಿಯಾಶೀಲತೆ ವಿಜ್ಞಾನದ ಜೀವಾಳವಾಗಿದೆ. ವಿಜ್ಞಾನದಲ್ಲಿ ಆವಿಷ್ಕಾರಗಳು ಸರಳ ಪ್ರಶ್ನೆಯಿಂದ ಆರಂಭವಾಗುತ್ತವೆ. ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ನಿರಂತರ ಅಧ್ಯಯನಶೀಲತೆಯನ್ನು ರೂಢಿಸಿಕೊಂಡಾಗ ಮಾತ್ರ ಯಶಸ್ಸು ದೊರೆಯುತ್ತದೆ ಎಂದರು. ವಿದ್ಯಾರ್ಥಿಗಳು ಶೋಧನಾ ಮನೋಭಾವ, ಸಂವಹನ ಕೌಶಲ, ಶಿಸ್ತು, ಸಮಯಪಾಲನೆ ಮತ್ತು ನಾಯಕತ್ವ ಗುಣಗಳನ್ನು ಬೆಳೆಸಿಕೊಂಡಾಗ ಪ್ರಗತಿ ಹೊಂದಬಹುದು ಎಂದರು.

ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಮೈಸೂರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ್ ಬಾಲದಂಡಿ ಮಾತನಾಡಿ, ನಮ್ಮ ದೈನಂದಿನ ಬದುಕಿನ ಕ್ರಿಯಾ ಚಟುವಟಿಕೆಗಳಲ್ಲಿ ವೈಜ್ಞಾನಿಕ ದೃಷ್ಟಿಯ ಅಗತ್ಯವಿದೆ. ಇಂದಿನ ವರ್ತಮಾನದಲ್ಲಿ ಬದುಕುವಾಗ ನೀವು ಕಲಿತಿರುವ ಕೌಶಲಗಳು ಮುಖ್ಯ ಪಾತ್ರವಹಿಸುತ್ತವೆ ಎಂದು ತಿಳಿಸಿದರು. ಪ್ರತಿ ಯೊಬ್ಬರಲ್ಲೂ ಸಾಮರ್ಥ್ಯವಿರುತ್ತದೆ. ಸತತ ಪ್ರಯತ್ನದಿಂದ ಯಶಸ್ಸು ಸಾಧಿಸುವುದು ಸಾಧ್ಯ ಎಂದು ಅಭಿಪ್ರಾಯಪಟ್ಟರು.

▶▶ ಡಾ.ಸಿ.ಜಿ.ಬೆಟಸೂರಮಠ ಅಭಿಮತ

ಬೆಂಗಳೂರಿನ ಪ್ರಾದೇಶಿಕ ಕಛೇರಿಯ ವ್ಯವಸ್ಥಾಪಕಿ ವಿ.ಎಸ್.ತನುಜ ಮಾತನಾಡಿ, ನಾನು ಈ ಕಾಲೇಜಿನ ವಿದ್ಯಾರ್ಥಿನಿ ಎನ್ನಲು ಹೆಮ್ಮೆಯಾಗುತ್ತಿದೆ ಜೆಎಸ್ಎಸ್ ಸಂಸ್ಥೆ ಬಡವರಿಗೆ ಮತ್ತು ಮಧ್ಯಮ ವರ್ಗದ ಜನರಿಗೆ ಉತ್ತಮ ಶಿಕ್ಷಣ ನೀಡುವಲ್ಲಿ ಪ್ರಧಾನ ಪಾತ್ರವಿದೆ. ವಿದ್ಯಾರ್ಥಿಗಳು ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಶ್ರದ್ಧೆಯಿಂದ ತಯಾರಿ ನಡೆಸಿ. ಉನ್ನತ ಹುದ್ದೆಗಳನ್ನು ಅಲಂಕರಿಸಿ ಎಂದರು.

ಕಾರ್ಯಕ್ರಮದಲ್ಲಿ ಅಧ್ಯಕ್ಷತೆವಹಿಸಿ ಮೈಸೂರು ಕಾಲೇಜು ಶಿಕ್ಷಣ ಇಲಾಖೆಯ ಪ್ರಾದೇಶಿಕ ಜಂಟಿ ನಿರ್ದೇಶಕ ಡಾ.ಡಿ.ಎಸ್.ಪ್ರತಿಮಾ ಮಾತನಾಡಿದರು. ಪ್ರಾಂಶುಪಾಲ ಡಾ.ರೇಚಣ್ಣ, ಸಂಚಾಲಕ ಡಿ.ಬಿ. ಯಶವಂತ್, ಪಿ.ಆರ್. ರಾಜೇಶ್ವರಿ, ವಿದ್ಯಾರ್ಥಿಗಳಾದ ಧಾತ್ರಿ, ಎಸ್.ಅಪರಂಜಿ, ಆರ್.ಪಿ.ಸೃಷ್ಟಿ, ಡಿ.ವೈ.ತೃಪ್ತಿ, ವಂದನ ವಿವೇಕ್ ಇದ್ದರು.

# ಒಳ ಮೀಸಲು ಒಡಕು ಮೂಡಿಸಲು ಯತ್ನ



ಮೈಸೂರು: ಒಳಮೀಸಲಾತಿ ವಿಚಾರ ಮುಂದಿಟ್ಟು ಬಲಗೈ ಸಮುದಾಯದಲ್ಲಿ ಒಡಕು ಮೂಡಿಸಲು ಬಿಜೆಪಿಯ ಎನ್.ಮಹೇಶ್ ಹಾಗೂ ಛಲವಾದಿ ನಾರಾಯಣ ಸ್ವಾಮಿ ಮೂಲಕ ಆರ್‌ಎಸ್‌ಎಸ್ ಪ್ರಯತ್ನಿಸುತ್ತಿದೆ ಎಂದು ಮಾಜಿ ಮೇಯರ್ ಪುರುಷೋತ್ತಮ ದೂರಿದರು.

ನಗರದಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಎಸ್‌ಸಿ ಸಮುದಾಯದ ಒಳಮೀಸಲಾತಿ ಜಾರಿಯಲ್ಲಿ ಕಾಂಗ್ರೆಸ್ ಸರ್ಕಾರ ಎಲ್ಲ ಸಲಹೆಗಳಿಗೆ ಸ್ಪಂದಿಸುತ್ತಿದೆ. ಇದಕ್ಕೆ ಸಂಬಂಧಿಸಿದಂತೆ ನ್ಯಾಯಾಲಯದ ತೀರ್ಪು ಬಾಕಿಯಿದೆ. ಈ ಹಂತದಲ್ಲಿ ಸಮುದಾಯದ ದಿಕ್ಕು ತಪ್ಪಿಸುವುದು ಸೂಕ್ತವಲ್ಲ ಎಂದರು.

ಸಮಸ್ಯೆಯಿದ್ದರೆ ಸಮುದಾಯದ ಎಲ್ಲರೂ ಚರ್ಚಿಸಿ ಒಮ್ಮತದ ಪರಿಹಾರ ಕಂಡುಕೊಳ್ಳೋಣ. ಅದನ್ನು ಬಿಟ್ಟು ರಾಜಕೀಯ ಉದ್ದೇಶದಿಂದ ಒಡಕಿನ ಮಾತಾಡಬಾರದು. ಎಡಗೈ ಸಮುದಾಯದ ಹಕ್ಕುಗಳ ಬಗ್ಗೆ ನಮಗೆ ಯಾವುದೇ ತಕರಾರು ಇಲ್ಲ. ಅಲೆಮಾರಿ ಸಮುದಾಯಕ್ಕೂ ನ್ಯಾಯ ದೊರಕಬೇಕಿದೆ. ನಮ್ಮ ಯುವಜನರು ಈ ಬಗ್ಗೆ ಅರಿವು ಹೊಂದಬೇಕು. ಆರ್‌ಎಸ್‌ಎಸ್ ಕುತಂತ್ರಕ್ಕೆ ಸಿಲುಕಬಾರದು ಎಂದರು.

ಸುದ್ದಿಗೋಷ್ಠಿಯಲ್ಲಿ ಕಾಂಗ್ರೆಸ್ ವಕ್ತಾರ ಎಸ್. ರಾಜೇಶ್, ಪ್ರೊ.ಟಿ.ಎಂ.ಮಹೇಶ್, ಸಮುದಾಯದ ಪ್ರಮುಖರಾದ ಚಿಕ್ಕಂದಾನಿ, ಪುಟ್ಟರಾಜು, ಸುನೀಲ್, ನಾರಾಯಣ, ಮುರುಡಹಳ್ಳಿ ಮಂಜು, ಮಹೇಶ್, ಶಿವಶಂಕರ್, ರಾಮು ಹಾಜರಿದ್ದರು.

**ಮೊದಲ ಪುಟದಿಂದ**

## ಮ್ಯುಟೇಶನ್ ವ್ಯವಸ್ಥೆ ಜಾರಿ

ಇದ್ದಲ್ಲಿ ಅಥವಾ ಅನುಮೋದನೆ ನೀಡಬೇಕಾದಲ್ಲಿ, ರಾಜಸ್ವ ನಿರೀಕ್ಷಕರು ತಾಲ್ಲೂಕು ಕಚೇರಿಗಳಿಗೆ ಬಂದು ಸಲ್ಲಿಸಬೇಕಾಗಿತ್ತು. ಈಗ ರಾಜಸ್ವ ನಿರೀಕ್ಷರಿಗೆ ಲಾಗಿನ್ ನೀಡಲಾಗಿದೆ. ಯಾವುದೇ ಸ್ಥಳದಿಂದ ಆಕ್ಷೇಪಣೆ ಸಲ್ಲಿಸಲು ತಂತ್ರಾಂಶದಲ್ಲಿ ಅವಕಾಶ ನೀಡಲಾಗಿದೆ ಎಂದು ತಿಳಿಸಿದರು.

## ಚಡ್ಡಿ ಹೊತ್ತು ಹುದ್ದೆ ಪಡೆದಿಲ್ಲ!

ತಿರುಗೇಟು ನೀಡಿದ್ದಾರೆ.ಕಾಂಗ್ರೆಸ್ ಪಕ್ಷ ನಿಮ್ಮನ್ನು ನಾಯಕನನ್ನಾಗಿ ಬೆಳೆಸಿದ್ದಕ್ಕಾಗಿಯೇ ನಿಮ್ಮನ್ನು ಬಿಜೆಪಿ ಕರೆದುಕೊಂಡಿರುವುದು. ನಿಮ್ಮನ್ನು ಜೀರೋದಿಂದ ಹೀರೋ ಮಾಡಿದ್ದು ಕಾಂಗ್ರೆಸ್ ಪಕ್ಷ, ಹೀರೋ ಆದಮೇಲೆಯೇ ಬಿಜೆಪಿ ನಿಮ್ಮನ್ನು ಕರೆದುಕೊಂಡಿದ್ದೇ ಹೊರತು ಬಿಜೆಪಿ ನಿಮ್ಮನ್ನು ಜೀರೋದಿಂದ ಬೆಳೆಸಿಲ್ಲ ಎಂದು ತಿರುಗೇಟು ನೀಡಿದರು.

## ಧಾರ್ಮಿಕ ಭಾವನೆಗಳ ಚೇಷ್ಟೆ ಬೇಡ

ರಣವೀರ್ ಪರ ಪದಾಂಕಿತ ಹಿರಿಯ ವಕೀಲ ಸಜನ್ ಪೂವಯ್ಯ ಮತ್ತು ಪ್ರಾಸಿಕ್ಯೂಷನ್ ಪರ ರಾಜ್ಯ ಹೆಚ್ಚುವರಿ ಪ್ರಾಸಿಕ್ಯೂಟರ್ ಬಿ.ಎನ್. ಜಗದೀಶ್ ವಾದ ಮಂಡಿಸಿದರು.

## ತೆಗಳುಭಟರ ಪಡೆ ಅಧ್ಯಕ್ಷ!

ಎಂದು ಕಿಡಿಕಾರಿದ್ದಾರೆ. ಅಂದಹಾಗೆ, ನಿಮ್ಮ ರಾಜೀನಾಮೆ ಮತ್ತು ರಾಜಕೀಯ ನಿವೃತ್ತಿಯ ಪ್ರತಿಜ್ಞೆಯೊಂದು ಕಾರ್ಯಗತವಾಗದೆ ಉಳಿದುಕೊಂಡಿದೆ, ಆಡಿದ ಮಾತನ್ನು ಉಳಿಸಿಕೊಳ್ಳುವುದೇ ನಿಜವಾದ ದಲಿತತ್ವ, ರಾಜೀನಾಮೆ ಕೊಟ್ಟು ನಿಮ್ಮ ದಲಿತತ್ವವನ್ನು ಉಳಿಸಿಕೊಳ್ಳುವುದು ಯಾವಾಗ? ಈಗಾಗಲೇ ತುಂಬಾ ತಡವಾಗಿದೆ. ರಾಜೀನಾಮೆ ಮಾತ್ರ ಕೊಡಿ ಸಾಕು, ರಾಜಕೀಯ ನಿವೃತ್ತಿ ಘೋಷಿಸಬೇಕಿಲ್ಲ, ನನ್ನ ಬಗ್ಗೆ ಮಾತನಾಡುವುದನ್ನು ನಿಲ್ಲಿಸಿದರೆ ಸಾಕು ರಾಜಕೀಯ ನಿವೃತ್ತಿಯು ನಿಮಗೆ ಅನಿವಾರ್ಯವಾಗುತ್ತದೆ ಎಂದು ವ್ಯಂಗ್ಯವಾಡಿದ್ದಾರೆ.

## ಪೆಂಜುರ್ಲಿ ದೈವ ಹಾಸ್ಯ ಮಾಡಿದ್ದ ರಣವೀರ್ ಸಿಂಗ್

ತಂದಿದ್ದಾರೆ. ಸಮಾಜದಲ್ಲಿ ವಿಭಿನ್ನ ಧಾರ್ಮಿಕ ಗುಂಪುಗಳ ನಡುವೆ ದ್ವೇಷ ಪ್ರಚೋದಿಸಿದ್ದಾರೆ. ಹಾಗಾಗಿ, ರಣವೀರ್ ಸಿಂಗ್ ವಿರುದ್ಧ ಸೂಕ್ತ ಕಾನೂನು ಕ್ರಮ ಜರುಗಿಸಬೇಕು ಎಂದು ನಗರದ ವಕೀಲ ಪ್ರಶಾಂತ್ ಮೆಥಲ್ 1ನೇ ಹೆಚ್ಚುವರಿ ಸಿಜೆಎಂ ನ್ಯಾಯಾಲಯದಲ್ಲಿ ಖಾಸಗಿ ದೂರು ದಾಖಲಿಸಿದ್ದರು. ದೂರಿನ ವಿಚಾರಣೆ ನಡೆಸಿದ್ದ ಸಿಜೆಎಂ ನ್ಯಾಯಾಲಯ ತನಿಖೆ ನಡೆಸುವಂತೆ 2026ರ ಜನವರಿ 23ರಂದು ಪೊಲೀಸರಿಗೆ ನಿರ್ದೇಶಿಸಿತ್ತು. ಹೈಗ್ರೌಂಡ್ಸ್ ಠಾಣಾ ಪೊಲೀಸರು, ಭಾರತೀಯ ನ್ಯಾಯ ಸಂಹಿತಾ 2023ರ (ಬಿಎನ್‌ಎಸ್) ಕಲಂ 196, 299 ಮತ್ತು 302ರ ಅಡಿಯಲ್ಲಿ ಎಫ್‌ಐಆರ್ ದಾಖಲಿಸಿದ್ದಾರೆ. ವಿಚಾರಣೆಗೆ ಹಾಜರಾಗಲು ರಣವೀರ್ ಸಿಂಗ್ ಅವರಿಗೆ ನೋಟಿಸ್ ಜಾರಿಗೊಳಿಸಲಾಗಿದೆ.

## ಮಹಾರಾಣಿ ಕಲಾ ಕಾಲೇಜಿಗೆ 10 ಹೊಸ ಕೊಠಡಿ ಹಸ್ತಾಂತರ

ಟೇಬಲ್, ಚೇರ್ ಗಳನ್ನು ಪಾಲಿಕೆಯ ಎಡಿಸಿ ಕುಸುಮಾಕುಮಾರಿ ಸಮಕ್ಷಮದಲ್ಲಿ ಕಾಲೇಜಿನ ಪ್ರಾಂಶುಪಾಲರಿಗೆ ಹಸ್ತಾಂತರಿಸಿದರು. ಕರ್ನಾಟಕ ಹೌಸಿಂಗ್ ಬೋರ್ಡ್ ಸಹಾಯಕ ಕಾರ್ಯಪಾಲಕ ಅಭಿಯಂತರ ಕೃಷ್ಣಪ್ ಇದ್ದರು.

## ಇನ್ಮುಂದೆ ಕೇರಳಂ

ಸಂಪುಟ ಸಭೆಯಲ್ಲಿ ಕೇರಳದ ಮನವಿಯಂತೆ ಹೆಸರನ್ನು ಬದಲಾವಣೆ ಮಾಡಲು ನಿರ್ಣಯ ಕೈ ಗೊಳ್ಳಲಾಗಿದೆ. ರಾಜ್ಯವನ್ನು ಮಲಯಾಳ ಭಾಷೆಯಲ್ಲಿ 'ಕೇರಳಂ' ಎಂದು ಕರೆ ಯಲಾಗುತ್ತದೆ. ಆದರೆ, ಸಂವಿಧಾನದಲ್ಲಿ ಕೇರಳ ಎಂದು ಬರೆಯಲಾಗಿದೆ.

## ಮ್ಯುಟೇಶನ್ ವ್ಯವಸ್ಥೆ ಜಾರಿ

ಆದರೂ ಸಾಕಷ್ಟು ಜನ ಮಾಡಿಲ್ಲ. ಹೀಗಾಗಿ ಖಾತೆ ಬದಲಾವಣೆ ಆಗಿದೆ. ನಮ್ಮ ಗಮನಕ್ಕೇ ಬಂದಿಲ್ಲ ಎಂದು ಎಷ್ಟೋ ಜನ ದೂರು ನೀಡುತ್ತಾರೆ. ಆಧಾರ್ ಜೋಡಣೆ ಮಾಡುವುದರಿಂದ ವಂಚನೆಗೆ ಒಳಗಾಗುವುದನ್ನು ತಪ್ಪಿಸಬಹುದಾಗಿದೆ. ಪಹಣಿಯಲ್ಲಿ ಏನೇ ಬದಲಾವಣೆ ಆದರೂ ಮಾಲೀಕರಿಗೆ ಎಸ್‌ಎಂಎಸ್ ಸಂದೇಶ ಬರುತ್ತದೆ ಎಂದು ಹೇಳಿದರು.

## ಅಪ್ರಾಪ್ತರಿಂದ ಬಾಲಕನ ಹತ್ಯೆ

ಆತ ಸ್ಥಳದಲ್ಲೇ ಕುಸಿದು ಬಿದ್ದಿದ್ದಾನೆ. ಕೂಡಲೇ ಆಸ್ಪತ್ರೆಗೆ ಕರೆತರಲಾಯಿತು. ಆದರೆ, ಈ ವೇಳೆಗಾಗಲೇ ಸಂಕೇತ್ ಮೃತಪಟ್ಟಿದ್ದ ಎಂದು ವೈದ್ಯರು ತಿಳಿಸಿದ್ದಾರೆ. ಇದರಿಂದ ಕೊಲೆ ಮಾಡಿದ ಅನ್ಯಕೋಮಿನ ಅಪ್ರಾಪ್ತ ಬಾಲಕರ ವಿರುದ್ಧ ಆಕ್ರೋಶ ವ್ಯಕ್ತವಾಗಿದೆ. ಕೊಲೆ ಮಾಡಿದ ಅಪ್ರಾಪ್ತರು ಕೂಡ ಸಾಂಕೇತ್ ಜೊತೆ ಓದಿದವರು. ಆದರೆ ಎಸ್‌ಎಸ್‌ಎಲ್‌ಸಿ ಡ್ರಾಪ್ ಔಟ್ ಮಾಡಿದ್ದರು. ಹಲ್ಲೆ ನಡೆಸಿದ ಮೂವರು ಬಾಲಕರು ಪರಾರಿಯಾಗಲು ಪ್ರಯತ್ನಿಸಿದ್ದರು. ಅವರನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.

## ಮಂತ್ರಿಮಂಡಲ ಮಾಡುವೆ ಎಂದಿಲ್ಲ

ಮೊದಲ ಬಾರಿಗೆ ಆಯ್ಕೆಯಾದ ಶಾಸಕರಲ್ಲಿ ಕನಿಷ್ಠ ಐವರಿಗೆ ಮಂತ್ರಿ ಸ್ಥಾನ ನೀಡಬೇಕು ಎಂದು ಆಗ್ರಹಿಸಿ ಹೈಕಮಾಂಡ್‌ಗೆ 31 ಶಾಸಕರು ಪತ್ರ ಬರೆದಿರುವ ಬಗ್ಗೆ ಪ್ರತಿಕ್ರಿಯೆ ನೀಡಿದ ಅವರು, ಮೊದಲ ಬಾರಿಗೆ ಶಾಸಕರಾದಾಗ ಮಂತ್ರಿಯಾದವರಲ್ಲಿ ನಾನೂ ಒಬ್ಬ. ಹೊಸ ಪೀಳಿಗೆ ಬೆಳೆಯಬೇಕು. ನಾವು ಎಷ್ಟು ದಿನ ಗೂಟ ಹೊಡೆದುಕೊಂಡು ಕುಳಿತುಕೊಳ್ಳಲು ಸಾಧ್ಯ? ನಾನು ಸಚಿವನಾಗಿ 36 ವರ್ಷವಾಗಿದೆ. ಹೊಸ ಪೀಳಿಗೆ, ಹೊಸ ಆಲೋಚನೆಗಳು ಬರಬೇಕು. ಹೊಸಬರು ಸಂಪುಟಕ್ಕೆ ಬರಬೇಕು ಎಂದು ಬೆಂಬಲಿಸುವವರಲ್ಲಿ ನಾನೂ ಇದ್ದೇನೆ. ಹೊಸಬರನ್ನು ನಾವು ತಯಾರು ಮಾಡಬೇಕಲ್ಲ. ಈ ಬಗ್ಗೆ ಪಕ್ಷ ತೀರ್ಮಾನ ಮಾಡುತ್ತದೆ ಎಂದು ಹೇಳಿದರು.

ವರ್ತಮಾನ
ಜಾಹಿರಾತಿಗೆ ಉತ್ತಮ ಮಾಧ್ಯಮ

# ಕ್ರೀಡಾಂಗಣ ನಿರ್ಮಾಣಕ್ಕೆ ಖಂಡನೆ

## ಟಿ.ನರಸೀಪುರದ ಸಿಲ್ಕ್ ಕಾರ್ಖಾನೆ ಆವರಣದಲ್ಲಿ ನಿರ್ಮಾಣಕ್ಕೆ ಚಿಂತನೆಗೆ ವಿರೋಧ



ಮೈಸೂರು: ಮೈಸೂರು ಸಿಲ್ಕ್ ನೂಲು ತೆಗೆಯುವ ಟಿ.ನರಸೀಪುರದ ಕಾರ್ಖಾನೆಯ ಆವರಣದ ಒಳಗೆ ಕ್ರೀಡಾಂಗಣ ನಿರ್ಮಿಸಲು ಹೊರಟಿರುವ ರಾಜ್ಯ ಸರ್ಕಾರದ ಕ್ರಮವನ್ನು ಖಂಡಿಸಿ ಕರ್ನಾಟಕ ಸೇನಾಪಡೆ ಕಾರ್ಯಕರ್ತರು ಪ್ರತಿಭಟಿಸಿದರು. ನಗರದ ಹಳೆ ಜಿಲ್ಲಾಧಿಕಾರಿಗಳ ಕಚೇರಿ ಮುಂಭಾಗ ಪ್ರತಿಭಟಿಸಿದ ಕಾರ್ಯಕರ್ತರೂ ನೂರಾರು ಘೋಷಣೆ ಕೂಗಿ ಆಕ್ರೋಶ ಹೊರಹಾಕಿದರು. ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ 1912 ರಲ್ಲಿ ಸುಮಾರು 13 ಎಕರೆ ವಿಶಾಲವಾದ ಜಾಗದಲ್ಲಿ ಮೈಸೂರು ಸಿಲ್ಕ್ ಫ್ಯಾಕ್ಟರಿಯನ್ನು ಸ್ಥಾಪಿಸಿದರು. ಈ ಕಾರ್ಖಾನೆ ಒಳಗೆ ಸುಮಾರು 5 ಎಕರೆ ಜಾಗದಲ್ಲಿ 60–70 ವರ್ಷಗಳ ಹಳೆಯದಾದ ಸುಮಾರು 550 ಬೃಹತ್ ಮರಗಳಿವೆ. ರಾಮನಗರ, ಚನ್ನಪಟ್ಟಣ ಹಾಗೂ ಇನ್ನಿತರ ಸ್ಥಳಗಳಿಂದ ರೇಷ್ಮೆ ಗೂಡನ್ನು ತಂದು ಇಲ್ಲಿ ರೇಷ್ಮೆ ಹುಳುಗಳನ್ನು ಬೇಯಿಸುತ್ತಾರೆ. ಬೇಯಿಸಿದಾಗ ಇದರಿಂದ ಬಹಳ ಕೆಟ್ಟ ವಾಸನೆ ಬರುತ್ತದೆ. ಈ ವಾಸನೆ ಈಗ ಇಲ್ಲಿ ನಿಯಂತ್ರಣವಾಗಿರುವುದೇ ಇಲ್ಲಿರುವ ದಟ್ಟ ಮರಗಳಿಂದ. ಇಲ್ಲವಾದರೆ ಊರು ತುಂಬಾ ವಾಸನೆ ಗಬ್ಬುನಾರುತ್ತದೆ. ರೇಷ್ಮೆ ಗೂಡಿನ ಹುಳಗಳನ್ನು ಸುಟ್ಟಾಗಲೇ ,ರೇಷ್ಮೆ ನೂಲು ಬರುಹುದು. ಈ 5 ಎಕರೆಯಲ್ಲಿರುವ ಮರಗಳು ವಾಸನೆಯನ್ನು ಈಗಲೂ ತಡೆಗಟ್ಟುತ್ತಿದೆ. ಈ 5 ಎಕರೆ ಜಾಗವನ್ನು ಸರ್ಕಾರ ಕ್ರೀಡಾಂಗಣ ನಿರ್ಮಿಸಲು ನೀಡಿದರೆ, 550 ಮರಗಳನ್ನು ಕಡಿದರೆ, ಪರಿಸರ ಹಾಳಾಗುತ್ತದೆ. ಜೊತೆಗೆ ವಾಸನೆ ಊರೆಲ್ಲ ಹರಡುತ್ತದೆ. ಜನರು ಊರಿನಲ್ಲಿ ವಾಸನೆಯಿಂದ ಬದುಕುವುದೇ ಕಷ್ಟಕರವಾಗುತ್ತದೆ. ಕ್ರೀಡಾಪಟುಗಳು ಇಲ್ಲಿ ಸುಡುವ ರೇಷ್ಮೆ ಗೂಡಿನ ವಾಸನೆಯಿಂದ, ಅನಾರೋಗ್ಯದಿಂದ ಉಸಿರುಗಟ್ಟಿ ಶ್ವಾಸಕೋಶ ಸಮಸ್ಯೆಗಳು ಉದ್ಭವಿಸುತ್ತದೆ ಎಂದರು.

ರಾಜ್ಯ ಸರ್ಕಾರ ಈಗ ಲಾಭದಲ್ಲಿರುವ ಮೈಸೂರು ಸಿಲ್ಕ್ ಫ್ಯಾಕ್ಟರಿಯನ್ನು ವಿಸ್ತರಣೆ ಮಾಡಿ, ಹೆಚ್ಚೆಚ್ಚು ಕೆಲಸಗಾರರನ್ನು ನೇಮಕ ಮಾಡಿಕೊಂಡು, ಹೆಚ್ಚೆಚ್ಚು ಸೀರೆಗಳನ್ನು ಉತ್ಪಾದನೆ ಮಾಡುವುದನ್ನು ಬಿಟ್ಟು, ಲಾಭದಲ್ಲಿರುವ ಮೈಸೂರು ಸಿಲ್ಕ್ ಫ್ಯಾಕ್ಟರಿ ಜಾಗದಲ್ಲಿ ಕ್ರೀಡಾಂಗಣ ನಿರ್ಮಿಸಲು ಹೊರಟಿರುವುದು ಅತ್ಯಂತ ಖಂಡನೀಯ. ಈ ನಿರ್ಧಾರವೇ ಅವೈಜ್ಞಾನಿಕವಾಗಿದೆ. ರಾಜ್ಯ ಸರ್ಕಾರ ಟಿ.ನರಸೀಪುರದಲ್ಲಿಯೇ ಬೇರೆ ಸೂಕ್ತ ಜಾಗದಲ್ಲಿ ಸುಸಜ್ಜಿತ ಕ್ರೀಡಾಂಗಣ ನಿರ್ಮಿಸಲು ನಮ್ಮ ಯಾವುದೇ ವಿರೋಧ ಇಲ್ಲ. ಆದರೆ ಯಾವುದೇ ಕಾರಣಕ್ಕೂ ಈ ಮೈಸೂರು ಸಿಲ್ಕ್ ಫ್ಯಾಕ್ಟರಿ ಆವರಣದಲ್ಲಿ ಕ್ರೀಡಾಂಗಣ ನಿರ್ಮಿಸಿ, ಮರ ಗಿಡಗಳನ್ನು ಕಡಿಯಬಾರದೆಂದು ಎಚ್ಚರಿಕೆ ನೀಡಿದರು.

ಪ್ರತಿಭಟನೆಯಲ್ಲಿ ಜಿಲ್ಲಾಧ್ಯಕ್ಷ ತೇಜೇಶ್ ಲೋಕೇಶ್ ಗೌಡ, ಪ್ರಭುಶಂಕರ್, ಗೋಲ್ಡನ್ ಸುರೇಶ್, ಕೃಷ್ಣಪ್ಪ, ಸಿಂಧುವಳ್ಳಿ ಶಿವಕುಮಾರ್, ಮಧುವನ ಚಂದ್ರು, ಬೋಗಾದಿ ಸಿದ್ದೇಗೌಡ, ಗಿರೀಶ್ ಹೆಚ್, ವೇಣು ಗೋಪಾಲ್, ಶಿವಲಿಂಗಯ್ಯ, ವರಕೂಡು ಕೃಷ್ಣೇಗೌಡ, ಶ್ರೀನಿವಾಸ್, ನೇಹಾ, ಮಂಜುಳಾ, ಭಾಗ್ಯಮ್ಮ, ಡಾ . ಶಾಂತರಾಜೇಅರಸ್, ಡಾ . ನರಸಿಂಹೇಗೌಡ, ಜ್ಯೋತಿ, ಸುಜಾತ, ಗೀತಾ ಗೌಡ, ವಿಜಯೇಂದ್ರ, ಹನುಮಂತಯ್ಯ, ಬೇಬಿ ರತ್ನ, ವಾಣಿ, ಪುಷ್ಪವತಿ, ತಾಯೂರು ಗಣೇಶ್, ರಾಧಾಕೃಷ್ಣ , ನಾರಾಯಣ ಗೌಡ, ಎಳನೀರು ರಾಮಣ್ಣ, ಕುಮಾರ್ ಗೌಡ, ದರ್ಶನ್ ಗೌಡ, ಪ್ರದೀಪ್, ರಘು ಅರಸ್, ಆನಂದ್ ಗೌಡ, ತ್ಯಾಗರಾಜ್, ಗಣೇಶ್ ಪ್ರಸಾದ್, ಚಂದ್ರಶೇಖರ್, ರವೀಶ್ ಸೇರಿ ಇನ್ನಿತರರು ಉಪಸ್ಥಿತರಿದ್ದರು.

## ಸಿಲ್ಕ್ ಕಾರ್ಖಾನೆಗೆ ಧಕ್ಕೆಯಾದರೆ ದೂರು ನೀಡಲು ಎಂಜಿಪಿ ಎಚ್ಚರಿಕೆ

ಮೈಸೂರು: ಟಿ.ನರಸೀಪುರದಲ್ಲಿನ ರೇಷ್ಮೆ ಕಾರ್ಖಾನೆ ಆವರಣದಲ್ಲಿ ಮರ ಗಳನ್ನು ಬಲಿಗೊಟ್ಟು ಕ್ರೀಡಾಂಗಣ ನಿರ್ಮಿಸುವ ಮೂಲಕ ಕಾರ್ಖಾನೆ ಅಸ್ತಿತ್ವಕ್ಕೆ ಧಕ್ಕೆ ತರುವ ಯತ್ನ ಕೂಡಲೇ ಕೈಬಿಡಬೇಕು. ಇಲ್ಲದಿದ್ದರೆ ಹೈಕೋರ್ಟ್‌ನಲ್ಲಿ ಸಾರ್ವಜನಿಕ ಹಿತಾಸಕ್ತಿಯ ಮೊಕದ್ದಮೆ ಹೂಡಬೇಕಾಗುತ್ತದೆ ಎಂದು ಮೈಸೂರು ಗ್ರಾಹಕರ ಪರಿಷತ್ ಎಚ್ಚರಿಸಿದೆ.

ಈ ಕುರಿತು ನಗರದಲ್ಲಿ ಅಧ್ಯಕ್ಷ ದಿನೇಶ್ ಮಾತನಾಡಿ, ನಾವು ಕ್ರೀಡಾಂಗಣ ನಿರ್ಮಾಣಕ್ಕೆ ವಿರುದ್ಧವಲ್ಲ. ಆದರೆ ಆಯ್ಕೆ ಮಾಡಿರುವ ಜಾಗ ಸೂಕ್ತವಾದುದಲ್ಲ. ಮೈಸೂರು ರೇಷ್ಮೆ, ರೇಷ್ಮೆ ಸೀರೆಗೆ ಉತ್ತಮ ಬೇಡಿಕೆ ಇದೆ. ಹೀಗಾಗಿ ನೂಲು ನೀಡುವ ಈ ಕಾರ್ಖಾನೆಯನ್ನು ಇನ್ನಷ್ಟು ವಿಸ್ತರಿಸಬೇಕಾಗುತ್ತದೆ. ಇದರಿಂದ ಸ್ಥಳೀಯರಿಗೆ ಇನ್ನಷ್ಟು ಉದ್ಯೋಗ ಸಹಾ ಸಿಗಲಿದೆ. ರೇಷ್ಮೆ ಬೆಳೆಗಾರರೂ ಬೆಳೆಯುತ್ತಾರೆ. ಆದರೆ ಅದರ ಬದಲು ಈಗ ಕಾರ್ಖಾನೆ ಆವರಣದಲ್ಲಿ ರೇಷ್ಮೆ ಕಾರ್ಖಾನೆ ಆವರಣದಲ್ಲಿ ಕ್ರೀಡಾಂಗಣ ನಿರ್ಮಿಸುವುದು ಇವಕ್ಕೆಲ್ಲ ಅಡ್ಡಿಯಾಗುತ್ತದೆ ಎಂದು ಕಳವಳ ವ್ಯಕ್ತಪಡಿಸಿದರು.

ಸಂಸ್ಥಾಪಕ ಅಧ್ಯಕ್ಷ ಭಾಮಿ ವಿ. ಶೆಣೈ ಮಾತನಾಡಿ, ಕಾರ್ಖಾನೆಯ ಜಾಗ 12 ಎಕರೆ ಆಗಿದ್ದು, ಇದರಲ್ಲಿ 5 ಎಕರೆ ಕ್ರೀಡಾಂಗಣಕ್ಕೆ ನೀಡಲಾಗುತ್ತಿದೆ. ಇದರ ವಿರುದ್ಧ ಹಲವರು ಧ್ವನಿಯೆತ್ತಿದ್ದರೂ ಸಹಾ ಹಠಕ್ಕೆ ಬಿದ್ದು ನಿರ್ಮಾಣಕ್ಕೆ ಮುಂದಾಗಿದ್ದಾರೆ. ಇದರಿಂದಾಗಿ ಸುಮಾರು 550 ಮರ ಕಡಿಯಬೇಕಾಗುತ್ತದೆ. ಇವು ಆಮ್ಲಜನಕ ಪೂರೈಸುವ, ಹವಾಮಾನ ವೈಪರೀತ್ಯ ತಡೆಯುವ ಕೆಲಸ ಮಾಡುತ್ತಿವೆ. ಈ ಕುರಿತು ಆಕ್ಷೇಪ ಸಲ್ಲಿಸಲು ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ. ಮಹದೇವಪ್ಪ ಅವರನ್ನು ಸಂಪರ್ಕಿಸಲು ಯತ್ನಿಸಿದರೆ ಸಿಗುತ್ತಿಲ್ಲ. ಮೈಸೂರು ರೇಷ್ಮೆ ಭೌಗೋಳಿಕ ಚಿನ್ಹೆ ಪಡೆದಿದೆ. ಒಂದು ವೇಳೆ ಕ್ರೀಡಾಂಗಣ ನಿರ್ಮಿಸಿದರೆ ಕಾರ್ಖಾನೆ ಮುಚ್ಚುವ ಪರಿಸ್ಥಿತಿ ಬರಲಿದೆ. ಹೀಗಾಗಿ ಇದನ್ನು ಉಳಿಸಿಕೊಳ್ಳುವ ನಿಟ್ಟಿನಲ್ಲಿ ಪರಿಷತ್ ಹಿರಿಯ ವಕೀಲ ಅರುಣ್ ಕುಮಾರ್ ನೇತೃತ್ವದಲ್ಲಿ ಸಾರ್ವಜನಿಕ ಹಿತಾಸಕ್ತಿಯ ಮೊಕದ್ದಮೆ ಹೂಡಲು ನಿರ್ಧರಿಸಿದೆ ಎಂದರು.

ಹಿರಿಯ ವಕೀಲ ಅರುಣ್‌ಕುಮಾರ್ ಮಾತನಾಡಿ, ನಂಜನಗೂಡು ರಸಬಾಳೆ, ಮೈಸೂರು ವೀಳ್ಯದೆಲೆಯಂತೆ ಮೈಸೂರು ರೇಷ್ಮೆ ಸಹಾ ಜಗತ್ಪ್ರಸಿದ್ಧ. ಈ ರೇಷ್ಮೆ ಸೀರೆಗೆ ಟಿ. ನರಸೀಪುರ ಕಾರ್ಖಾನೆಯೇ ಆಧಾರವಾಗಿದೆ. ಇಲ್ಲಿ ನಿತ್ಯ ಆರರಿಂದ ಏಳು ಟನ್ ಕಲ್ಲಿದ್ದಲು ಸುಡುತ್ತಾರೆ. ಇದರಿಂದ ಬರುವ ಹಾರು ಬೂದಿ ಎಲ್ಲೆಡೆ ಹರಡದಂತೆ ಈ ಮರಗಳು ನೋಡಿಕೊಂಡು, ಹವಾಮಾನ ವೈಪರೀತ್ಯ ತಡೆಯುತ್ತಿವೆ. ಆದರೂ ಇಲ್ಲಿ ಕ್ರೀಡಾಂಗಣ ನಿರ್ಮಿಸಹೊರಟಿರುವುದರ ಹಿಂದಿನ ಉದ್ದೇಶದ ಬಗ್ಗೆ ಅನುಮಾನಗಳು ಮೂಡುತ್ತಿವೆ ಎಂದರು.

ನಾಲ್ವಡಿ ಕೃಷ್ಣರಾಜ ಒಡೆಯರ್ ದೂರದೃಷ್ಟಿಯಿಂದ ಸ್ಥಾಪಿಸಿದ ಈ ಕಾರ್ಖಾನೆ ಮುಚ್ಚುವ ಪರಿಸ್ಥಿತಿಗೆ ತರುವುದು ಬೇಡ, ಒಂದು ವೇಳೆ ಇಲ್ಲಿ ಕ್ರೀಡಾಂಗಣ ನಿರ್ಮಿಸಿದರೂ ಸಹಾ ಕಾರ್ಖಾನೆಯಿಂದ ಬರುವ ಕೆಟ್ಟ ವಾಸನೆ ನಡುವೆ ಕ್ರೀಡೆಗಳು ನಡೆಯುವುದು ಅಸಾಧ್ಯ, ಜೊತೆಗೆ ಕಾರ್ಖಾನೆಯಲ್ಲಿ ಬಾಯ್ಲರ್ ಸಹಾ ಇರುವುದರಿಂದಾಗಿ ಅಪಾಯಕಾರಿಯಾಗಿದೆ. ಆದ್ದರಿಂದ ಕ್ರೀಡಾಂಗಣ ನಿರ್ಮಾಣ ವಿರೋಧಿಸಿ ನಗರಕ್ಕೆ ಸಿಎಂ ಸಿದ್ದರಾಮಯ್ಯ ಭೇಟಿ ನೀಡಿದಾಗ ಮತ್ತು ಜಿಲ್ಲಾ ಉಸ್ತುವಾರಿ ಸಚಿವರಿಗೆ ಮನವಿಪತ್ರ ಸಲ್ಲಿಸಲಾಗುವುದು. ಒಂದು ವೇಳೆ ನಿರ್ಧಾರ ವಾಪಸು ಪಡೆಯದಿದ್ದರೆ ಹೈಕೋರ್ಟ್‌ನಲ್ಲಿ ಪರಿಷತ್ ಪರವಾಗಿ ಕಾನೂನು ಹೋರಾಟ ನಡೆಸಲಾಗುವುದೆಂದು ಎಚ್ಚರಿಸಿದರು. ಪರಿಷತ್‌ನ ಪ್ರಭಾ ನಂದೀಶ್, ಪ್ರಗ್ಯಾ ಹಾಜರಿದ್ದರು.



**ಮೊದಲ ಪುಟದಿಂದ**

## ಎಚ್‌ಸಿಎಂಗೆ ಮಾಹಿತಿ

ಬೆಂಗಳೂರಿನ ರಸ್ತೆ ಅಭಿವೃದ್ಧಿಗೆ ನಮ್ಮ ಸರ್ಕಾರ 5,065 ಕೋಟಿ ವೆಚ್ಚ ಮಾಡುತ್ತಿದೆ. ಮುಖ್ಯಮಂತ್ರಿ 2 ಸಾವಿರ ಕೋಟಿ ಅನುದಾನ ನೀಡಿದ್ದಾರೆ. ಶೇ.75ರಷ್ಟು ಕಾಮಗಾರಿಗಳು ಮುಕ್ತಾಯವಾಗಿವೆ. ಏಪ್ರಿಲ್ ತಿಂಗಳ ಅಂತ್ಯದ ವೇಳೆಗೆ ಎಲ್ಲವೂ ಮುಕ್ತಾಯಗೊಳ್ಳಬೇಕು ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದ್ದೇನೆ. ಕಾಮಗಾರಿಯ ಗುಣಮಟ್ಟದಲ್ಲಿ ರಾಜಿ ಆಗಬಾರದು ಎಂದಿದ್ದೇನೆ ಎಂದು ಡಿಕೆಶಿ ತಿಳಿಸಿದರು.

10 ಲಕ್ಷ ಇ ಖಾತಾ ದಾಖಲೆ ವಿತರಣೆ ಕಾರ್ಯಕ್ರಮ ಮಾಡಲಾಗುವುದು. ಇನ್ನು 30 ಸಾವಿರ ಬೀದಿ ವ್ಯಾಪಾರಿಗಳು ನೋಂದಣಿ ಮಾಡಲಾಗಿದೆ. ಅವರ ವ್ಯಾಪಾರಕ್ಕೆ ವಾಹನ ನೀಡುವ ಕಲ್ಯಾಣ ಯೋಜನೆಗಳನ್ನು ಜಾರಿ ಮಾಡಲಾಗುವುದು ಎಂದು ತಿಳಿಸಿದರು. ಖಾಲಿ ಹುದ್ದೆಗಳ ಭರ್ತಿಗೆ ಬಿಜೆಪಿಯವರು ಪ್ರತಿಭಟನೆ ಮಾಡುತ್ತಿರುವ ಬಗ್ಗೆ ಕೇಳಿದಾಗ, ಅವರ ಅವಧಿಯಲ್ಲಿ ಹುದ್ದೆಗಳನ್ನು ಯಾಕೆ ಭರ್ತಿ ಮಾಡಲಿಲ್ಲ? ಶೀಘ್ರದಲ್ಲೇ ನಾವು ಹುದ್ದೆಗಳಿಗೆ ನೇಮಕಾತಿ ಮಾಡುತ್ತೇವೆ. ನಿರುದ್ಯೋಗಿ ಯುವಕರಿಗೆ ತೊಂದರೆ ಆಗಬಾರದೆಂದು ಯುವನಿಧಿ ಯೋಜನೆ ನೀಡಿದ್ದೇವೆ. ಒಳಮೀಸಲಾತಿ ಸೇರಿದಂತೆ ಅನೇಕ ಕಾರಣಗಳಿಗೆ ನೇಮಕಾತಿ ವಿಳಂಬವಾಗಿದೆ ಎಂದು ಹೇಳಿದರು.

## ಸಿಲ್ಕ್ ಫ್ಯಾಕ್ಟರಿ ಜಾಗ ಕೊಡಲ್ಲ

ಜಯಚಾಮರಾಜೇಂದ್ರ ಒಡೆಯರ್ ದೂರದೃಷ್ಟಿಯಿಂದ ಈ ಕಾರ್ಖಾನೆ ಸ್ಥಾಪಿತವಾಗಿದೆ. ಇಲ್ಲಿನ ಜನರ ಬದುಕಿಗೆ ಆಧಾರವಾದ ಈ ಪಾರಂಪರಿಕ ಕಾರ್ಖಾನೆಯನ್ನು ಪಕ್ಷಾತೀತವಾಗಿ ಹಾಗೂ ಜಾತ್ಯಾತೀತವಾಗಿ ಉಳಿಸಿಕೊಳ್ಳುವುದು ನಮ್ಮೆಲ್ಲರ ಜವಾಬ್ದಾರಿ ಎಂದು ಹೇಳಿದರು.

ಕಾರ್ಖಾನೆ ಜಾಗದಲ್ಲಿ ಕ್ರೀಡಾಂಗಣ ನಿರ್ಮಾಣ ಮಾಡುವ ಯತ್ನಕ್ಕೆ ತೀವ್ರ ವಿರೋಧ ವ್ಯಕ್ತಪಡಿಸಿದ ಅವರು, ಮರಗಿಡಗಳನ್ನು ಕಡಿದು ಪರಿಸರ ಹಾನಿ ಮಾಡುವ ಬದಲು ಯೋಗ್ಯವಾದ ಬೇರೆ ಜಾಗದಲ್ಲಿ ಕ್ರೀಡಾಂಗಣ ನಿರ್ಮಿಸಲಿ. ಸಿಲ್ಕ್ ಫ್ಯಾಕ್ಟರಿ ಜಾಗವನ್ನು ಯಥಾಸ್ಥಿತಿಯಲ್ಲಿ ಉಳಿಸಬೇಕು. ಇಲ್ಲದಿದ್ದರೆ ಹೋರಾಟ ಮತ್ತಷ್ಟು ತೀವ್ರಗೊಳ್ಳಲಿದೆ. ಈ ಸಂಬಂಧ ಈಗಾಗಲೇ ಮುಖ್ಯಮಂತ್ರಿಗಳಿಗೆ ಪತ್ರ ಬರೆದಿರುವುದಾಗಿ ತಿಳಿಸಿದ ಅವರು, ನಮ್ಮ ಮನವಿಗೆ ಸ್ಪಂದಿಸದಿದ್ದರೆ ಮೈಸೂರಿನ ಆಸ್ತಿಯ ರಕ್ಷಣೆಗೆ ನಾವು ಒಂದಾಗಿ ಹೋರಾಟ ಮಾಡುತ್ತೇವೆ ಎಂದು ಹೇಳಿದರು. ಪ್ರತಿಭಟನೆ ಉದ್ದೇಶಿಸಿ ಮಾತನಾಡಿದ ಮಾಜಿ ಸಂಸದ ಪ್ರತಾಪ್ ಸಿಂಹ, ಕ್ರೀಡಾಂಗಣ ಅಗತ್ಯವೇ ಸರಿ. ಆದರೆ ಅದು ವೈಜ್ಞಾನಿಕವಾಗಿ ಸೂಕ್ತ ಜಾಗದಲ್ಲಿರಬೇಕು. ಒಂದು ಮಟ್ಟದ ಕ್ರೀಡಾಂಗಣ ನಿರ್ಮಾಣಕ್ಕೆ ಕನಿಷ್ಠ 11 ಎಕರೆ ಅಗತ್ಯವಿದೆ. ಐದು ಎಕರೆ ಜಾಗದಲ್ಲಿ ಅದನ್ನು ನಿರ್ಮಿಸುವುದು ಸಾಧ್ಯವಿಲ್ಲ ಎಂದರು.

## ನೇಪಾಳದಲ್ಲಿ ಮಾರಾಟ

ಹುಣಸೂರು ಆಭರಣದ ಅಂಗಡಿ ಕಳ್ಳತನ ಮುಗಿದ ಅಧ್ಯಾಯ ಎಂಬ ಮನಸ್ಥಿತಿಗೆ ಪೊಲೀಸರು ಬಂದಿದ್ದಾರೆ ಎಂದು ತಿಳಿದುಬಂದಿದೆ.

**ಬಲಗೈ ಸಮುದಾಯಗಳ ಒಕ್ಕೂಟದ ವತಿಯಿಂದ ಬೃಹತ್ ಮೆರವಣಿಗೆ**

# ಒಳ ಮೀಸಲಾತಿ ಅನ್ಯಾಯ ಖಂಡಿಸಿ ಪ್ರತಿಭಟನೆ



ಚಾಮರಾಜನಗರ: ಒಳ ಮೀಸಲಾತಿಯಿಂದ ಬಲಗೈ ಸಮುದಾಯಕ್ಕೆ ಆಗಿರುವ ಅನ್ಯಾಯವನ್ನು ಕೂಡಲೇ ಸರಿಪಡಿಸುವಂತೆ ಆಗ್ರಹಿಸಿ ಗಡಿಕಟ್ಟೆ ಯಜಮಾನರು ಬಲಗೈ ಸಮುದಾಯಗಳ ಒಕ್ಕೂಟ, ಡಾ.ಬಿ.ಆರ್. ಅಂಬೇಡ್ಕರ್ ಮಹಾಸಭಾದ ವತಿಯಿಂದ ನಗರದಲ್ಲಿ ಬೃಹತ್ ಪ್ರತಿಭಟನೆ ನಡೆಸಲಾಯಿತು.

ನಗರದ ಡಾ.ಬಿ.ಅಂಬೇಡ್ಕರ್ ಭವನದಲ್ಲಿ ಸಮಾವೇಶಗೊಂಡ ಪ್ರತಿಭಟನಾಕಾರರು ಅಲ್ಲಿಂದ ಮೆರವಣಿಗೆ ಹೊರಟು ಸತ್ತಿರಸ್ತೆ, ಗುಂಡ್ಲುಪೇಟೆ ವೃತ್ತ, ದೊಡ್ಡಂಗಡಿ, ಚಿಕ್ಕಂಗಡಿ ಬೀದಿ, ಸಂತೇಮರಹಳ್ಳಿ ವೃತ್ತ, ಭುವನೇಶ್ವರಿ ವೃತ್ತ, ಬಿ.ರಾಚಯ್ಯ ಜೋಡಿ ರಸ್ತೆ ಮೂಲಕ ಜಿಲ್ಲಾಡಳಿತ ಭವನಕ್ಕೆ ತೆರಳಿ ಕೆಲ ಪ್ರತಿಭಟನೆ ನಡೆಸಿ ಹೆಚ್ಚುವರಿ ಜಿಲ್ಲಾಧಿಕಾರಿ ಜವರೇಗೌಡ ಅವರ ಮುಖಾಂತರ ರಾಜ್ಯಪಾಲರಿಗೆ ಮನವಿ ಸಲ್ಲಿಸಲಾಯಿತು.

ರಾಜ್ಯ ಸರ್ಕಾರ ಹಾಗೂ ಬಲಗೈ ಸಮುದಾಯದ ಶಾಸಕರ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ರಾಜ್ಯ ಸರ್ಕಾರವು ಒಳ ಮೀಸಲಾತಿಯನ್ನು ತನ್ನ ಪಕ್ಷದ ಪ್ರಣಾಳಿಕೆಯಲ್ಲಿ ಜಾರಿ ಮಾಡಲು ಹೇಳಿರುವ ಕಾರಣಕ್ಕೆ ಜಾರಿ ಮಾಡಲು ಮುಂದಾಗಿರುವುದು ಪರಿಶಿಷ್ಟ ಜಾತಿಯ 101 ಜಾತಿಗೂ ಮಾಡುತ್ತಿರುವ ದ್ರೋಹವಾಗಿದೆ ಆರೋಪಿಸಿದರು.

ಸಾಮಾಜಿಕ ನ್ಯಾಯದ ಬಗ್ಗೆ ಬಹಳ ಕಾಳಜಿ ಇರುವ ಸರ್ಕಾರ ಎಂದು ಪರಿಶಿಷ್ಟ ಜಾತಿಯ ದೊಡ್ಡ ಸಮುದಾಯು ನಂಬಿದ್ದು ಈ ನಂಬಿಕೆಗೆ ವಿರೋಧವಾಗಿ ಸರ್ಕಾರ ನಡೆದುಕೊಳ್ಳುತ್ತಿದ್ದು ಪರಿಶಿಷ್ಟ ಜಾತಿಯ ಒಳಪಂಗಡದಲ್ಲಿ ದ್ವೇಷ ಬರುವ ರೀತಿಯಲ್ಲಿ ತರಾತುರಿಯಲ್ಲಿ ಒಳಮಿಸಲಾತಿಯನ್ನು ಜಾರಿ ಮಾಡಲು ಹೊರಟಿರುವುದು ಖಂಡನೀಯ ಎಂದರು. ಕೂಡಲೇ ಅವೈಜ್ಞಾನಿಕವಾಗಿರುವ ಒಳ ಮೀಸ ಲಾತಿಯನ್ನು ಸರ್ಕಾರವು ಸೂಕ್ಷ್ಮವಾಗಿ ಗಮನಿಸ ಬೇಕು. ಆ ಮೂಲಕ ನ್ಯಾ.ನಾಗಮೋಹನ್ ದಾಸ್ ಸಮಿತಿ ನೀಡಿರುವ ಒಳ ಮೀಸಲಾತಿಯನ್ನು ರದ್ದು ಪಡಿಸಬೇಕು ಎಂದು ಆಗ್ರಹಿಸಿದರು. ರೋಸ್ಟರ್ ಬಿಂದುವಿನಲ್ಲಿ ಪರಿಶಿಷ್ಟ ಜಾತಿ ಬಲಗೈ ಸಮುದಾ ಯವು 9ನೇ ಸ್ಥಾನದಲ್ಲಿ ಇರುವುದನ್ನು ಹಿಂಪಡೆಯಬೇಕು. ಪರಿಶಿಷ್ಟ ಜಾತಿಯ ಜಾತಿ ಪ್ರಮಾಣ ಪತ್ರವನ್ನು ಮೊದಲಿನಂತೆ ನೀಡಬೇಕು. ಒಳ ಮೀಸಲಾತಿ ಯಲ್ಲಿರುವ ವ್ಯತ್ಯಾಸವನ್ನು ಸರಿಪಡಿಸುವ ತನಕ ಯಾವುದೇ ಸರ್ಕಾರಿ ಹುದ್ದೆಗಳ ನೇಮಕವನ್ನು ಮಾಡಬಾರದು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಮಹಾಸಭಾದ ಅಧ್ಯಕ್ಷ ಉಮೇಶ್ ಕುದರ್, ಕಾರ್ಯಾಧ್ಯಕ್ಷ ಸಿ.ಕೆ.ಮಂಜುನಾಥ್, ಗೌರವಾಧ್ಯಕ್ಷ ಸಿ.ಎಂ.ಕೃಷ್ಣಮೂರ್ತಿ, ಸಾಹಿತಿ ಮಂಜು ಕೋಡಿಉಗನೆ, ಮೂಡ್ನಾಕೂಡು ಪ್ರಕಾಶ್, ಎಸ್.ಪಿ.ಮಹೇಶ್, ವಾಸು, ಬಾಬು, ಮಸಣಾಪುರ ನಾಗರಾಜು, ಭಾನುಪ್ರಕಾಶ್, ಕುಮಾರ್, ನವೀನ್ ಮೌರ್ಯ, ಶಿವಮಲ್ಲು, ಆಣಗಳ್ಳಿ ಬಸವರಾಜು, ಆನಂದ್, ರಾಜೇಂದ್ರ, ರಂಗಸ್ವಾಮಿ, ಸಿದ್ದರಾಜು, ಗಡಿಕಟ್ಟೆ ಯಜಮಾನರು, ಬಲಗೈ ಸಮುದಾಯಗಳ ಒಕ್ಕೂಟದ ಪದಾಧಿಕಾರಿಗಳು, ಡಾ.ಬಿ.ಆರ್. ಅಂಬೇಡ್ಕರ್ ಮಹಾಸಭಾದ ಪದಾಧಿಕಾರಿಗಳು, ಜನಾಂಗದ ಮುಖಂಡರು ಭಾಗವಹಿಸಿದ್ದರು.

# ಶೆಟ್ಟಳ್ಳಿ, ಕುರಟ್ಟಿ ಹೊಸೂರು ಗ್ರಾಪಂಗಳಿಗೆ ಜಿಪಂ ಸಿಇಒ ಭೇಟಿ

ಚಾಮರಾಜನಗರ, ಪಂಚಾಯತ್ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ ಮೋನಾ ರೋತ್ ಅವರು ಇಂದು ಹನೂರು ತಾಲೂಕಿನ ಶೆಟ್ಟಳ್ಳಿ ಹಾಗೂ ಕುರಹಟ್ಟಿ ಹೊಸೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗ್ರಾಮಗಳಿಗೆ ಭೇಟಿ ನೀಡಿ ಕುಡಿಯುವ ನೀರು ಯೋಜನೆ, ಉದ್ಯೋಗ ಖಾತರಿ ಯೋಜನೆ ಹಾಗೂ ಇನ್ನಿತರ ಕಾಮಗಾರಿಗಳ ಪ್ರಗತಿ ಪರಿಶೀಲಿಸಿದರು.

ಗ್ರಾಮ ಪಂಚಾಯಿತಿ ಕಚೇರಿಗಳಿಗೆ ದಿಢೀರ್ ಭೇಟಿ ನೀಡಿ ಕುಡಿಯುವ ನೀರು, ತೆರಿಗೆ ವಸೂಲಾತಿ, ಗ್ರಾಮೀಣ ಉದ್ಯೋಗ ಖಾತರಿ ಯೋಜನೆ, ಎನ್.ಆರ್.ಎಲ್.ಎಂ, ಸ್ವಚ್ಛ ಭಾರತ್ ಮಿಷನ್, ಜಲಜೀವನ್ ಮಿಷನ್, ವಿವಿಧ ವಸತಿ ಯೋಜನೆ ಪ್ರಗತಿ ಪರಾಮರ್ಶಿಸಿದರು. 14 ಮತ್ತು 15ನೇ ಹಣಕಾಸು ಯೋಜನೆ ಹಾಗೂ ಇತರೆ ಗ್ರಾಮೀಣಾಭಿವೃದ್ಧಿ ಯೋಜನೆಗಳಡಿ ಅನುಷ್ಠಾನಗೊಳಿಸಲಾಗಿರುವ ಕಾಮಗಾರಿ ವೀಕ್ಷಿಸಿದರು. ಗ್ರಂಥಾಲಯ, ಘನ ಮತ್ತು ದ್ರವತ್ಯಾಜ್ಯ ವಿಲೇವಾರಿ ಘಟಕಗಳ ಅನುಷ್ಠಾನ, ತೆರಿಗೆ ವಸೂಲಾತಿ ಕುರಿತ ಕಡತಗಳು ಮತ್ತು ದಾಖಲಾತಿಗಳ ನಿರ್ವಹಣೆ, ಗ್ರಾಮ ಪಂಚಾಯಿತಿ ಸಿಬ್ಬಂದಿ ಹಾಜರಾತಿಯನ್ನು ಪರಿಶೀಲಿಸಿದರು.



**▸▸ ಕಾಮಗಾರಿಗಳ ಪರಿಶೀಲಿಸಿದ ಮೋನಾ ರೋತ್**

ಬೇಸಿಗೆ ಕಾಲ ಪ್ರಾಂಭವಾಗುತ್ತಿರುವ ಹಿನ್ನೆಲೆಯಲ್ಲಿ ಕುರಟ್ಟಿ ಹೊಸೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ದಂಟಳ್ಳಿ ಗ್ರಾಮದಲ್ಲಿ ಸ್ಥಗಿತಗೊಂಡಿರುವ ಹ್ಯಾಂಡ್ ಪಂಪ್‌ಗಳು, ತೆರೆದ ಬಾವಿಗಳು ಹಾಗೂ ಬೋರ್‌ವೆಲ್‌ಗಳನ್ನು ಪರಿಶೀಲಿಸಿ, ಸ್ಥಗಿತಗೊಂಡಿರುವ ನೀರಿನ ಮೂಲಗಳನ್ನು ತುರ್ತಾಗಿ ಸರಿಪಡಿಸುವಂತೆ ಸಂಬಂಧಪಟ್ಟ ಸಹಾಯಕ ಇಂಜಿನಿಯರ್, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಹಾಗೂ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಜಿಲ್ಲಾ ಪಂಚಾಯತ್ ಸಿಇಒ ಸೂಚನೆ ನೀಡಿದರು.

ಗ್ರಾಮದ ವಿವಿಧ ಬೀದಿ, ಬಡಾವಣೆಗಳಲ್ಲಿ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖಾ ವತಿಯಿಂದ ಜಲಜೀವನ್ ಮಿಷನ್ ಯೋಜನೆಯಡಿ ಅನುಷ್ಠಾನಗೊಳಿಸಲಾಗಿರುವ ನಳ ಸಂಪರ್ಕ ಕಾಮಗಾರಿ, ಕಿರು ನೀರು ಸರಬರಾಜು ಪೂರೈಕೆ ಕೇಂದ್ರಗಳನ್ನು ಪರಿಶೀಲಿಸಿದರು. ಗ್ರಾಮದ ಎಲ್ಲಾ ಬೀದಿಗಳಿಗೂ ಸಮರ್ಪಕ ಕುಡಿಯುವ ನೀರು ಸರಬರಾಜು ಮಾಡಬೇಕು. ಕುಡಿಯುವ ನೀರಿನ ಪೂರೈಕೆಯಲ್ಲಿ ವ್ಯತ್ಯಾಸವಾದಲ್ಲಿ ತುರ್ತಾಗಿ ಟ್ಯಾಂಕರ್‌ಗಳ ಮೂಲಕ ನೀರು ಪೂರೈಸಬೇಕು. ಪರ್ಯಾಯ ವ್ಯವಸ್ಥೆಗಳನ್ನು ಕೈಗೊಂಡು ಗ್ರಾಮಸ್ಥರಿಗೆ ಯಾವುದೇ ರೀತಿಯ ತೊಂದರೆಗಳಾಗದಂತೆ ಕ್ರಮ ವಹಿಸಬೇಕು ಎಂದು ನಿರ್ದೇಶನ ನೀಡಿದರು.

ತಾಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿ ಉಮೇಶ್, ಇನ್ನಿತರ ಅಧಿಕಾರಿಗಳು ಇದ್ದರು.

## ತೆಂಗಿನಕಲ್ಲು ಗ್ರಾಮದಲ್ಲಿ ಕೋಟೆಮಾರಮ್ಮ ದೇವಾಲಯ ಆರಂಭ

ರಾಮನಗರ: ತಾಲ್ಲೂಕಿನ ಕೈಲಾಂಚ ಹೋಬಳಿ ತೆಂಗಿನಕಲ್ಲು ಮತ್ತು ಕಡ್ಲೆ ಸುಬ್ಬಯ್ಯನವರದೊಡ್ಡಿ ಗ್ರಾಮದಲ್ಲಿ ನೂತನವಾಗಿ ನಿರ್ಮಿಸಲಾಗಿರುವ ಶ್ರೀ ಕೋಟೆಮಾರಮ್ಮ ದೇವಾಲಯದಲ್ಲಿ ಶ್ರೀಮಾತೆಯ ಶಿಲಾಮೂರ್ತಿ ಪ್ರತಿಷ್ಠಾಪನ ಕಾರ್ಯಕ್ರಮ ಭಕ್ತಿಭಾವದಿಂದ ನೆರವೇರಿತು.

ಈ ವೇಳೆ ಭಾಗವಹಿಸಿದ್ದ ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರದ ಸಂಸದ ಡಾ.ಸಿ.ಎನ್.ಮಂಜುನಾಥ್ ಶ್ರೀಮಾತೆಯ ದರ್ಶನ ಪಡೆದರು. ನಂತರ ಮಾತನಾಡಿದ ಅವರು, ಕೋಟೆಮಾರಮ್ಮ ದೇವಿಯು ಹಿಂದಿನಿಂದಲೂ ಜನರು ಹಾಗೂ ಜಾನುವಾರುಗಳಿಗೆ ಯಾವುದೇ ತರಹದ ಕಾಯಿಲೆ ಕಸಲೆಗಳು ಬಾರದಂತೆ ಕಾಪಾಡಿ, ಇಡೀ ಗ್ರಾಮವನ್ನು ತನ್ನ ಕೃಪಾಕಟಾಕ್ಷದಲ್ಲಿ ಸುರಕ್ಷಿತವಾಗಿ ನಡೆಸಿಕೊಂಡು ಬರುತ್ತಿರುವುದು ನಮ್ಮ ಭಕ್ತಿಯ ನಂಬಿಕೆಗೆ ಜೀವಂತ ಸಾಕ್ಷಿಯಾಗಿದೆ. ದೇವಿಯ ಆಶೀರ್ವಾದದಿಂದ ಗ್ರಾಮಗಳಲ್ಲಿ ಸದಾ ಆರೋಗ್ಯ, ಶಾಂತಿ ಮತ್ತು ಸಮೃದ್ಧಿ ನೆಲೆಸಲಿ ಎಂದರು.

ರಾಮನಗರ ಜೆಡಿಎಸ್ ತಾಲ್ಲೂಕು ಅಧ್ಯಕ್ಷ ಸಬ್ಬಕೆರೆ ಶಿವಲಿಂಗಯ್ಯ, ಕನಕಪುರ ಮಂಡಲ ಗ್ರಾಮಾಂತರ ಬಿಜೆಪಿ ಅಧ್ಯಕ್ಷರಾದ ಕೆ.ಪಿ. ಕುಮಾರ್ ಹಾಗೂ ಅನೇಕ ಮುಖಂಡರುಗಳು ಮತ್ತು ಸುತ್ತಮುತ್ತಲಿನ ಗ್ರಾಮಸ್ಥರುಗಳು ಸಮಾರಂಭದಲ್ಲಿ ಭಾಗವಹಿಸಿ ದೇವಿಯ ಕೃಪೆಗೆ ಪಾತ್ರರಾದರು. ರಾಮನಗರ ಕ್ಷೇತ್ರದ ಶಾಸಕ ಇಕ್ಬಾಲ್ ಹುಸೇನ್ ಅವರು ಸಹ ದೇವಾಲಯಕ್ಕೆ ಭೇಟಿ ಕೊಟ್ಟು ಪ್ರಾರ್ಥಿಸಿದರು.



# ಆರೋಗ್ಯದ ಕಾಳಜಿ ಇರಲಿ

## ಬುಡಕಟ್ಟು ಜನರಿಗೆ ಸಿವಿಲ್ ನ್ಯಾಯಾಧೀಶ ಈಶ್ವರ ಸಲಹೆ

ಚಾಮರಾಜನಗರ, ಬದಲಾದ ಜೀವನಶೈಲಿಯಿಂದ ಬುಡಕಟ್ಟು ಜನರಲ್ಲಿ ಆರೋಗ್ಯ ಸಮಸ್ಯೆಗಳು ಕಂಡು ಬರುತ್ತಿದ್ದು, ಆದಿವಾಸಿಗಳು ತಮ್ಮ ಆರೋಗ್ಯದ ಬಗ್ಗೆ ಹೆಚ್ಚಿನ ಕಾಳಜಿ ವಹಿಸುವಂತೆ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾದ ಈಶ್ವರ ಅವರು ಸಲಹೆ ಮಾಡಿದರು.

ನಗರದ ವರನಟ ಡಾ. ರಾಜ್‌ಕುಮಾರ್ ಜಿಲ್ಲಾ ರಂಗಮಂದಿರದಲ್ಲಿಂದು ಮೈಸೂರಿನ ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆ, ಬೆಂಗಳೂರಿನ ಇನ್ಸಿಟ್ಯೂಟ್ ಆಫ್ ಪಬ್ಲಿಕ್ ಹೆಲ್ತ್ ಹಾಗೂ ಬಿಳಿಗಿರಿರಂಗನ ಬೆಟ್ಟದ ಹೊಸಪೋಡು ಜಿಲ್ಲಾ ಬುಡಕಟ್ಟು ಗಿರಿಜನ ಅಭಿವೃದ್ಧಿ ಸಂಘದ ಸಂಯುಕ್ತಾಶ್ರಯದಲ್ಲಿ ಆಯೋಜಿಸಲಾಗಿದ್ದ 'ಜಿಲ್ಲಾ ಆದಿವಾಸಿ ಆರೋಗ್ಯ ಸಂವಾದ ಕಾರ್ಯಾಗಾರ'ದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಮಾತನಾಡಿದರು.

ಬುಡಕಟ್ಟು ಜನರು ಸಮಾಜದ ನಾಗರಿಕರಾಗಿದ್ದು, ಅವರಿಗೂ ಮೂಲಭೂತ ಹಕ್ಕುಗಳಿವೆ. ಸಂವಿಧಾನದ ಭದ್ರತೆ ಇದೆ. ದೌರ್ಜನ್ಯಗಳಿಂದ ರಕ್ಷಿಸಿಕೊಳ್ಳುವ ಹಕ್ಕು ಅವಕಾಶಗಳು ಇವೆ. ಆದಿವಾಸಿಗಳಿಗೆ ಉತ್ತಮ ಆರೋಗ್ಯ ಸೌಲಭ್ಯಗಳನ್ನು ಒದಗಿಸಬೇಕಾಗಿರುವುದು ಸರ್ಕಾರದ ಆದ್ಯತೆಯಾಗಿದೆ. ಆದರೆ ಆದಿವಾಸಿಗಳು ಆಸ್ಪತ್ರೆಗಳಿಗೆ ದಾಖಲಾಗುವುದು ಕಡಿಮೆಯಾಗಿದ್ದು, ಆರೋಗ್ಯ ಸಮಸ್ಯೆಗೆ ಸಾಂಪ್ರದಾಯಿಕ ಔಷಧಿಗಳನ್ನು ಅವಲಂಬಿಸುವುದು ವಾಡಿಕೆ. ಇದು ಸಲ್ಲದು. ಆರೋಗ್ಯದ ಬಗ್ಗೆ ಹೆಚ್ಚಿನ ಕಾಳಜಿ ವಹಿಸಬೇಕು. ಸರ್ಕಾರದ ಸೌಲಭ್ಯಗಳನ್ನು ಸಮರ್ಪಕವಾಗಿ ಬಳಸಿಕೊಳ್ಳಬೇಕು ಎಂದರು.

ಮಕ್ಕಳಿಗೆ ಬಾಲ್ಯವಿವಾಹ ಬೇಡ, ಉತ್ತಮ ಶಿಕ್ಷಣ ಕೊಡಿಸಿ ಉನ್ನತ ಹುದ್ದೆ ಅಲಂಕರಿಸಲು ಬುಡಕಟ್ಟು ಜನಾಂಗದ ಪೋಷಕರು ನೆರವಾಗಬೇಕು. ಹೆಣ್ಣುಮಕ್ಕಳಿಗೆ 18 ವರ್ಷ ತುಂಬಿದ ಬಳಿಕವಷ್ಟೆ ದೈಹಿಕ ಹಾಗೂ ಮಾನಸಿಕ ಸದೃಢರಾದ ನಂತರ ಮದುವೆ ಮಾಡುವ ಪರಿಪಾಠ ಬರಬೇಕು. ತಪ್ಪಿದರೆ ಆರೋಗ್ಯ ಸಮಸ್ಯೆಗಳು ಉದ್ಭವಿಸಲಿವೆ. ಹೆಣ್ಣುಮಕ್ಕಳ ಬಗ್ಗೆ ತಾತ್ಸಾರ ಭಾವನೆ ಸಲ್ಲದು. ಇತ್ತೀಚೆಗೆ ಹೆಚ್ಚಾಗುತ್ತಿರುವ ಪೋಕ್ಸೋ ಪ್ರಕರಣಗಳಿಂದ ಗಂಡು ಹಾಗೂ ಹೆಣ್ಣು ಮಕ್ಕಳ ಕುಟುಂಬಗಳು ಸಂಕಷ್ಟಕ್ಕೆ ಸಿಲುಕಿವೆ. ಬುಡಕಟ್ಟು ಜನರು ಕಾನೂನಿನ ಅರಿವು ಪಡೆದು ಜಾಗೃತರಾಗಬೇಕು. ಮಕ್ಕಳ ಆರೋಗ್ಯ, ಶಿಕ್ಷಣಕ್ಕೆ ಹೆಚ್ಚಿನ ಒತ್ತು ನೀಡುವಂತೆ ಸಲಹೆ ನೀಡಿದರು.



ಕಾರ್ಯಕ್ರಮ ಉದ್ಘಾಟಿಸಿದ ಜಿಲ್ಲಾಧಿಕಾರಿ ಶ್ರೀರೂಪ ಬಳಿಕ ಮಾತನಾಡಿ ಕಾಡಿನ ಒಡನಾಡಿಗಳಾಗಿರುವ ಬುಡಕಟ್ಟು ಜನರು ಮುಗ್ದರು. ಅರಣ್ಯದಲ್ಲಿ ದೊರೆಯುವ ಕಿರು ಉತ್ಪನ್ನಗಳನ್ನು ಸಂಗ್ರಹಿಸುವ ಆದಿವಾಸಿಗಳು ಮೊದಮೊದಲು ಹೆಚ್ಚು ಸದೃಢರಾಗಿದ್ದರೂ ಸಹ ಬಳಿಕ ತಾಂತ್ರಿಕತೆ ಬೆಳೆದಂತೆ ಅವರ ಜೀವನಶೈಲಿಯೂ ಬದಲಾಗುತ್ತಿದೆ. ದುಶ್ಚಟ ಹಾಗೂ ಇನ್ನಿತರೆ ಕಾರಣಗಳಿಂದ ಆರೋಗ್ಯದಲ್ಲಿ ಏರುಪೇರಾಗುತ್ತಿದೆ. ಸರ್ಕಾರವು ಕಾಲಕಾಲಕ್ಕೆ ಬುಡಕಟ್ಟು ಜನರ ಆರೋಗ್ಯ ತಪಾಸಣೆ ನಡೆಸಿ ಅವಶ್ಯ ಆರೋಗ್ಯ ಸೌಲಭ್ಯಗಳನ್ನು ಒದಗಿಸುತ್ತಿದೆ. ಸೌಲಭ್ಯಗಳ ಸದ್ಬಳಕೆಯಾಗಬೇಕು. ಆದಿವಾಸಿ ಜನರು ಮಕ್ಕಳಿಗೆ ಉತ್ತಮ ಆರೋಗ್ಯ ಹಾಗೂ ಶಿಕ್ಷಣ ನೀಡಬೇಕು. ಆರೋಗ್ಯ ಸಂವಾದದಲ್ಲಿ ಪಾಲ್ಗೊಂಡು ಯಾವುದೇ ಸಮಸ್ಯೆಗಳಿದ್ದರೂ ಪರಿಹರಿಸಿಕೊಳ್ಳಬೇಕು ಎಂದರು.

ಜಿಲ್ಲಾ ಬುಡಕಟ್ಟು ಗಿರಿಜನ ಅಭಿವೃದ್ಧಿ ಸಂಘದ ಕಾರ್ಯದರ್ಶಿ ಡಾ. ಸಿ. ಮಾದೇಗೌಡ ಅವರು ಕಾರ್ಯಕ್ರಮದಲ್ಲಿ ಪ್ರಾಸ್ತಾವಿಕವಾಗಿ ಮಾತನಾಡಿ ಜಿಲ್ಲೆಯ ಎಲ್ಲಾ ತಾಲೂಕುಗಳಲ್ಲಿರುವ ಆದಿವಾಸಿಗಳ ಸಮಸ್ಯೆಗಳನ್ನು ಪ್ರಸ್ತಾಪಿಸಿ ಬುಡಕಟ್ಟು ಜನರ ಕುಂದುಕೊರತೆಗಳ ಬಗ್ಗೆ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದರು. ಅಧ್ಯಕ್ಷತೆ ವಹಿಸಿದ್ದ ಜಿಲ್ಲಾ ಬುಡಕಟ್ಟು ಗಿರಿಜನ ಅಭಿವೃದ್ಧಿ ಸಂಘದ ಅಧ್ಯಕ್ಷರಾದ ಯು. ರಂಗೇಗೌಡ ಹಾಗೂ ಬೆಂಗಳೂರಿನ ಇನ್ಸಿಟ್ಯೂಟ್ ಆಫ್ ಪಬ್ಲಿಕ್ ಹೆಲ್ತ್ ನಿರ್ದೇಶಕರಾದ ಎನ್.ಎಸ್. ಪ್ರಶಾಂತ್ ಅವರು ಕಾರ್ಯಕ್ರಮದಲ್ಲಿ ಮಾತನಾಡಿದರು. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಎಸ್. ಚಿದಂಬರ, ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ ಎಚ್.ಎಸ್. ಬಿಂದ್ಯಾ, ಸೋಲಿಗರ ಅಭಿವೃದ್ಧಿ ಸಂಘದ ರಾಜ್ಯಾಧ್ಯಕ್ಷರಾದ ಎಂ. ಜಡೇಸ್ವಾಮಿ, ವಿವಿಧ ತಾಲೂಕುಗಳ ಸೋಲಿಗರ ಸಂಘದ ಅಧ್ಯಕ್ಷರಾದ ದೊಡ್ಡಸಿದ್ದಯ್ಯ, ಬೇದಮ್ಮ, ಮಾಧು, ಶಿವಣ್ಣ, ಅರಣ್ಯ ಹಕ್ಕು ಸಮಿತಿ ತಾಲೂಕು ಸದಸ್ಯರಾದ ಕೇತಮ್ಮ, ಇತರೆ ಗಿರಿಜನ ಮುಖಂಡರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

# ಗ್ರಾಮೀಣ ಜನರ ತಳಮಟ್ಟದ ಸಮಸ್ಯೆ ಅರಿತು ಪರಿಹರಿಸಿ

## ಜಿಲ್ಲಾ ನ್ಯಾಯಾಧೀಶರಾದ ಜಿ. ಪ್ರಭಾವತಿ ಸೂಚನೆ




ಚಾಮರಾಜನಗರ, ಕಾನೂನು ಸ್ವಯಂ ಸೇವಕರು ಗ್ರಾಮೀಣ ಜನರಿಗೆ ಕಾನೂನಿನ ಅರಿವು ಮೂಡಿಸಿ ಪ್ರತಿ ಗ್ರಾಮಗಳಲ್ಲಿನ ತಳಮಟ್ಟದ ಸಮಸ್ಯೆಗಳನ್ನು ಪರಿಹರಿಸಲು ನೆರವಾಗುವಂತೆ ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಅಧ್ಯಕ್ಷರಾದ ಜಿ. ಪ್ರಭಾವತಿ ಅವರು ತಿಳಿಸಿದರು.

ನಗರದ ಜೆ.ಹೆಚ್. ಪಟೇಲ್ ಸಭಾಂಗಣದಲ್ಲಿಂದು ರಾಜ್ಯ ಮತ್ತು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾಡಳಿತ, ಬೆಂಗಳೂರಿನ ಔಟ್ಲಾಡ್ ಇಂಡಿಯಾ ಫೌಂಡೇಶನ್ ಹಾಗೂ ತಾಲ್ಲೂಕು ಕಾನೂನು ಸೇವೆಗಳ ಸಮಿತಿ ಸಹಯೋಗದಲ್ಲಿ 2025–26ನೇ ಸಾಲಿನ ಹೊಸ ಅರೆಕಾಲಿಕ ಕಾನೂನು ಸ್ವಯಂ ಸೇವಕರಿಗೆ ಹಮ್ಮಿಕೊಳ್ಳಲಾಗಿರುವ ನಾಲ್ಕು ದಿನಗಳ ತರಬೇತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಸಮಾಜದಲ್ಲಿ ಪ್ರತಿಯೊಬ್ಬರಿಗೂ ಗೌರವಯುತವಾಗಿ ಬದುಕುವ ಹಕ್ಕು ಇದೆ. ಹಾಗೆಯೇ ವಿವಿಧ ಸೌಕರ್ಯಗಳ ಸಮಸ್ಯೆ, ಮೂಲ ಕಾನೂನು ಅರಿವಿನ ಕೊರತೆ ಸೇರಿದಂತೆ ಸಮಸ್ಯೆ ಇದ್ದೇ ಇರುತ್ತದೆ. ಅಂತಹವರನ್ನು ಗುರುತಿಸಿ ಭೇಟಿ ಮಾಡಿ ಅವರ ಸಮಸ್ಯೆಗಳನ್ನು ಅರಿತು, ತಿಳಿವಳಿಕೆ ನೀಡಿ ಪರಿಹರಿಸಲು ಕಾನೂನಿನ ಮೂಲಕ ನೆರವಾಗುವುದೇ ಅರೆಕಾಲಿಕ ಸ್ವಯಂ ಸೇವಕರ ಪ್ರಮುಖ ಕಾರ್ಯವಾಗಿದೆ. ತರಬೇತಿ ಕಾರ್ಯಕ್ರಮದಲ್ಲಿ ಸ್ವಯಂ ಸೇವಕರು ಯಾವುದೇ ಅನುಮಾನ, ಗೊಂದಲಗಳಿದ್ದರೂ ಪರಿಹರಿಸಿಕೊಳ್ಳಲು ಮುಂದಾಗಬೇಕು ಎಂದರು. ಪ್ರಸ್ತುತ 2025–26ನೇ ಸಾಲಿಗೆ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ ಹಾಗೂ ತಾಲೂಕು ಕಾನೂನು ಸೇವಾ ಪ್ರಾಧಿಕಾರಗಳಲ್ಲಿ ಅರೆಕಾಲಿಕ ಸ್ವಯಂ ಸೇವಕರಾಗಿ ಕಾರ್ಯನಿರ್ವಹಿಸಲು ಹೊಸದಾಗಿ ನೇಮಕವಾಗಿರುವ 152 ಸ್ವಯಂ ಸೇವಕರಿಗೆ ಔಟ್ಲಾಡ್ ಇಂಡಿಯಾ ಫೌಂಡೇಶನ್ ವತಿಯಿಂದ ತರಬೇತಿ ಆಯೋಜಿಸಲಾಗಿದೆ. ತರಬೇತಿಯನ್ನು ಸದ್ಬಳಕೆ ಮಾಡಿಕೊಂಡು ಅರೆಕಾಲಿಕ ಸ್ವಯಂ ಸೇವಕರು ಸಮಾಜಕ್ಕೆ ಉತ್ತಮ ಕೊಡುಗೆ ನೀಡುವಂತೆ ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರಾದ ಜಿ. ಪ್ರಭಾವತಿ ಅವರು ತಿಳಿಸಿದರು.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಈಶ್ವರ ಅವರು ಪ್ರಾಸ್ತಾವಿಕವಾಗಿ ಮಾತನಾಡಿ ಮೂಲ ಕಾನೂನನ್ನು ಸಾರ್ವಜನಿಕರಿಗೆ ತಿಳಿಸಿ ಸಹಾಯ ಮಾಡುವುದೇ ಅರೆಕಾಲಿಕ ಸ್ವಯಂ ಸೇವಕರ ಆದ್ಯ ಕರ್ತವ್ಯವಾಗಿದೆ. ಸುಪ್ರೀಂ ಕೋರ್ಟ್ ನಿರ್ದೇಶನದ ಮೇರೆಗೆ ನಾಲ್ಸಾ ಯೋಜನೆಯಡಿ ಪ್ರತಿ ತಾಲೂಕಿನಲ್ಲಿ 25ರಿಂದ 50 ಹಾಗೂ ಜಿಲ್ಲಾ ಮಟ್ಟದಲ್ಲಿ 50ರಿಂದ 100 ಸ್ವಯಂಸೇವಕರನ್ನು ನೇಮಕ ಮಾಡಿಕೊಳ್ಳಲಾಗುತ್ತಿದ್ದು, ಜಿಲ್ಲೆಯಲ್ಲಿ ಒಟ್ಟು 152 ಮಂದಿ ಸ್ವಯಂ ಸೇವಕರು ಸಾರ್ವಜನಿಕರು ಹಾಗೂ ನ್ಯಾಯಾಂಗ ವ್ಯವಸ್ಥೆಯ ಕೊಂಡಿಯಾಗಿ ಕಾರ್ಯನಿರ್ವಹಿಸಲು ನೇಮಕವಾಗಿದ್ದಾರೆ ಎಂದರು. ಜಿಲ್ಲಾಧಿಕಾರಿಗಳಾದ ಶ್ರೀರೂಪ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಎಸ್. ಚಿದಂಬರ, ಔಟ್ಲಾಡ್ ಇಂಡಿಯಾ ಫೌಂಡೇಶನ್ ಸಂಸ್ಥೆಯ ಸಂಪನ್ಮೂಲ ವ್ಯಕ್ತಿಗಳಾದ ಹೆಚ್. ವೆಂಕಟೇಶ್, ಜಾಮೀಜಾಯ್, ಸಿದ್ಧಾರ್ಥ್ ಪಾಟೀಲ್, ಇತರರು ಕಾರ್ಯಕ್ರಮದಲ್ಲಿಸ ಉಪಸ್ಥಿತರಿದ್ದರು.

## ಸಫಾರಿ ಮುಂದುವರಿಸಲು ಆಗ್ರಹ



ಚಾಮರಾಜನಗರ, ಬಂಡೀಪುರ, ನಾಗರಹೊಳೆಯಲ್ಲಿ ಸಫಾರಿ ಮುಂದುವರಿಸಬೇಕು ಎಂದು ಗುಂಡ್ಲುಪೇಟೆ ತಾಲೂಕು ಆದಿವಾಸಿ ಮಹಿಳಾ ಸಂಘದ ಅಧ್ಯಕ್ಷರು , ಜಿಲ್ಲಾ ಅರಣ್ಯ ಹಕ್ಕು ಸಮಿತಿ ಸದಸ್ಯೆ ಪುಟ್ಟಮ್ಮ, ಆಗ್ರಹಿಸಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವ ನದಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು ಬಂಡೀಪುರ ಹಾಗೂ ನಾಗರ ಹೊಳೆಯಲ್ಲಿ ಸಫಾರಿಯನ್ನೇ ನಂಬಿ ಅನೇಕ ಆದಿವಾಸಿ ಕುಟುಂಬಗಳು ಜೀವನ ಸಾಗಿಸುತ್ತಿದ್ದು ಸಫಾರಿಯನ್ನು ಮುಚ್ಚದೇ ಮುಂದುವರಿಸಬೇಕು ಎಂದು ಒತ್ತಾಯಿಸಿದರು.ಸಫಾರಿ ರದ್ದುಪಡಿಸಿದ ಮಾತ್ರಕ್ಕೆ ಮಾನವ– ಪ್ರಾಣಿ ಸಂಘರ್ಷ ನಿಲ್ಲುವುದಿಲ್ಲ. ಅರಣ್ಯ ಇಲಾಖೆಯು ಆದಿವಾಸಿಗಳಿಗೆ ಕೆಲಸ ಕೊಟ್ಟಿದ್ದು ಅರಣ್ಯ ಇಲಾಖೆ ಹಾಗೂ ಆದಿವಾ ಸಿಗಳು ನಡುವೆ ಉತ್ತಮ ಸಂಬಂಧ ಇದೆ. ಆದರೆ ಕೆಲ ವರು ಮುಗ್ಧ ಆದಿವಾಸಿಗಳನ್ನು ಬಳಸಿಕೊಂಡು ಇಲ್ಲ ಸಲ್ಲದ ಹೇಳಿಕೆಗಳನ್ನುಕೊಡಿಸುತ್ತಿರುವುದು ಸರಿಯಲ್ಲ ಎಂದರು.

ಮಹಾರಾಜರ ಕಾಲದಲ್ಲಿ ಸಫಾರಿ ಶುರುವಾದಾಗಿ ನಿಂದಲೂ ಇಲ್ಲಿಯ ತನಕ ಸಫಾರಿಯನ್ನು ಮುಚ್ಚಿರಲಿಲ್ಲ. ಆದರೆ ಇತ್ತೀಚಿನ ಕೆಲ ಬೆಳವಣಿಗೆಯಿಂದಾಗಿ ಸಫಾರಿ ಯನ್ನು ಮುಚ್ಚಲಾಗಿತ್ತು. ಇದರಿಂದ ಇದನ್ನೇ ನಂಬಿ ಕೊಂಡಿದ್ದ ಹೋಟೆಲ್‌ಗಳು, ಡ್ರೈವರ್‌ಗಳು, ಅಂಗಡಿಗಳ ಮಾಲೀಕರು ಸಂಕಷ್ಟಕ್ಕೀಡಾದರು ಎಂದರು. ಸಫಾರಿ ಮುಚ್ಚಿದ್ದರಿಂದ ಅನೇಕ ಕುಟುಂಬಗಳು ಜೀವನ ಸಾಗಿ ಸಲು ಆಗದೇ ಬೀದಿಗೆ ಬಂದಿದೆ. ಈಗ ಸಫಾರಿ ಪುನರಾ ರಂಭವಾಗಿದ್ದು ಮುಂದಿನ ದಿನಗಳಲ್ಲಿ ಯಾವುದೇ ಕಾರ ಣಕ್ಕೂ ಸಫಾರಿಯನ್ನು ಮುಚ್ಚಬಾರದು. ಎಂದರು. ಗೋಷ್ಠಿಯಲ್ಲಿ ತಾಲೂಕು ಆದಿವಾಸಿ ಮಹಿಳಾ ಸಂಘದ ಅಧ್ಯಕ್ಷರು, ಜಿಲ್ಲಾ ಅರಣ್ಯ ಹಕ್ಕು ಸಮಿತಿ ಸದಸ್ಯೆ ಪುಟ್ಟಮ್ಮ, ಪ್ರಧಾನ ಕಾರ್ಯದರ್ಶಿ ಎಸ್.ರಾಜೇಂದ್ರ ಮದ್ದೂರು ಕಾಲೋನಿ, ಕೊಂಗಳಯ್ಯ, ಮಾಧು, ರಾಣಿ ಹಾಜರಿದ್ದರು.

# ಏಕಲವ್ಯನಗರದ 22 ಮನೆಗಳ ಹಂಚಿಕೆ

ಮೈಸೂರು: ಕ್ಷೇತ್ರದಲ್ಲಿನ ವಿವಿಧ ಕೊಳಗೇರಿ ಪ್ರದೇಶ ನಿವಾಸಿಗಳಿಗೆ ಜೆಎನ್ ನರ್ಮ್?ಬಿ.ಎಸ್.ಯು.ಪಿ. ಯೋಜನೆಯಡಿ ಏಕಲವ್ಯನಗರದಲ್ಲಿ ನಿರ್ಮಿಸಲಾಗಿರುವ ಮನೆಗಳ ಪೈಕಿ 22 ಮನೆಗಳನ್ನು ಫಲಾನುಭವಿಗಳಿಗೆ ಲಾಟರಿ ಮುಖಾಂತರ ಶಾಸಕ ಕೆ.ಹರೀಶ್ ಗೌಡ ಹಂಚಿಕೆ ಮಾಡಿದರು.

ಬಳಿಕ ಮಾತನಾಡಿ ಏಕಲವ್ಯನಗರ ಬಡಾವಣೆಯಲ್ಲಿ ಜೆ.ಎನ್.ನರ್ಮ್?ಬಿ.ಎಸ್.ಯು.ಪಿ. ಯೋಜನೆಯಡಿಯಲ್ಲಿ ನಿರ್ಮಿಸಲಾಗಿರುವ ಜಿ+3 ಮಾದರಿ ವಸತಿ ಸಮುಚ್ಛಯಗಳಲ್ಲಿ ಖಾಲಿಯಿರುವ ಮನೆಗಳನ್ನು ಹಂಚಿಕೆ ಮಾಡಲು ನಿಯಮಾನುಸಾರ ಫಲಾನುಭವಿಗಳ ಪಟ್ಟಿಯನ್ನು ಸಿದ್ದಪಡಿಸಲಾಗಿದೆ. ಸುಮಾರು ವರ್ಷಗಳಿಂದ ಹಂಚಿಕೆ ಮಾಡದ ಕಾರಣ ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಯ ಸಹಾಯಕ ಕಾರ್ಯಪಾಲಕ ಅಭಿಯಂತರರನ್ನು ತರಾಟೆಗೆ ತೆಗೆದುಕೊಂಡು, ಈ ದಿನ ಹಂಚಿಕೆ ಮಾಡಿರುವ 22 ಫಲಾನುಭವಿಗಳಲ್ಲದೆ, ಉಳಿಕೆ ಇರುವ ಮನೆಗಳನ್ನು ಸಹ ಫಲಾನುಭವಿಗಳ ಪಟ್ಟಿಯಲ್ಲಿರುವಂತೆ ಪರಿಶೀಲಿಸಿ ಲಾಟರಿ ಮುಖಾಂತರ ಅವರಿಗೂ ಸಹ ಹಂಚಿಕೆ ಮಾಡಲು ಅಗತ್ಯ ಕ್ರಮವಹಿಸಲು ಸೂಚಿಸಿದರು.

ಮನೆಗಳನ್ನು ಪಡೆದುಕೊಂಡಿರುವ ಫಲಾನುಭವಿಗಳು ಹಂಚಿಕೆಯಾಗಿರುವ ಮನೆಗಳಿಗೆ ನಿಗಧಿಪಡಿಸಿದ ಹಣವನ್ನು ಪಾವತಿಸಿ, ಎಲ್ಲಾ ದಾಖಲೆಗಳನ್ನು ಪಡೆದುಕೊಂಡು, ಹಂಚಿಕೆಯಾಗಿ ರುವ ಮನೆಗಳಲ್ಲಿಯೇ ವಾಸಿಸಬೇಕು, ಅದನ್ನು ಇನ್ನೊಬ್ಬರಿಗೆ ಬಾಡಿಗೆ, ಭೋಗ್ಯ ಹಾಕಿ ಪುನಃ ಕೊಳಗೇರಿಗಳಲ್ಲಿ ವಾಸಿಸಬಾರದೆಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಕೊರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಯ ಕಾರ್ಯಪಾಲಿಕ ಅಭಿಯಂ ತರ ಮಹಮ್ಮದ್ ಜಫ್ರುಲ್ಲಾ, ಸಹಾಯಕ ಕಾರ್ಯಪಾಲಿಕ ಅಭಿಯಂ ತರ ಜಿ.ಎಸ್.ರಾಮಚಂದ್ರ, ಸಹಾಯಕ ಅಭಿಯಂ ತರ ಜೆ.ಝಾನ್ಸಿ ರಾಯ್, ದೇವರಾಜ ಬ್ಲಾಕ್ ಅಧ್ಯಕ್ಷ ಡಿ.ನಾಗಭೂ ಷಣ್, ಇಂದಿರಾಗಾಂಧಿ ಬ್ಲಾಕ್ ಅಧ್ಯಕ್ಷ ರವಿ ಮಂಚೇಗೌಡನಕೊಪ್ಪಲು, ಸ್ಥಳೀಯ ಮುಖಂ ಡರಾದ ಷಣ್ಮುಗಂ, ವಾರ್ಡ್ ಅಧ್ಯಕ್ಷರಾದ ಶ್ರೀ ಕುಮಾರ್, ತಂಬಿ ಇನ್ನಿತರರು ಉಪಸ್ಥಿತರಿದ್ದರು.



# ಕಾಂಗ್ರೆಸ್ ತರಬೇತಿ, ಕಾರ್ಯಾಗಾರ

ಗುಂಡ್ಲುಪೇಟೆ: ಕಾಂಗ್ರೆಸ್ ಪಕ್ಷದ ಬೂತ್ ಲೆವೆಲ್ ಏಜೆಂಟ್ 2ರ ತರಬೇತಿ ಮತ್ತು ಕಾರ್ಯಗಾರರ ಸಮಾವೇಶವನ್ನು ಪಟ್ಟಣದ ಬಸವೇಶ್ವರ ಕಮ್ಯುನಿಟಿ ಹಾಲ್ ನಲ್ಲಿ ನಡೆಸಲಾಯಿತು.

ಶಾಸಕ ಎಚ್ ಎಂ ಗಣೇಶ್ ಪ್ರಸಾದ್ ಮಾತನಾಡಿ ಮುಂದಿನ ದಿನಗಳಲ್ಲಿ ಸ್ಥಳೀಯ ಚುನಾವಣೆ ನಡೆಯುವ ವಿಶ್ವಾಸವಿದೆ ಪಕ್ಷದ ಸಂಘಟನೆ ಮಾಡಿ ಪಕ್ಷವನ್ನು ಸಧೃಡವಾಗಿ ಕಟ್ಟಲು ಶ್ರಮಿಸುವಂತೆ ಕರೆ ನೀಡಿದರು. ಮಹದೇವಪ್ರಸಾದ್ ಕಾಲದಲ್ಲಿಸಾಕಷ್ಟು ಅಭಿವೃದ್ಧಿ ಕೆಲಸವಾಗಿದೆ ಕಲ್ಕಟ್ಟ ಕೆರೆ ಬಗ್ಗೆ ಮಾತಾಡುತ್ತಾರೆ ಅದು ನಾಗರತ್ನಮ್ಮ ಕಾಲದಲ್ಲಿ ಮಾಡಿದ್ದು ಅವರನ್ನು ನೆನೆಸಿಕೊಳ್ಳುತ್ತಿಲ್ಲ, ಸುಳ್ಳು ಹೇಳಿ ರಾಜಕೀಯಮಾಡಲು ನಮಗೆ ಬರಲ್ಲ ಎಂದರು.

ಪ್ರದೇಶ ಕಾಂಗ್ರೆಸ್ ಸಮಿತಿ ಉಸ್ತುವಾರಿ ಸುದರ್ಶನ್ ಮಾತನಾಡಿ ಕೇಂದ್ರ ಬಿಜೆಪಿ ಜನಸಾಮಾನ್ಯರಿಗೆ ದುಡಿಯುತ್ತಿಲ್ಲ ಅವರು ಅದಾನಿ ಅಂಬಾನಿಗಾಗಿ ಕೆಲಸ ಮಾಡುತ್ತಾರೆ ಆಗಾಗಿ ಕಾಂಗ್ರೆಸ್ ನಲ್ಲಿ ಸ್ಥಾನಮಾನ ಪಡೆಯಬೆಕಾದರೆ ಪಕ್ಷದ ಸಿದ್ದಾಂತಕ್ಕೆ ಒಳಗಾಗಿ ಪಕ್ಷದ ಅಭ್ಯರ್ಥಿಪರ ದುಡಿಯುವರ ಮನಸ್ಸಿನಲ್ಲಿ ಇರುವವರಾಗಬೇಕು ಇಲ್ಲದಿದ್ದರೆ ಯಾವ ಸ್ಥಾನ ಸಿಕ್ಕರು ಪ್ರಯೋಜನವಿಲ್ಲ ಎಂದರು.

ಎಸ್ ಸಿ ಬಸವರಾಜು ಮಾತನಾಡಿ ರಾಹುಲ್ ಗಾಂಧಿಯವರು ಲೋಕಸಭೆ ಚುನಾವಣೆಯಲ್ಲಿ ಕಳ್ಳಮತದಾನ ನಡೆದಿದೆ ಎಂದು ಆರೋಪಿಸಿದ್ದರು, ಬಿಎಲ್ ಎ– 1 ಮತ್ತು ಬಿಎಲ್ ಎ– 2 ಎಂದು ವಿಂಗಡನೆ ಮಾಡಲಾಗಿದೆ ಬಿಎಲ್ ಎ–1 ಗಿಂತ ಬಿಎಲ್ ಎ– 2 ಅವರಿಗೆ ಹೆಚ್ಚಿನ ಜವಬ್ದಾರಿ ಇದೆ ಶಾಸಕರ ಕೈ ಬಲಪಡಿಸಬೆಕು ಎಂದರೆ ಏಜೆಂಟರು ಕಾರ್ಯಕರ್ತರು ಶ್ರಮಿಸಬೇಕು ಮತದಾರರ ಸೇರ್ಪಡೆ, ತಿದ್ದುಪಡಿ ನಡೆಸುವ ಜವಬ್ದಾರಿ ಹೊರಬೇಕು ಪಕ್ಷಕ್ಲಾಗಿ ದುಡಿಯಬೇಕು ಎಂದರು.



ಈ ಸಂದರ್ಭದಲ್ಲಿ ಕಾಂಗ್ರೆಸ್ ಜಿಲ್ಲಾಧ್ಯಕ್ಷ ಮರಿಸ್ವಾಮಿ, ಎಸ್‌ಸಿ ಬಸವರಾಜು, ಜಿಲ್ಲಾ ಪ್ರಚಾರ ಸಮಿತಿ ಅಧ್ಯಕ್ಷ ಮಧುಸೂದನ್,ಮಾಜಿ ಕಾಡಾ ಅಧ್ಯಕ್ಷ ಹೆಚ್ ಎಸ್ ನಂಜಪ್ಪ, ಮಾಜಿ ಜಿ.ಪಂ ಉಪಾಧ್ಯಕ್ಷ ಕೆ ಎಸ್ ಮಹೇಶ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಪಿ ಬಿ ರಾಜಶೇಖರ್, ಟಿಎಪಿಸಿಎಂಎಸ್ ಅಧ್ಯಕ್ಷ ಮಡಿವಾಳಪ್ಪ, ಮತ್ತಿತರರಿದ್ದರು.

# ತಂಬಾಕು ಬೆಲೆ ದಿಢೀರ್ ಕುಸಿತ: ರೈತರ ಆಕ್ರೋಶ

ಎಚ್.ಡಿ.ಕೋಟೆ: ತಂಬಾಕು ಖರೀದಿಯಲ್ಲಿ ಏಕಾಏಕಿ 60ರೂ ಕುಸಿತದಿಂದ ಸಂಕಷ್ಟಕ್ಕೀಡಾಗಿದ್ದು, ಹಿಂದೆ ಇದ್ದ ಬೆಲೆಗೆ ಖರೀದಿಸಬೇಕು ಎಂದು ಆಗ್ರಹಿಸಿ ಬೆಳೆಗಾರರು ಶಾಂತಿಪುರ ಗ್ರಾಮದಲ್ಲಿರುವ ತಂಬಾಕು ಮಂಡಳಿಯಲ್ಲಿ ಅಧಿಕಾರಿಯೊಂದಿಗೆ ಕೆಲಕಾಲ ಮಾತಿನ ಚಕಮಕಿ ನಡೆಸಿದರು.

**ಬಿತ್ತನೆ, ಫಸಲಿನ ಆರೈಕೆ,**

ಕಾರ್ಮಿಕರ ಕೂಲಿ ಖರ್ಚು, ಸಾಗಾಣಿಕೆ ವೆಚ್ಚಗಳು ದಿನದಿಂದ ದಿನಕ್ಕೆ ಏರಿಕೆಯಾಗುತ್ತಿದೆ. ಹೀಗಿದ್ದರೂ ತಂಬಾಕುವಿನ ಬೆಲೆ ಕುಸಿದಿರುವುದರಿಂದ ಸಾಲ ಮಾಡಿ ಬೆಳೆ ಬೆಳೆದವರು ಸಂಕಷ್ಟಕ್ಕೀಡಾಗುತ್ತಾರೆ ಈ ಕೂಡಲೆ ಬೆಲೆ ಏರಿಕೆ ಮಾಡಬೇಕು ಕನಿಷ್ಠ ಹಿಂದೆ ಇದ್ದ ಬೆಲೆಗಾದರೂ ಖರೀದಿಸಬೇಕು ಎಂದು ರೈತರು ಆಗ್ರಹಿಸಿದರು. ಕರ್ನಾಟಕ ರಾಜ್ಯ ರೈತ ಸಂಘದ ಮುಖಂಡ ಬಳ್ಳೂರುಂಡಿ ಶಿವ ನಾಗಪ್ಪ ಮಾತನಾಡಿ, ಇತ್ತೀಚೆಗೆ ಸಂಸದ ಯದುವೀರ್ ಹಾಗೂ ಜಿಲ್ಲಾಧಿಕಾರಿ ನೇತೃತ್ವದಲ್ಲಿ ಸಭೆ ನಡೆದಿದ್ದು, ಸರಿಯಾದ ಬೆಂಬಲ ಬೆಲೆ ಸಿಗಲಿಲ್ಲ ಅಂದರೇ ಮಾರ್ಕೆಟ್ ನಡೆಯುವುದಕ್ಕೆ ಬಿಡುವುದಿಲ್ಲ ಎಂದು ಹೇಳಿದಾಗ ಅಧಿಕಾರಿಗಳು ಸರಿಪಡಿಸುತ್ತೇವೆ ಎಂದು ಹೇಳಿದ್ದರು. ಇದೀಗ, ಏಕಾಏಕಿ 60ರೂ, ಕಡಿಮೆಯಾಗಿದೆ.ರೈತರ ಪರ ಕಾಳಜಿ ಇರುವ ಸಂಸದ ಸುನೀಲ್ ಬೋಸ್ ಹಾಗೂ ಶಾಸಕ ಅನಿಲ್ ಚಿಕ್ಕಮಾದು ಮಾರುಕಟ್ಟೆಗೆ ಭೇಟಿ ನೀಡಿ ರೈತರ ಸಮಸ್ಯೆಗಳನ್ನು ಬಗೆಹರಿಸಬೇಕು. ರೈತರು ವಿಷ ಕುಡಿಯುವ ಸಂದರ್ಭ ನಿರ್ಮಾಣವಾಗಿದೆ ಇದರ ಬಗ್ಗೆ ಜನಪ್ರತಿನಿಧಿಗಳು ಧ್ವನಿಯತ್ತಬೇಕು ಎಂದು ಹೇಳಿದರು.



ರೈತ ನವೀನ್ ಮಾತನಾಡಿ, ಕೋಟೆ ಪಟ್ಟಣದ ತಂಬಾಕು ಮಾರುಕಟ್ಟೆಯಲ್ಲಿ ಮೊನ್ನೆಗಿಂತ ಇವತ್ತು ದಿಢೀರನೆ ಬೆಂಬಲ ಬೆಲೆ ಕುಸಿದಿದೆ. ರೈತರಿಗೆ ಜೀವನ ಮಾಡುವುದೇ ಕಷ್ಟವಾಗಿದೆ ರೈತರ ಪರ ಎನ್ನುವ ಸರ್ಕಾರದ ಪ್ರತಿನಿಧಿಗಳು ನಮ್ಮ ಕಷ್ಟಗಳನ್ನು ಕೇಳುತ್ತಿಲ್ಲ. ತಕ್ಷಣವೇ ಸಂಸದ ಸುನಿಲ್ ಬೋಸ್ ಶಾಸಕ ಅನಿಲ್ ಚಿಕ್ಕಮಾದು ಭೇಟಿ ನೀಡಿ ರೈತರಿಗೆ ಬೆಂಬಲ ಬೆಲೆ ಕೊಡಿಸುವಲ್ಲಿ ಧ್ವನಿ ಎತ್ತಬೇಕು. ರೈತರು ಸತ್ತರೆ ಪರಿಹಾರದ ಚೆಕ್ ಕೊಡುವ ನೀವು ರೈತರಿಗೆ ಬೆಂಬಲ ಬೆಲೆ ಕೊಡಿಸುವುದರಲ್ಲಿ ವಿಫಲವಾಗಿದ್ದೀರಾ, ಸಂಪೂರ್ಣವಾಗಿ ತಂಬಾಕು ನಿಲ್ಲಿಸಿ ಇಲ್ಲವಾದರೆ ಒನ್ ಟೈಮ್ ಸೆಟಲ್ ಮೆಂಟ್ ಮಾಡಿ. ಇಲ್ಲದಿದ್ದರೆ ರೈತರು ಹೋರಾಟ ಮಾಡಬೇಕಾಗುತ್ತದೆ ಎಂದು ಎಚ್ಚರಿಸಿದರು. ಬೋರ್ಡ್ ಕಮಿಟಿ ಅಧ್ಯಕ್ಷ ಪೃಥ್ವಿ, ರೈತ ಸಂಘದ ಉಪಾಧ್ಯಕ್ಷ ಒಡೆಯನಪುರ ರಮೇಶ್, ಸಿದ್ದು ನಾಗಣಪುರ ಸೇರಿದಂತೆ ಹಲವು ರೈತ ಮುಖಂಡರು ಇದ್ದರು.

### ಲಾಭ ಕಡಿತ

**ಕೇಂದ್ರ ಅಬಕಾರಿ 2020–25 ರ ಕಾಯ್ದೆ ಹೇಳುವಂತೆ ಜಿಎಸ್ಟಿ 20% ಇತ್ತು ಇವಾಗ 40% ಜಾಸ್ತಿಯಾಗಿದೆ. ಅಬಕಾರಿ ಸುಂಕ 1944 ತಿದ್ದುಪಡಿ 2020–25ರಲ್ಲಿ ರಾಜ್ಯಸಭೆ ಮತ್ತು ಲೋಕಸಭೆ ಡಿ.5ರಲ್ಲಿ ಆಕ್ಟ್ ಮಾಡಿ, ಬಿಲ್ ಪಾಸ್ ಮಾಡಿರುವುದರಿಂದ ಕಾಯ್ದೆಯಾಗಿದೆ. ತಂಬಾಕು 20% ಪರ್ಸೆಂಟ್ ಕಡಿಮೆಯಾಗಿ ಗಣನೀಯವಾಗಿ ಖುಷಿಯುತ್ತಿದೆ. 300, 320ಕ್ಕೆ ನಾವು ತೆಗೆದುಕೊಂಡರೆ ಲಾಭ ಗಳಿಸಲಾಗುವುದಿಲ್ಲ. ಮುಂದಿನ ದಿನಗಳಲ್ಲಿ ಇದರ ಬಗ್ಗೆ ಚರ್ಚಿಸುತ್ತೇನೆ. 320, 310, 300, ಈ ದಿನ 270 ಇಳಿಕೆಯಾಗಿದೆ ಎಂದು ತಂಬಾಕು ಮಾರುಕಟ್ಟೆ ಸೂಪರಿಂಟೆಂಡೆಂಟ್ ವಿಜಯಕುಮಾರ್ ಮಾಹಿತಿ ನೀಡಿದರು.**

# ವಿದ್ಯಾಶ್ರೀ ಪ್ರಶಸ್ತಿಗೆ ಅರ್ಜಿ ಆಹ್ವಾನ

ಮೈಸೂರು: ಮೈಸೂರು ಜಿಲ್ಲಾ ಉಪ್ಪಾರ ನೌಕರರ ಮತ್ತು ವೃತ್ತಿಪರರ ಸಂಘದಿಂದ ಕಳೆದ ಸಾಲಿನ ವಿವಿಧ ಪರೀಕ್ಷೆಗಳಲ್ಲಿ ಸಾಧನೆ ಮಾಡಿರುವ ಸಮುದಾಯದ ವಿದ್ಯಾರ್ಥಿಗಳಿಗೆ ಭಗೀರಥ ವಿದ್ಯಾಶ್ರೀ ಪ್ರಶಸ್ತಿ ನೀಡಿ ಗೌರವಿಸುತ್ತಿದ್ದು, ಅರ್ಹರು ಅರ್ಜಿ ಸಲ್ಲಿಸಬೇಕೆಂದು ಸಂಘದ ಅಧ್ಯಕ್ಷ ಜಿ. ರಾಮಚಂದ್ರ ಮನವಿ ಮಾಡಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಎಸ್‌ಎಸ್ಎಲ್‌ಸಿ ಶೇ. 85ಕ್ಕಿಂತ ಹೆಚ್ಚು, ಪಿಯುಸಿ ಸಹಾ ಶೇ. 85ಕ್ಕಿಂತ ಹೆಚ್ಚು, ಸಿಬಿಎಸ್‌ಇ ಮತ್ತು ಐಸಿಎಸ್‌ಇ ಪರೀಕ್ಷೆಯಲ್ಲಿ ಶೇ. 80, ಸೀನಿಯರ್ ಸೆಕೆಂಡರಿಯಲ್ಲಿ (12 ನೇ ತರಗತಿ) ಶೇ. 80ಕ್ಕಿಂತ ಹೆಚ್ಚು ಅಂಕ ಪಡೆದವರು ಮಾ. 10 ರ ಮುನ್ನ ಮೈಸೂರು, ಮಂಡ್ಯ, ಕೊಡಗು ಜಿಲ್ಲೆಯವರಾಗಿದ್ದರೆ ನಗರದ ಜಯನಗರದಲ್ಲಿನ ಲಿಂಗಣ್ಣ, ದೂ. 99809 06469, ಚಾಮರಾಜನಗರ ಜಿಲ್ಲೆಯವರಾಗಿದ್ದರೆ ಅಲ್ಲಿನ ಜಯಕುಮಾರ್, ದೂ. 98863 71687, ಅವರಿಗೆ ಅರ್ಜಿ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗೆ ಇದೇ ದೂ. ಸಂಖ್ಯೆ ಸಂಪರ್ಕಿಸಬಹುದಾಗಿದೆ ಎಂದು ತಿಳಿಸಿದರು. ಪ್ರಧಾನ ಕಾರ್ಯದರ್ಶಿ ಡಾ.ಎಂ. ಗೋವಿಂದರಾಜು, ಜೆ. ಕೃಷ್ಣ, ಸೋಮಣ್ಣ, ಎಸ್. ಮಹದೇವು, ಮಲ್ಲಶೆಟ್ಟಿ ಹಾಜರಿದ್ದರು.



## ಮನರೇಗಾ ಮರು ಜಾರಿಗೆ ಆಗ್ರಹಿಸಿ ಕಾಂಗ್ರೆಸ್ ಪ್ರತಿಭಟನೆ



ಗುಂಡ್ಲುಪೇಟೆ: ಕೇಂದ್ರ ಯುಪಿಎ ಸರ್ಕಾರ ಜಾರಿಗೆ ತಂದಿದ್ದ ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆಯ (ಮನರೇಗಾ) ಮರು ಜಾರಿಗೆ ಆಗ್ರಹಿಸಿ ಚಾಮರಾಜನಗರ ಜಿಲ್ಲಾ ಕಾಂಗ್ರೆಸ್ ಸಮಿತಿ ಗುಂಡ್ಲುಪೇಟೆ ಹಾಗೂ ಬೇಗೂರು ಬ್ಲಾಕ್ ಕಾಂಗ್ರೆಸ್ ಸಮಿತಿ ಗುಂಡ್ಲುಪೇಟೆ ವಿಧಾನಸಭಾ ಕ್ಷೇತ್ರ ವತಿಯಿಂದ.ಕೇಂದ್ರ ಸರ್ಕಾರ ರೂಪಿಸಿರುವ 'ವಿಬಿ ಜಿ ರಾಮ್ ಜಿ' ಯೋಜನೆಯನ್ನು 2026–27ನೇ ಸಾಲಿನಿಂದ ಜಾರಿಗೊಳಿಸಲು ಮುಂದಾಗಿರುವುದನ್ನು ಖಂಡಿಸಿ ಶಾಸಕ ಎಚ್ ಎಂ ಗಣೇಶ್ ಪ್ರಸಾದ್ ನೇತೃತ್ವದಲ್ಲಿ ಕಾಂಗ್ರೆಸ್ ಪ್ರತಿಭಟನೆ ನಡೆಸಲಾಯಿತು

ಪಟ್ಟಣದ ಹೊರವಲಯದಲ್ಲಿರುವ ಬಸವೇಶ್ವರ ಕಮ್ಯುನಿಟಿ ಹಾಲ್ ನಿಂದ ತಾಲ್ಲೂಕು ಕಚೇರಿಯ ವರೆಗೆ ಪಾದಯಾತ್ರೆ ಮೂಲಕ ಸಾಗಿ ಕೇಂದ್ರ ಸರ್ಕಾರದ ವಿರುದ್ಧ ಧಿಕ್ಕಾರ ಘೋಷಣೆ ಕೂಗಿ ರಾಷ್ಟ್ರಪತಿಗಳಿಗೆ ಮನರೇಗಾ ಮುಂದುವರೆಸುವಂತೆ ಒತ್ತಾಯಿಸಿ ತಹಶೀಲ್ದಾರ್ ಮೂಲಕ ಮನವಿ ಸಲ್ಲಿಸಿದರು. ಈ ಸಂದರ್ಭದಲ್ಲಿ ಶಾಸಕ ಗಣೇಶ್ ಪ್ರಸಾದ್ ಮಾತನಾಡಿ ಗ್ರಾಮೀಣ ವಿಕಾಸ ಗುರಿಯೊಂದಿಗೆ ಯುಪಿಎ ಸರ್ಕಾರವು ಮನರೇಗಾ ಯೋಜನೆಯನ್ನು ಜಾರಿಗೆ ತಂದಿತ್ತು. ಗ್ರಾಮಗಳಿಗೆ ಬೇಕಾದ ಕಾಮಗಾರಿಗಳನ್ನು ಆಯಾ ಗ್ರಾಮಗಳೇ ನಿರ್ಧರಿಸುವಂತಹ ಅಧಿಕಾರವನ್ನು ಸಹ ನೀಡಿತ್ತು. ಈಗ ಎನ್‌ಡಿಎ ಸರ್ಕಾರವು ಮನರೇಗಾ ಯೋಜನೆಯ ಮೂಲ ಉದ್ದೇಶಗಳನ್ನು ತೆಗೆದುಹಾಕಿದೆ. ಗ್ರಾಮಗಳಿಗೆ ಬೇಕಾದ ಕಾಮಗಾರಿಗಳನ್ನು ದೆಹಲಿಯಲ್ಲಿ ಕುಳಿತವರು ನಿರ್ಧಾರಿಸುವಂತೆ ಮಾಡಿದೆ. ಗ್ರಾಮಗಳ ಅಗತ್ಯ ಹಾಗೂ ಆದ್ಯತೆಗಳಿಗೆ ಅವಕಾಶವೇ ಇಲ್ಲದಂತೆ ಮಾಡಿದೆ' ಎಂದರು. ಈ ಸಂದರ್ಭದಲ್ಲಿ ಕಾಂಗ್ರೆಸ್ ಜಿಲ್ಲಾಧ್ಯಕ್ಷ ಮರಿಸ್ವಾಮಿ, ಜಿಲ್ಲಾ ಉಸ್ತುವಾರಿ ಸುದರ್ಶನ್, ಎಸ್ ಸಿ ಬಸವರಾಜು, ಚಾಮುಲ್ ನಿರ್ದೇಶಕ ನಂಜುಂಡ ಪ್ರಸಾದ್ ,ಜಿಲ್ಲಾ ಪ್ರಚಾರ ಸಮಿತಿ ಅಧ್ಯಕ್ಷ ಮಧುಸೂದನ್,ಮಾಜಿ ಕಾಡಾ ಅಧ್ಯಕ್ಷ ಹೆಚ್ ಎಸ್ ನಂಜಪ್ಪ, ಮಾಜಿ ಜಿ.ಪಂ ಉಪಾಧ್ಯಕ್ಷ ಕೆ ಎಸ್ ಮಹೇಶ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಪಿ ಬಿ ರಾಜಶೇಖರ್, ಟಿಎಪಿಸಿಎಂಎಸ್ ಅಧ್ಯಕ್ಷ ಮಡಿವಾಳಪ್ಪ, ನಾಗೇಶ್ ಮತ್ತಿತರರಿದ್ದರು.

## ಇ–ಕೆವೈಸಿ ಮಾಡಿಸಿಕೊಳ್ಳಿ

ಗುಂಡ್ಲುಪೇಟೆ: ರಾಜ್ಯ ಮತ್ತು ಕೇಂದ್ರ ಸರ್ಕಾರಗಳ ವಿವಿಧ ಯೋಜನೆಗಳಾದ ಪ್ರಧಾನ ಮಂತ್ರಿ ಕಿಸಾನ್ ಸಮ್ಮಾನ್ ನಿಧಿ ರೂ.6000 ಸೌಲಭ್ಯ, ಪ್ರಧಾನ ಮಂತ್ರಿ ಫಸಲ್ ಭೀಮಾ ಯೋಜನೆ, ರಾಜ್ಯ ನೇರ ನಗದು ವರ್ಗಾವಣೆ ಯೋಜನೆ, ಬೆಳೆ ಹಾನಿ ಪರಿಹಾರ, ಕನಿಷ್ಟ ಬೆಂಬಲ ಬೆಲೆ, ಬ್ಯಾಂಕ್ ಸಾಲ ಪಡೆಯಲು ಕೃಷಿ ಮತ್ತು ಇತರೆ ಇಲಾಖೆಗಳ ವಿವಿಧ ಯೋಜನೆಗಳಲ್ಲಿ ಹಾಲಿ ಒದಗಿಸು ತ್ತಿರುವ ಮತ್ತು ಭವಿಷ್ಯದಲ್ಲಿ ಒದಗಿಸಲಾಗುವ ಯೋಜನೆಗಳ ಸೌಲಭ್ಯ ಪಡೆಯಲು ಈಗಾಗಲೇ ಲಭ್ಯವಿರುವ ಹಾಗೂ ಕಂದಾಯ ಇಲಾಖೆಯ ಪಹಣಿಗಳಲ್ಲಿ ಕೇಂದ್ರೀಕರಿಸಿರುವ ರೈತರ ಭೂ ಹಿಡುವಳಿ ವಿವರಗಳನ್ನು ಕಡ್ಡಾಯವಾಗಿ ರಾಜ್ಯಮಟ್ಟದಲ್ಲಿ ಫ್ರೂಟ್ಸ್ ಮತ್ತು ರಾಷ್ಟ್ರಮಟ್ಟದಲ್ಲಿ ಅಗ್ರಿಸ್ಟಾಕ್ ರೂಪದಲ್ಲಿ ರಚಿಸಲಾಗುತ್ತಿರುವ ಒಂದು ಕೇಂದ್ರ ನೋಂದಾಯಿತ ರೈತರ ಸಂಖ್ಯೆಯನ್ನು ಸೃಜಿಸಿ ಕೊಂಡು ಕೇಂದ್ರೀಕರಿಸಿ ನವೀಕರಿಸಲು ಅತ್ಯವಶ್ಯಕವಾಗಿರುತ್ತದೆ. ಪ್ರಸ್ತುತ ಕೇಂದ್ರ ಸರ್ಕಾರದ ಪ್ರಧಾನ ಮಂತ್ರಿ ಕಿಸಾನ್ ಸಮ್ಮಾನ್ ನಿಧಿಯೋಜನೆಯ ಸೌಲಭ್ಯವನ್ನು ಮುಂದುವರಿಸಿಕೊಳ್ಳಲು ಗುಂಡ್ಲುಪೇಟೆ ತಾಲ್ಲೂಕಿನಲ್ಲಿ 8142 ರೈತರ ಮಾಹಿತಿ ನೊಂದಣಿ ಮಾಡಿಸಿ ಕೇಂದ್ರೀಕರಸಿ ನವೀಕರಿಸಿಕೊಳ್ಳಲು ಬಾಕಿಯಿರುತ್ತದೆ.ಆದ ಕಾರಣ ಫೆಬ್ರವರಿ 26 ರೊಳಗೆ ರೈತರು ಹತ್ತಿರದ ರೈತ ಸಂಪರ್ಕ ಕೇಂದ್ರ, ತೋಟಗಾರಿಕೆ ಇಲಾಖೆ, ರೇಷ್ಮೆ ಇಲಾಖೆ, ಪಶುಸಂಗೋ ಪನೆ ಇಲಾಖೆ ಅಥವಾ ಗ್ರಾಮ ಒನ್ ಕೇಂದ್ರಗಳಲ್ಲಿ ಇ–ಕೆವೈಸಿ ಮಾಡಿಸಿಕೊಂಡು ವಿವಿಧ ಇಲಾಖೆಯ ಯೋಜನೆಗಳ ಸೌಲಭ್ಯ ಪಡೆಯಲು ಪ್ರಕಟಣೆಯಲ್ಲಿ ಮನವಿ ಮಾಡಿದ್ದಾರೆ.

# ಜೀವನದಲ್ಲಿ ಶರಣ ಸಾಹಿತ್ಯ ಅಳವಡಿಸಿಕೊಳ್ಳಿ

## ಶಾಸಕ ಎಚ್.ಎಂ.ಗಣೇಶ್ ಪ್ರಸಾದ್ ಕರೆ । ಶ್ರೀಕಂಠಶೆಟ್ಟಿ ದತ್ತಿ ಉಪನ್ಯಾಸ

ಗುಂಡ್ಲುಪೇಟೆ: ಪಟ್ಟಣದ ಜೆ ಎಸ್ ಎಸ್ ಕಾಲೇಜಿನಲ್ಲಿ ಶರಣ ಸಾಹಿತ್ಯ ಪರಿಷತ್ ನಿಂದ ಶ್ರೀಕಂಠಶೆಟ್ಟಿ ರವರ ದತ್ತಿ ಉಪನ್ಯಾಸ ಕಾರ್ಯಕ್ರಮ ಆಯೋಜಿಸಲಾಗಿತ್ತು ರಾಜೇಂದ್ರ ಶ್ರೀಗಳು ಮತ್ತು ಶ್ರೀಕಂಠಶೆಟ್ಟಿ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು.

ಜಿಲ್ಲಾ ಶರಣ ಸಾಹಿತ್ಯ ಗೌರವಾಧ್ಯಕ್ಷರಾದ ಪಡಗೂರು ಅಡವಿ ಮಠದ ಶ್ರೀ ಶಿವಲಿಂಗೇಂದ್ರ ಮಹಾಸ್ವಾಮಿಗಳು ಹಾಗೂ ಶಾಸಕ ಎಚ್ ಎಂ ಗಣೇಶ್ ಪ್ರಸಾದ್ ಜ್ಯೋತಿ ಬೆಳಗುವ ಮೂಲಕ ಕಾರ್ಯಕ್ರಮ ಉದ್ಘಾಟಿಸಿದರು.

ನಂತರ ಶಾಸಕ ಎಚ್ ಎಂ ಗಣೇಶ್ ಪ್ರಸಾದ್ ಮಾತನಾಡಿ ಪ್ರತಿಯೊಬ್ಬರೂ ಜೀವನದಲ್ಲಿ ಶರಣ ಸಾಹಿತ್ಯ ವನ್ನು ಅಳವಡಿಸಿಕೊಳ್ಳಬೇಕು ಇವತ್ತು ಹಿರಿಯರ ಸಾಧನೆಗಳನ್ನು ಅವಲೋಕಿಸಿ ಅವರ ವಚನ ಸಾಹಿತ್ಯವನ್ನು ಎಲ್ಲಾರು ನಿತ್ಯ ಜೀವನದಲ್ಲಿ ಸ್ವಲ್ಪವಾದರು ಅನುಸರಿಸಿದರೆ ಆತ್ಮಗೌರವ ಹಾಗೂ ಉತ್ತಮ ಬದುಕು ರೂಪಿಸಿಕೊಳ್ಳಲು ಸಾಧ್ಯ ವಾಗುತ್ತದೆ ಸಮಾಜದ ಎಲ್ಲ ಸ್ತರದ ಅನುಭವಗಳು ಕಲೆತು ಮಂಡಿಸಿದ ಸಾಹಿತ್ಯವಾಗಿದೆ. ಒಂದು ವರ್ಗಕ್ಕೆ ಸೀಮಿತವಾಗಿದ್ದ ಸಾಹಿತ್ಯವನ್ನು ಎಲ್ಲ ವರ್ಗದವರಿಗೂ ತಲುಪಿಸುವ ಜೊತೆಗೆ ಮನೆ ಬಾಗಿಲಿಗೆ ವಚನಗಳನ್ನು ಶರಣರು ಪ್ರಚಾರಪಡಿಸಿದರು ಎಂದು ತಿಳಿಸಿದರು .

ನಂತರ ಚಾಮುಲ್ ನಿರ್ದೇಶಕ ನಂಜುಂಡ ಪ್ರಸಾದ್ ಮಾತನಾಡಿ ನಮ್ಮತಂದೆ ಹೆಸರಿನಲ್ಲಿ ದತ್ತಿ ಪ್ರಶಸ್ತಿ ನೀಡಲಾಗಿದ್ದು ಅವರು ಸರಣ ಸಂಸ್ಕೃತಿಯ ಬಗ್ಗೆ ಅಪಾರ ಜ್ಞಾನ ಹೊಂದಿದ್ದರು ರಾಮಾಯಣ, ಮಹಾಬಾರತ,



ಬಸವಣ್ಣನವರಚರಿತ್ರೆಯನ್ನು ನಿರ್ಗಳವಾಗಿ ಕಥೆಗಳ ರೂಪದಲ್ಲಿ ನೆನಪಿಗೆ ಕಟ್ಟುವಂತೆ ಹೇಳುತ್ತಿದ್ದರು ಶರಣ ಸಾಹಿತ್ಯ ಅಧ್ಯಯನ ಮತ್ತು ಅವಲೋಕನ ಎಲ್ಲಾರು ಮಾಡಬೇಕು ಎಂದರು.

ಈ ಕಾರ್ಯಕ್ರಮದಲ್ಲಿ ಶರಣಸಾಹಿತ್ಯ ಪರಿಷತ್ ಕೆ ಎಂ ಜ್ಯೋತಿ ಪ್ರಕಾಶ್ , ಜಿಲ್ಲಾ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ , ಡಿ ಕೆ ರವಿಕುಮಾರ್. ಜೆ ಎಸ್ ಎಸ್ ಕಾಲೇಜಿ ಪ್ರಾಂಶುಪಾಲರು ಪಿ ಮಹದೇವಮ್ಮ, ಕದಳಿ ಮಹಿಳಾ ವೇದಿಕೆ ಅಧ್ಯಕ್ಷೆ ಅನ್ನಪೂರ್ಣಮ್ಮ, ಉಪಾಧ್ಯಕ್ಷೆ ಜಯಶೀಲಮ, ಪದಾಧಿಕಾರಿಗಳಾದ ನೀಲಮ್ಮ, ಪಂಕಜ, ರಾಣಿ, ಪವಿತ್ರ, ಸವಿತ, ನಂದಿನಿ ಅಖಿಲಭಾರತ ಶರಣ ಸಾಹಿತ್ಯ ಪರಿಷತ್ ಪದಾಧಿಕಾರಿಗಳು ಮತ್ತಿತರರು.

### ವಿದ್ಯಾರ್ಥಿಗಳು ಅಂಕದ ಹಿಂದೆ ಹೋಗುವುದಕ್ಕಿಂತ ಜೀವನದ ಮೌಲ್ಯದ ಹಿಂದೆ ಹೋಗಿ

ಶರಣ ಚಿಂತನೆ ಬಗ್ಗೆ ಉಪನ್ಯಾಸ ನೀಡಿದ ಪೃಥ್ವಿ ರಾಜ್ ಹಾಲಹಳ್ಳಿ ಮಾತನಾಡಿ ಪತ್ರಿಕೆ ಸಮಾಜದ ಕನ್ನಡಿ ಎಂದು ಕರೆಯುತ್ತೇವೆ ಆಫ್ಘಾನಿಸ್ತಾನದಲ್ಲಿ ತಾನಿಬಾನ್ ಆಡಳಿತ ಇದೆ ಮಹಿಳೆಯರು ಎತ್ತರದ ಚಪ್ಪಲಿ ಧರಿಸುವಹಾಗಿಲ್ಲ, ತಲೆತುಂಬ ಬುರ್ಖ ದರಸಬೇಕು ಹಾಗೆ ಹೋಗಬಾರದು ಎಂಬ ನೀತಿ ಇದೆ, ಅಲ್ಲಿನಮಹಿಳೆಯರು ಶೋಷನೆಗೆ ಒಳಗಾಗುತ್ತಿದ್ದಾರೆ, ಆದರೆ ಭಾರತೀಯರಾದ ನಾವು ಎಷ್ಟು ಸ್ವಾತಂತ್ರ್ಯ ವಾಗಿ ಬದುಕುತ್ತಿದ್ದೇವೆ.ಎಂದರು ವಿದ್ಯಾರ್ಥಿಗಳು ಅಂಕದ ಹಿಂದೆ ಹೋಗುವುದಕ್ಕಿಂತ ಜೀವನದ ಮೌಲ್ಯದ ಹಿಂದೆ ಹೋಗಬೇಕು ಅದನ್ನು ಶರಣ ಸಾಹಿತ್ಯ ಹಾಗು ವಚನಗಳು ಕಳಿಸಿಕೊಡುತ್ತದೆ ಎಂದರು. ದೇವನೊಬ್ಬನೇ ತಂದೆ ಮನುಜರೆಲ್ಲರೂ ಒಂದೇ ಎನ್ನುವ ವಿಶ್ವ ಭ್ರಾತೃತ್ವದ ಸಂದೇಶವನ್ನು ಸಾರಿ ಜಾತಿ ವರ್ಣ ವರ್ಗರಹಿತವಾದ ಕಲ್ಯಾಣ ರಾಜ್ಯವನ್ನು ಕಟ್ಟಲು ಹಗಲಿರುಳು ಪ್ರಯತ್ನಿಸಿದರು ಬಸವಾದಿ ಶರಣರು ಕಾಯಕದಿಂದಲೇ ಮುಕ್ತಿ ಪಡೆಯಬೇಕು ಎಂದರು ವಚನ ಸಾಹಿತ್ಯದಲ್ಲಿರುವ ಮಾನವೀಯ ಮೌಲ್ಯಗಳನ್ನು ಸರ್ವರೂ ತಮ್ಮ ಜೀವನದಲ್ಲಿ ಅಳವಡಿಸಿಕೊಂಡರೆ ಈ ಜಾಗತಿಕ ಮಟ್ಟದಲ್ಲಿರುವ ಅಂಧಶ್ರದ್ಧೆ, ಸ್ತ್ರೀ ಶೋಷಣೆ, ಭಯೋತ್ಪಾದಕತೆಯನ್ನು ಸುಲಭವಾಗಿ ಹೋಗಲಾಡಿಸಬಹುದು' ಎಂದು ನುಡಿದರು. ಸಿದ್ದೇಶ್ವರ ಸ್ವಾಮಿಗಳ ಅವರ ಬಳಿ ಗನ್ ಮ್ಯಾನ್ ಇರಲಿಲ್ಲ ಆಧ್ಯಾತ್ಮದ ಉತ್ತುಂಗದಲ್ಲಿದ್ದವರ ಬಳಿ ಯಾರು ಬೇಕಾದರೂ ಹೋಗಬಹುದಿತ್ತು,ದಾಸ ಪರಂಪರೆ, ವಚನ ಪರಂಪರೆ, ಮಾದಪ್ಪನ ಪರಂಪರೆ ಸಾಗುತ್ತ ಬಂದಿದೆ, ಶರಣರು ಎಲ್ಲವನ್ನು ತ್ಯೇಜಿಸಿ ಸ್ವಾರ್ಥ ಸಂಪತ್ತಿಗಿಂತ ಶರಣರಾಗಿ ತೃಪ್ತಿಪಟ್ಟರು, ದಾಸೋಹ ಪರಿಕಲ್ಪನೆ ಬಂದಿರುವುದು ಕರ್ನಾಟಕದಲ್ಲಿ ವಚನ ಚಳುವಳಿ ಹೇಳುವುದು ಎಲ್ಲರೂ ಒಂದಾಗಿ ಎಂದು ಸ್ಮರಣೆ ಮಾಡುವುದು ಮುಖ್ಯವಾಗಿದೆ ಎಂದು ತಿಳಿಸಿದರು

## ವಕೀಲರ ಕಲ್ಯಾಣ ನಿಧಿಗೆ 200 ಕೋಟಿಗೆ ಮನವಿ

ಮೈಸೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು 2026–27ನೇ ಸಾಲಿನ ರಾಜ್ಯ ಆಯವ್ಯಯದಲ್ಲಿ ವಕೀಲರ ಕಲ್ಯಾಣ ನಿಧಿಗೆ 100 ಕೋಟಿ ರೂ ಮತ್ತು ಆರೋಗ್ಯ ನಿಧಿಗೆ 100 ಕೋಟಿ ರೂ. ಹಣವನ್ನು ಮೀಸಲಿಡಬೇಕೆಂದು ಮೈಸೂರು ವಕೀಲರ ಸಂಘದ ಮಾಜಿ ಉಪಾಧ್ಯಕ್ಷ ಪುಟ್ಟಸಿದ್ದೇಗೌಡ ಮನವಿ ಮಾಡಿದರು.

ರಾಜ್ಯದಲ್ಲಿ 1 ಲಕ್ಷದ 40 ಸಾವಿರ ವಕೀಲರು ನ್ಯಾಯಾಂಗ ಕ್ಷೇತ್ರದಲ್ಲಿ ಸೇವೆ ಸಲ್ಲಿಸುತ್ತಿದ್ದು, ಸರ್ಕಾರದಿಂದ ಯಾವುದೇ ಸೌಲಭ್ಯ ವಿರುವುದಿಲ್ಲ ಎಂದರು. ಸರ್ಕಾರವು 100 ಕೋಟಿ ರೂ.ಗಳ ಅನುದಾನವನ್ನು ಮೀಸಲಿಟ್ಟು ವಕೀಲರು ನಿವೃತ್ತಿಯಾದಾಗ, ಅಪಘಾತದಿಂದ ಮರಣ ಹೊಂದಿದಾಗ ಪರಿಹಾರ ಹಣ ನೀಡುವ ಮೂಲಕ ನೊಂದ ಕುಟುಂಬಕ್ಕೆ ನೆರವಾಗಬೇಕೆಂದು ಒತ್ತಾಯಿಸಿದರು. ರಾಜ್ಯದ ಅನೇಕ ವಕೀಲರ ಸಂಘಗಳಿಗೆ ಸ್ವಂತ ಕಟ್ಟಡವಿರುವುದಿಲ್ಲ. ಅನೇಕ ನ್ಯಾಯಾಲಯಗಳಲ್ಲಿ ಖಾಲಿ ಇರುವ ಹುದ?ದೆಗಳನ್ನು ಭರ್ತಿ ಮಾಡಲು ಕ್ರಮ ವಹಿಸಬೇಕೆಂದು ಕೋರಿದರು. ಸಮಾಜದ ಬಗ್ಗೆ ಕಳಕಳಿಯಿರುವ ವಕೀಲರೂ ಆಗಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ನ್ಯಾಯವಾದಿಗಳ ಕಷ್ಟಸುಖದ ಅರವಿದ್ದು, ತಮ್ಮ ಬೇಡಿಕೆಗಳನ್ನು ಈಡೇರಿಸುತ್ತಾರೆಂದು ವಿಶ್ವಾಸ ವ್ಯಕ್ತಪಡಿಸಿದರು. ವಕೀಲರಾದ ಲೋಕೇಶ್ ಕೆ, ನಂಜುಂಡನಾಯಕ, ಕಾರ್ತಿಕ್, ಕೃಷ್ಣ, ಚಂದನ್ ಇದ್ದರು.



## ಉದ್ಯೋಗ ಸೃಷ್ಟಿಯ ಮೇಲೆ ಅವಲಂಬಿಸಿದ ಆರ್ಥಿಕ ಸ್ಥಿತಿ

ಮೈಸೂರು: ಇಂದು ಆರ್ಥಿಕ ಪರಿಸ್ಥಿತಿ ಎಷ್ಟು ಉದ್ಯೋಗ ಸೃಷ್ಟಿ ಮಾಡಬಹುದೆಂದು ಅವಲಂಬಿಸಿದ್ದೇವೆ. ಇಂತಹ ವ್ಯವಸ್ಥೆಗಳ ಮೂಲಕ ಡಾ.ಬಿ.ಆರ್.ಅಂಬೇಡ್ಕರ್ ತತ್ವಗಳು ಪಾಲನೆಯಾಗಬೇಕಿದೆ. ಸಮುದಾಯಕ್ಕೆ, ಸಮಾಜಕ್ಕೆ ಏನಾದರೂ ಕೊಡುಗೆ ಕೊಡುತ್ತಿದ್ದೇವೆ ಎಂಬ ಸಮಾ ಧಾನ ಯುವಕರಿಗೆ ಬರಬೇಕು. ಈ ಸಮಾಧಾನ ಕೇವಲ ಉದ್ಯೋಗದ ಮೂಲಕ ಸಿಗುತ್ತದೆ ಎಂದು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಹೇಳಿದರು.

ನಗರದ ಪುರಭವನದಲ್ಲಿ ಶ್ರೀ ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಜ್ಞಾಪಕಾರ್ಥವಾಗಿ ಹಾಗೂ ಕರ್ನಾಟಕ ರಾಜ್ಯ ಭೀಮ್ ಸೇನೆ ಸಂಘದ ವಾರ್ಷಿಕೋತ್ಸವದ ಪ್ರಯುಕ್ತ ಆಯೋಜಿಸಲಾಗಿದ್ದ ಬೃಹತ್ ಉದ್ಯೋಗ ಮೇಳಕ್ಕೆ ಚಾಲನೆ ನೀಡಿ ಮಾತನಾಡಿದರು. ನಾಲ್ವಡಿ ಕೃಷ್ಣ ರಾಜ ಒಡೆಯರ್ ಅವರು ತೆಗೆದುಕೊಂಡಿದ್ದ ಕ್ರಾಂತಿಕಾರಿ ತೀರ್ಮಾನಗಳ ಬಗ್ಗೆ ಮೈಸೂರಿನ ನಾಗರೀಕರಿಗೆ ತಿಳಿದಿದೆ. ಮೈಸೂರು ಎಂದಿಗೂ ಪ್ರಗತಿಪರವಾಗಿದೆ. ಆದರೆ ಹಿಂದೆ ಇದ್ದ ಇತಿಹಾಸ, ಪರಂಪರೆ ಮುಂದು ವರೆಯಬೇಕಿದೆ. ಹಿಂದೆ ಮಹಾರಾಜರು ಧರ್ಮಕ್ಕೆ ತಕ್ಕಂತೆ ಸಮಾನವಾದ ಸಮಾಜವನ್ನು ಸೃಷ್ಟಿ ಮಾಡಿದ್ದರು. ಆ ಸಮಾಜದ ವಾರಸುದಾರರು ನಾವು. ಅವರ ಆಶಯದಂತೆ ನಾವು



ಮುಂದುವರೆಬೇಕಿದೆ. ಅಂಬೇಡ್ಕರ್ ಅವರು ಯಾವುದೇ ಸಮಾಜವಾದಿ, ಕ್ಯಾಪಿಟಲಿಸ್ಟ್ ,ಇತ್ಯಾದಿ ಬಗ್ಗೆ ಚರ್ಚೆ ಬೇಡ. ಭಾರತೀಯರ ದೃಷ್ಟಿಕೋನದಿಂದ ಆರ್ಥಿಕ ವ್ಯವಸ್ಥೆಯನ್ನು ಸೃಷ್ಟಿ ಮಾಡಬೇಕು ಎಂದು ತಿಳಿಸಿದರು.

ಮಾಜಿ ಮಹಾಪೌರ ಪುರುಷೋತ್ತಮ್ ಮಾತನಾಡಿ, ಡಾ.ಬಿ.ಆರ್.ಅಂಬೇಡ್ಕರ್ ಅವರು ಶ್ರೇಷ್ಠ ಅರ್ಥಶಾಸ ಜ್ಞರು. ಅಮೇರಿಕಾ, ರಷ್ಯಾ, ಸೇರಿದಂತೆ ಇತರು ಅಭಿವೃದ್ಧಿ ಹೊಂದಿದ ರಾಷ್ಟ್ರಗಳು ಆರ್ಥಿಕತೆಯಲ್ಲಿ ನಲುಗಿಹೋಗಿದೆ. ಆದರೆ ಭಾರತ ದೇಶ ಆರ್ಥಿಕತೆಯಲ್ಲಿ ಹಿಂದೆ ಬಿದ್ದಿಲ್ಲ. ಅದರ ಅಸ್ತಿತ್ವವನ್ನು ತಾನೆ ಉಳಿಸಿಕೊಂಡು ಬಂದಿದೆ ಎಂದರೆ ಅದು ಸಂವಿಧಾನದ ಭಾಗವಾಗಿದೆ. ಪ್ರಸ್ತುತ ಕಾಲಘಟ್ಟದಲ್ಲಿ ಭಾರತದ ಶಿಕ್ಷಣ ಉನ್ನತ ಮಟ್ಟದಲ್ಲಿದೆ. ಆದರೆ ಉದ್ಯೋಗ ಎಂಬುದು ಕನಸಾಗುತ್ತಿದೆ. ಹಿಂದೆ ಎಸ್‌ಎಸ್‌ಎಲ್‌ಸಿ, ಪಿಯುಸಿ ಮಾಡಿದವರಿಗೆಲ್ಲ ಉದ್ಯೋಗ ಸಿಗುತ್ತಿತ್ತು. ಇಂದು ಡಿಗ್ರಿ, ಮಾಸ್ಟರ್ ಡಿಗ್ರಿ ಮಾಡಿದವರು ಹೋಟೆಲ್‌ಗಳಲ್ಲಿ, ಬೇರೆ ಬೇರೆ ಸಣ್ಣ ಕಂಪನಿಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಎಂತು ಹೇಳಿದರು. ಕಾರ್ಯಕ್ರಮದಲ್ಲಿ ಮೈಸೂರು ವಾಣಿಜ್ಯ ಕೈಗಾರಿಕಾ ಸಂಘದ ಅಧ್ಯಕ್ಷ ಡಾ. ಕೆ.ಬಿ.ಲಿಂಗರಾಜು, ಕರ್ನಾಟಕ ರಾಜ್ಯ ಭೀಮ್ ಸೇನೆ ಸಂಘದ ಸಂಸ್ಥಾಪಕ ರಾಜ್ಯಾಧ್ಯಕ್ಷ ಎಸ್.ಸರ್ವೇಶ್, ಮಹಿಳಾ ರಾಜ್ಯಧ್ಯಕ್ಷೆ ಪದ್ಮವತಿ, ಅಲ್ಪ ಸಂಖ್ಯಾತರ ಘಟಕದ ರಾಜ್ಯಾಧ್ಯಕ್ಷ ನಯಜ್ ಪಾಷಾ, ಉಪಾಧ್ಯಕ್ಷ ಅಜ್ಮಲ್ ಇತರರು ಹಾಜರಿದ್ದರು.


**ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ**

(ಕರ್ನಾಟಕ ಸರ್ಕಾರದ ಸ್ವಾಯತ್ತ ಸಂಸ್ಥೆ)

ಇರ್ವಿನ್ ರಸ್ತೆ, ಮೈಸೂರು–570001, ಕರ್ನಾಟಕ, ದೂ: +91-0821-2520512 (Off), 2520803 (Fax),
Email- mmcrimysore@yahoo.com, website: www.mmcri/karnataka.gov.in

ಸಂಖ್ಯೆ : ಉಪಕರಣ/58/2025–26 ದಿನಾಂಕ: 23.02.2026

**ಟೆಂಡರ್ ಅಧಿಸೂಚನೆ**

**ವಿಷಯ:**ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಮೈಸೂರು ಇಲ್ಲಿನ ಚೆಲುವಾಂಬ ಆಸ್ಪತ್ರೆಯ ಶಿಶುವೈದ್ಯಶಾಸ್ತ್ರ ವಿಭಾಗಕ್ಕೆ ಅವಶ್ಯವಿರುವ ಉಪಕರಣಗಳನ್ನು ಸರಬರಾಜು ಮಾಡಲು ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಅಲ್ಪಾವಧಿ ಟೆಂಡರ್ ಆಹ್ವಾನಿಸಿರುವ ಬಗ್ಗೆ.

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999–ನಿಯಮ 2000 ರಂತೆ ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಮೈಸೂರು ಇಲ್ಲಿನ ಚೆಲುವಾಂಬ ಆಸ್ಪತ್ರೆಯ ಶಿಶುವೈದ್ಯಶಾಸ್ತ್ರ ವಿಭಾಗಕ್ಕೆ ಅವಶ್ಯವಿರುವ ಉಪಕರಣಗಳನ್ನು ಸರಬರಾಜು ಮಾಡಲು ವಿದ್ಯುನ್ಮಾನ ವೇದಿಕೆ ಮುಖಾಂತರ ಅಲ್ಪಾವಧಿ ಟೆಂಡರನ್ನು ಆಹ್ವಾನಿಸಲಾಗಿದೆ. ಟೆಂಡರ್ ನಮೂನೆಯನ್ನು ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ https://kppp.karnataka.gov.in ಮೂಲಕ ದಿನಾಂಕ: **24.02.2026** ರಿಂದ ಪಡೆಯಬಹುದಾಗಿದ್ದು, ದಿನಾಂಕ: **03.03.2026** ರಂದು **ಅಪರಾಹ್ನ 5.00 ರೊಳಗಾಗಿ** ಸಲ್ಲಿಸಬಹುದಾಗಿರುತ್ತದೆ. ಇ.ಎಂ.ಡಿ. ಸಲ್ಲಿಸದ ಟೆಂಡರ್ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಒಂದು ವೇಳೆ ಸಾರ್ವಜನಿಕ ರಜೆಯೆಂದು ಘೋಷಿಸಲ್ಪಟ್ಟರೆ, ಮುಂದಿನ ಕೆಲಸದ ದಿನಾಂಕವನ್ನು ಕೊನೆಯ ದಿನಾಂಕವೆಂದು ಪರಿಗಣಿಸತಕ್ಕದ್ದು ಈ ಬಗ್ಗೆ ಯಾವುದೇ ಅಧಿಸೂಚನೆ ಹೊರಡಿಸಲಾಗುವುದಿಲ್ಲ.

ಸಹಿ/– ನಿರ್ದೇಶಕರು ಮತ್ತು ಡೀನ್
ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಮೈಸೂರು

ವಾಸಾಸಂಇ/ಮೈಸೂರು/ಶಿರಡಿ ಸಾಯಿ/1730/2025–26


### ಮೈಸೂರು ಮಹಾನಗರ ಪಾಲಿಕೆಯಿಂದ ನೇಮಕ

## ಆರು ಮಂದಿ ನಗರ ಸ್ವಚ್ಛತಾ ರಾಯಭಾರಿಗಳು

ಮೈಸೂರು: ಪರಂಪರೆ ಹಾಗೂ ಸಾಂಸ್ಕೃತಿಕ ವೈಭವದಿಂದ ಜಾಗತಿಕ ಮಟ್ಟದಲ್ಲಿ ಗುರುತಿಸಿಕೊಂಡಿರುವ ಮೈಸೂರು ನಗರದ ಸ್ವಚ್ಛತೆಯನ್ನು ಇನ್ನಷ್ಟು ಉತ್ತಮಪಡಿಸುವ ಉದ್ದೇಶದಿಂದ ಮೈಸೂರು ಮಹಾನಗರ ಪಾಲಿಕೆಯು ಆರು ಮಂದಿ ಸಾಧಕರನ್ನು 'ಸ್ವಚ್ಛತಾ ಬ್ರಾಂಡ್ ಅಂಬಾಸಿಡರ್'ಗಳನ್ನಾಗಿ ನೇಮಕ ಮಾಡಿದೆ.

ಸ್ವಚ್ಛ ಭಾರತ ಅಭಿಯಾನದಡಿ ಮೈಸೂರು ನಗರವನ್ನು ಕೇವಲ ಬಾಹ್ಯವಾಗಿ ಅಷ್ಟೇ ಅಲ್ಲದೆ, ನಾಗರಿಕರ ಮನೋಭಾವದಲ್ಲಿಯೂ ಸ್ವಚ್ಛತೆಯ ಮೌಲ್ಯಗಳನ್ನು ಬೆಳೆಸುವ ನಿಟ್ಟಿನಲ್ಲಿ ಪಾಲಿಕೆ ಈ ಕ್ರಮ ಕೈಗೊಂಡಿದೆ. ಚಲನಚಿತ್ರ, ಸಂಗೀತ ಹಾಗೂ ಕಲೆ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಗುರುತರ ಸೇವೆ ಸಲ್ಲಿಸಿರುವ ಗಣ್ಯರ ಜನಪ್ರಿಯತೆ ಮತ್ತು ಬದ್ಧತೆಯನ್ನು ಗಮನಿಸಿ ಈ ಜವಾಬ್ದಾರಿ ನೀಡಲಾಗಿದೆ.

ನಗರಪಾಲಿಕೆ ಆಯುಕ್ತ ಶೇಕ್ ತನ್ವೀರ್



ಆಸೀಫ್ ಮಾತನಾಡಿ, ಶಿಲ್ಪಿ ಅರುಣ್ ಯೋಗಿರಾಜ್, ಚಲನಚಿತ್ರ ನಟ ವಸಿಷ್ಠ ಸಿಂಹ, ನಟಿ ಹರಿಪ್ರಿಯಾ, ಬಿಗ್ಬಾಸ್ ನ ಸೂರಜ್ ಸಿಂಗ್, ಗಾಯಕಿ ಅನನ್ಯ ಭಟ್ ಹಾಗೂ ಆಲೋಕ್ ರನ್ನು ಮಹಾನಗರ ಪಾಲಿಕೆಯ ನೂತನ ಸ್ವಚ್ಛತಾ ರಾಯಭಾರಿಗಳಾಗಿ ಕಾರ್ಯನಿರ್ವ ಹಿಸಲಿದ್ದಾರೆ. ನೇಮಕಗೊಂಡಿರುವವರು ನಗರದ ಸ್ವಚ್ಛತೆ ಮತ್ತು ಪರಿಸರ ಸಂರಕ್ಷಣೆಯ ಬಗ್ಗೆ ನಾಗರಿಕರಲ್ಲಿ ಅರಿವು ಮೂಡಿಸಲಿದ್ದಾರೆ. ಪಾಲಿಕೆಯು ಹಮ್ಮಿಕೊಳ್ಳುವ ಸ್ವಚ್ಛ ಭಾರತ ಅಭಿ ಯಾನದ ವಿವಿಧ ಕಾರ್ಯಕ್ರಮಗಳು ಹಾಗೂ ಜಾಗೃತಿ ಜಾಥಾಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಲಿ ದ್ದಾರೆ. ಶಾಲಾ–ಕಾಲೇಜುಗಳು, ಶಿಕ್ಷಣ ಸಂಸ್ಥೆಗಳು ಮತ್ತು ಸಾರ್ವಜನಿಕ ವೇದಿಕೆಗಳಲ್ಲಿ ಸ್ವಚ್ಛತೆಯ ಸಂದೇಶವನ್ನು ಪರಿಣಾಮಕಾರಿಯಾಗಿ ತಲುಪಿಸುವ ಕೆಲಸವನ್ನು ಮಾಡಲಿದ್ದಾರೆಂದು ತಿಳಿಸಿದರು. ಸಂಪೂರ್ಣವಾಗಿ ಸೇವಾ ಮನೋಭಾವದಿಂದ, ಯಾವುದೇ ಗೌರವಧನ ಅಥವಾ ಆರ್ಥಿಕ ಲಾಭದ ಅಪೇಕ್ಷೆಯಿಲ್ಲದೆ ಸಾರ್ವಜನಿಕ ಹಿತದೃಷ್ಟಿಯಿಂದ ಈ ಸಾಧಕರು ರಾಯಭಾರಿಗಳಾಗಿ ನೇಮಕಗೊಂಡಿದ್ದಾರೆ. ಮೈಸೂರನ್ನು ಶಿಸ್ತುಬದ್ಧ ಹಾಗೂ ಮಾದರಿ ನಗರವಾಗಿ ರೂಪಿಸುವ ಪಾಲಿಕೆಯ ಆಶಯಕ್ಕೆ ಇವರ ಸಹಕಾರ ಜೊತೆಯಾಗಲಿದೆ ಎಂದು ಹೇಳಿದರು.

## ಬಜೆಟ್‌ನಲ್ಲಿ ಕರ್ನಾಟಕದ ಸಮಗ್ರ ಅಭಿವೃದ್ಧಿಗೆ ಒತ್ತು ನೀಡಿ

### ಸೋಷಿಯಲ್ ಡೆಮಾಕ್ರಟಿ ಪಾರ್ಟಿ ಆಫ್ ಇಂಡಿಯಾದ ಸಮಿತಿ ಸದಸ್ಯ ಅಬ್ರಹಾರ್ ಅಹಮದ್ ಒತ್ತಾಯ

ಚಾಮರಾಜನಗರ: ಮುಖ್ಯಮಂತ್ರಿ ಸಿದ್ದರಾಮಯ್ಯ ಮಾರ್ಚ್ ನಲ್ಲಿ ಮಂಡಿಸಲಿರುವ 2026– 27 ನೇ ಸಾಲಿನ ರಾಜ್ಯ ಬಜೆಟ್ ನಲ್ಲಿ ಕರ್ನಾಟಕದ ಸಮಗ್ರ ಅಭಿವೃದ್ಧಿ ಗೆ ಒತ್ತು ನೀಡಬೇಕು ಎಂದು ಸೋಷಿಯಲ್ ಡೆಮಾಕ್ರಟಿ ಪಾರ್ಟಿ ಆಫ್ ಇಂಡಿಯಾದ ರಾ?ಯ ಸಮಿತಿ ಸದಸ್ಯ ಅಬ್ರಹಾರ್ ಅಹಮದ್ ಹೇಳಿದರು.

ನಗರದ ಕಾರ್ಯನಿರತ ಪತ್ರಕರ್ತರ ಸಂಘದಲ್ಲಿ ನಡೆದ ಸುದ್ದಿ ಗೋಷ್ಠಿ ಯಲ್ಲಿ ಭಾಗವಹಿಸಿ ಮಾತನಾಡಿದ ಅವರು ಶೋಷಿತರು, ಬಡವರ ಪರ ಕಲ್ಯಾಣಕ್ಕಾಗಿ ಉದಾರವಾಗಿ ಅನುದಾನ ನೀಡಬೇಕು. ಕುಡಿಯುವ ನೀರು, ಶಿಕ್ಷಣ, ಆರೋಗ್ಯ ಕ್ಷೇತ್ರಗಳನ್ನು ಆದ್ಯತೆ ವಲಯಗಳನ್ನಾಗಿ ಪರಿಗಣಿಸಬೇಕು. ಶಿಕ್ಷಣ ಕ್ಷೇತ್ರಕ್ಕೆ ಶೇ, 20 ರಷ್ಟು ಅನುದಾನ ಮೀಸಲಿಡಬೇಕು. ರಾಷ್ಟೀಯ ಶಿಕ್ಷಣ ನೀತಿಯನ್ನು ತಿರಸ್ಕರಿಸಿ ಕರ್ನಾಟಕದ ಸ್ಥಳೀಯ ಆಡಳಿತಕ್ಕೆ ಅನುಗುಣವಾದ ನಿಲುವುಗಳನ್ನೊಳಗೊಂಡ ಶಿಕ್ಷಣ ನೀತಿಯನ್ನು ಬಲಪಡಸಬೇಕು ಎಂದು ಹೇಳಿದರು. ಎಸ್.ಸಿ.ಎಸ್.ಟಿ ಮತ್ತು ಅಲ್ಪಸಂಖ್ಯಾತರಿಗೆ ಭೂಮಿ ಹಕ್ಕು ನೀಡಬೇಕು. ಬಜೆಟ್ ನಲ್ಲಿ ಅಲ್ಪ ಸಂಖ್ಯಾತರ ಸಮಗ್ರ ಕಲ್ಯಾಣಕ್ಕಾಗಿ ಕನಿಷ್ಠ 15 ಸಾವಿರ



ಕೋಟಿ ಅನುದಾನ ಮೀಸಲಿಡಬೇಕು. ಎಸ್.ಸಿ.ಎಸ್.ಟಿ ಸಮುದಾಯದ ಅಭಿವೃದ್ಧಿ ಗೆ 5 ಸಾವಿರ ಕೋಟಿ ಅನುದಾನ ನೀಡಬೇಕು. ಅಸಂಘಟಿತ ಕಾರ್ಮಿಕರ ಶೇಯೋಭಿವೃದ್ಧಿಗಾಗಿ 1 ಸಾವಿರ ಕೋಟಿ ಅನುದಾನ ತೆಗೆದಡಬೇಕು ಎಂದರು.

ಎಸ್.ಡಿ.ಪಿ.ಐ ಜಿಲ್ಲಾ ಉಪಾಧ್ಯಕ್ಷ ನಯಾಜ್ ಉಲ್ಲಾ ಮಾತನಾಡಿ ಚಾಮರಾಜನಗರ ಜಿಲ್ಲೆಗೆ ಶಾಸ್ವತ ಕುಡಿಯುವ ನೀರಿನ ಯೋಜನೆಯನ್ನು ಅನುಷ್ಠಾನಗೊಳಿಸಬೇಕು. ಜಿಲ್ಲೆಯ ಸಮಗ್ರ ಅಭಿವೃದ್ಧಿಗೆ ವಿಶೇಷ ಪ್ಯಾಕೇಜ್ ನೀಡಬೇಕು. ಜಿಲ್ಲೆಯ ವ್ಯಾಪ್ತಿಯಲ್ಲಿ ಬರುವ ಚಿಕ್ಕಹೊಳೆ– ಸುವರ್ಣಾವತಿ ಮತ್ತು ಭರಚುಕ್ಕಿ ಜಲಾಶಯಗಳನ್ನು ಪ್ರವಾಸೋದ್ಯಮ ಕೇಂದ್ರಗಳನ್ನಾಗಿ ಅಭಿವೃದ್ಧಿಪಡಿಸಬೇಕು ಜಯದೇವ ಹೃದ್ರೋಗ ಉಪ ಘಟಕವನ್ನು ಚಾಮರಾಜನಗರ ದಲ್ಲಿ ತೆರೆಯಬೇಕು. ಜಿಲ್ಲೆಯನ್ನು ಬರಪೀಡಿತ ಪ್ರದೇಶ ಎಂದು ಘೋಷಿಸಬೇಕು ಎಂದು ಹೇಳಿದರು. ಸುದ್ದಿಗೋಷ್ಠಿಯಲ್ಲಿ ಸೋಷಿಯಲ್ ಡೆಮಾಕ್ರಟಿ ಪಾರ್ಟಿಯ ಜಿಲ್ಲಾಧ್ಯಕ್ಷ ಕಲೀಲ್ ಉಲ್ಲಾ, ಪ್ರಧಾನ ಕಾರ್ಯದರ್ಶಿ ಮಹೇಶ್, ಟೌನ್ ಅಧ್ಯಕ್ಷ ಸೈಯದ್ ಇರ್ಫಾನ್, ಕೊಳ್ಳೇಗಾಲ ಟೌನ್ ಕಾರ್ಯದರ್ಶಿ ನದೀಮ್ ಪಾಷ ಹಾಜರಿದ್ದರು.


**ಕರ್ನಾಟಕ ಸರ್ಕಾರ**
**ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ,**
**ಲೋಕೋಪಯೋಗಿ, ಇಲಾಖೆ ವಿಭಾಗ, ಮಂಡ್ಯ**

ಸಂ: 22/2025–2026 ದಿನಾಂಕ: 21–02–2026

**ಮಂಡ್ಯ ಜಿಲ್ಲೆಯ ಕಾಮಗಾರಿಗಳಿಗಾಗಿ ಟೆಂಡರ್ ಪ್ರಕಟಣೆ**

ಐಟಂವಾರು ದರದ ಟೆಂಡರ್ ಕಾಮಗಾರಿಗಾಗಿ ಅರ್ಹ ಗುತ್ತಿಗೆದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ KW-1/2/3 ರ ರೀತಿ ದ್ವಿಲಕೋಟೆ ಪದ್ಧತಿಯಲ್ಲಿ ಆಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https:// kppp.karnataka.gov.in ಮುಖಾಂತರ ಕಾಮಗಾರಿಯ ಟೆಂಡರ್‌ಗಾಗಿ ಭಾಗವಹಿಸಬಹುದು. ಟೆಂಡರ್ ದಾಖಲಾತಿಗಳನ್ನು ದಿನಾಂಕ 21–02–2026 ರಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಟೆಂಡರ್ ವಿಚಾರಣೆ ದಿನಾಂಕ; 27–02–2026 ಸಂಜೆ 5.30 ಘಂಟೆವರೆಗೆ, ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 02–03–2026 ಸಂಜೆ 4.30 ಘಂಟೆವರೆಗೆ, ತಾಂತ್ರಿಕ ಬಿಡ್ ತೆರೆಯುವ ದಿನಾಂಕ 03–03–2026 ಸಂಜೆ 4.31 ಗಂಟೆ ನಂತರ ಅಥವಾ ನಂತರದ ಕೆಲಸದ ದಿನಗಳು, ಆರ್ಥಿಕ ಬಿಡ್ ತೆರೆಯುವ ದಿನಾಂಕ: 04–03–2026 ಬೆಳಿಗ್ಗೆ 11.00 ಗಂಟೆಗೆ ಅಥವಾ ನಂತರದ ಕೆಲಸದ ದಿನಗಳು. ಟೆಂಡರ್ ಪ್ರಕ್ರಿಯೆ ಬೆಲೆ ಇ–ಪೋರ್ಟಲ್‌ರಂತೆ. ಕಾಲಮಿತಿ: ಮಳೆಗಾಲ ಸೇರಿ 12 ತಿಂಗಳು, ಒಟ್ಟು 7 (ಏಳು) ಕಾಮಗಾರಿ, ಕಾಮಗಾರಿಗಳ ಪೈಕಿ ಗರಿಷ್ಠ ಅಂದಾಜು ಮೊತ್ತ ರೂ.54.00 ಲಕ್ಷಗಳು ಕನಿಷ್ಠ ಅಂದಾಜು ಮೊತ್ತ ರೂ.21.00 ಲಕ್ಷಗಳು ಇ.ಎಂ.ಡಿ. ಬೆಲೆ ಇ–ಪೋರ್ಟಲ್‌ರಂತೆ, ಕೆಲಸಗಳ ವಿವರ, ಅಂದಾಜು ಮೊತ್ತ, ಇ.ಎಂ.ಡಿ., ಮೊತ್ತ ಮುಂತಾದ ಮಾಹಿತಿಗಳನ್ನು ಸದರಿ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಪಡೆಯಬಹುದು.

**ಟಿಪ್ಪಣಿ: 1)** ಈ ಕೆಳಗೆ ಸಹಿ ಮಾಡಿರುವವರು ಯಾವುದೇ ಕಾರಣಗಳನ್ನು ನೀಡದೆ ಟೆಂಡರ್ ಪ್ರಕ್ರಿಯೆಯ ಮುಂದೂಡುವಿಕೆ /ಸಂಪೂರ್ಣವಾಗಿ ಟೆಂಡರ್ ರದ್ದುಗೊಳಿಸುವ / ಟೆಂಡರ್ ನಿರಾಕರಿಸುವ ಹಕ್ಕನ್ನು ಹೊಂದಿರುತ್ತಾರೆ. **2)** ಇನ್ನು ಮುಂದೆ ಟೆಂಡರ್ ಪ್ರಕ್ರಿಯೆಯಲ್ಲಿ ಯಾವುದೇ ಬದಲಾವಣೆಗಳು ಇದ್ದಲ್ಲಿ ದಿನ ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ, ಬದಲಾಗಿ ವಿದ್ಯುನ್ಮಾನ ಸಂಗ್ರಹಣೆ ವೇದಿಕೆಯಲ್ಲಿ ಮಾತ್ರ ಬದಲಾವಣೆಗಳನ್ನು ಪ್ರಕಟಿಸಲಾಗುವುದು.

ಸಹಿ/– ಕಾ.ಇಂ.,ಲೋ.ಇ., ವಿಭಾಗ, ಮಂಡ್ಯ

# ಸಂಕ್ಷಿಪ್ತ ಸುದ್ದಿ

## ನಿಗಧಿತ ಅವಧಿಯಲ್ಲಿ ಮಾಹಿತಿ ಸಲ್ಲಿಸಿ

**ಮೈಸೂರು:** ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960 ನಿಯಮ 29–ಬಿ(8) ರನ್ವಯ ಯಾವುದೇ ಸಹಕಾರ ಸಂಘದ ಮುಖ್ಯ ಕಾರ್ಯನಿರ್ವಾಹಕರು ಹಾಗೂ ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು 2004 ನಿಯಮ 8–ಬಿ(8) ರನ್ವಯ ಯಾವುದೇ ಸೌಹಾರ್ದ ಸಹಕಾರಿಯ ಮುಖ್ಯ ಕಾರ್ಯನಿರ್ವಾಹಕರು ವಾರ್ಷಿಕ ಮಹಾ ಸಭೆಯಲ್ಲಿ ಇಲಾಖಾ ಲೆಕ್ಕಪರಿಶೋಧಕರ ಅಥವಾ ಸನ್ನದು ಲೆಕ್ಕಪರಿಶೋಧನಾ ಸಂಸ್ಥೆಯನ್ನು ನೇಮಕ ಮಾಡಿಕೊಂಡ ಬಗ್ಗೆ ವಾರ್ಷಿಕ ಮಹಾಸಭೆಯ ದಿನಾಂಕದಿಂದ 7 ದಿನಗೊಳಗಾಗಿ ಇಲಾಖಾ ಲೆಕ್ಕಪರಿಶೋಧಕರಿಗೆ, ಸನ್ನದು ಲೆಕ್ಕಪರಿಶೋಧನಾ ಸಂಸ್ಥೆಗೆ ಮತ್ತು ಸಹಕಾರಿ ಲೆಕ್ಕಪರಿಶೋಧನಾ ನಿರ್ದೇಶಕರಿಗೆ ತಿಳಿಸಬೇಕಾಗಿರುತ್ತದೆ.

ಆದರೆ ಜಿಲ್ಲೆಯ ಬಹುಪಾಲು ಸಹಕಾರ ಸಂಘಗಳು ಮತ್ತು ಸೌಹಾರ್ದ ಸಹಕಾರಿಗಳು ತಮ್ಮ ಸಂಘದ ಲೆಕ್ಕಪರಿಶೋಧನೆಗಾಗಿ ಇಲಾಖಾ ಲೆಕ್ಕಪರಿಶೋಧಕರಿಗೆ/ಸನ್ನದು ಲೆಕ್ಕಪರಿಶೋಧನಾ ಸಂಸ್ಥೆಯ ನೇಮಕಾತಿ ಬಗ್ಗೆ ಕಛೇರಿಗೆ ಮಾಹಿತಿಯನ್ನು ನಿಗಧಿತ ಅವಧಿಯಲ್ಲಿ ಸಲ್ಲಿಸಿರುವುದಿಲ್ಲ. ತಮ್ಮ ಸಾಮಾನ್ಯ ಸಭೆಯಲ್ಲಿ ಲೆಕ್ಕಪರಿಶೋಧಕರನ್ನು ನೇಮಕ ಮಾಡಿಕೊಂಡಿದ್ದಲ್ಲಿ ಈ ಪ್ರಕಟಣೆಯ 07 ದಿನಗೊಳಗಾಗಿ ಮಾಹಿತಿಯನ್ನು ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಜಂಟಿ ನಿರ್ದೇಶಕರ ಕಛೇರಿಗೆ ಸಲ್ಲಿಸಲು ಸೂಚಿಸಿದೆ.

ಇಲ್ಲವಾದಲ್ಲಿ ಸಹಕಾರ ಸಂಘಗಳ ಅಧಿನಿಯಮ 1960ರ ನಿಯಮ 63(2) ರಂತೆ ಸಂಘದ ಲೆಕ್ಕಪತ್ರಗಳ ಪರಿಶೋಧನೆಯನ್ನು ಮಾಡಲು ಲೆಕ್ಕಪರಿಶೋಧಕರನ್ನು ಇಲಾಖೆಯಿಂದ ನೇಮಕ ಮಾಡಲಾಗುತ್ತದೆ ಎಂದು ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಜಂಟಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಆಹಾರ ವಾಹಿನಿ ಯೋಜನೆಯಡಿ ಸಹಾಯಧನ

**ಮೈಸೂರು:** ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ ವತಿಯಿಂದ ಆಹಾರ ವಾಹಿನಿ (ಆಹಾರ ಕಿಯೋಸ್) ಯೋಜನೆಯಡಿ ನಗರ ಪ್ರದೇಶದ ವಿಧಾನ ಸಭಾ ಕ್ಷೇತ್ರಗಳಾದ ಕೃಷ್ಣರಾಜ, ಚಾಮರಾಜ, ನರಸಿಂಹರಾಜ, ಕ್ಷೇತ್ರದ ಹಿಂದುಳಿದ ವರ್ಗಗಳ ಪ್ರವರ್ಗ–1, 2ಎ, 3ಎ ಮತ್ತು 3ಬಿ ಗೆ ಸೇರಿದ ವರ್ಗದವರಿಗೆ ಆಹಾರ ವಾಹಿನಿ(ಆಹಾರ ಕಿಯೋಸ್ಕ್) ಯೋಜನೆಯ ಸಹಾಯಧನ ಸೌಲಭ್ಯ ಒದಗಿಸಲು ಆನ್‌ಲೈನ್ ಮೂಲಕ ಅರ್ಜಿಯನ್ನು ಆಹ್ವಾನಿಸಲಾಗಿದೆ. ಅರ್ಜಿಯನ್ನು ಮಾರ್ಚ್ 06 ರೊಳಗೆ ಸೇವಾಸಿಂಧು ಪೋರ್ಟಲ್‌ನ http://sevasindhu.karnataka.gov.in ಲಿಂಕ್ ಮೂಲಕ ಆಹಾರ ವಾಹಿನಿ (ಆಹಾರ ಕಿಯೋಸ್ಕ್) ಯೋಜನೆಯಡಿ ಸ್ಥಳಾಂತರಿಸಬಹುದಾದ ತಿಂಡಿ ಮಳಿಗೆಗಳನ್ನು ನಾಲ್ಕು ಚಕ್ರಗಳ ಇಗಿ –ಗೂಡ್ಸ್ ವಾಹನಗಳನ್ನು ಅಗತ್ಯಕ್ಕೆ ತಕ್ಕಂತೆ ನವೀಕರಿಸಿ ಫಲಾನುಭವಿಗಳಿಗೆ ವಿತರಿಸುವ ಯೋಜನೆಯಾಗಿದೆ. ನಿಗಮದಿಂದ ವಾಹನ ಖರೀದಿಗೆ ರೂ.3–00 ಲಕ್ಷಗಳ ಸಹಾಯಧನವನ್ನು ಬಿಡುಗಡೆ ಮಾಡಲಾಗುವುದು ಉಳಿಕೆ ಮೊತ್ತವನ್ನು ಬ್ಯಾಂಕುಗಳು / ಹಣಕಾಸು ಸಂಸ್ಥೆಗಳಿಒದ ಸಾಲ ಪಡೆಯಬಹುದಾಗಿರುತ್ತದೆ.

ಹೆಚ್ಚಿನ ಮಾಹಿತಿಗಾಗಿ ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ಜಿಲ್ಲಾ ವ್ಯವಸ್ಥಾಪಕರಾದ ಹೆಚ್. ಎ. ಶೋಭ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಶುಲ್ಕ ಮರುಪಾವತಿ ದಿನಾಂಕ ವಿಸ್ತರಣೆ

**ಮೈಸೂರು:** ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ವತಿಯಿಂದ 2025–26 ನೇ ಸಾಲಿನ ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ ಮಂಜೂರಾತಿಗೆ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳು ಹಾಗೂ ಪ್ರವರ್ಗ–1ರ ಅಲೆಮಾರಿ, ಅರೆಅಲೆಮಾರಿ ಜನಾಂಗದ ವಿದ್ಯಾರ್ಥಿಗಳಿಂದ ಶುಲ್ಕ ಮರುಪಾವತಿ ಯೋಜನೆಯ ಸೌಲಭ್ಯಕ್ಕಾಗಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವ ದಿನಾಂಕವನ್ನು ಮಾರ್ಚ್ 05ರ ವರೆಗೆ ವಿಸ್ತರಿಸಲಾಗಿದೆ.

ಅರ್ಹ ವಿದ್ಯಾರ್ಥಿಗಳು ಆನ್‌ಲೈನ್ ವೆಬ್‌ಸೈಟ್ ವಿಳಾಸ https://ssp.postmatric karnataka gov.in ನ ಮೂಲಕ ತಮ್ಮ ಅರ್ಜಿಯನ್ನು ಸಲ್ಲಿಸಬಹುದಾಗಿದೆ. ಹಾಗೂ ಕಾರ್ಯಕ್ರಮಗಳ ವಿವರ, ಅರ್ಹತೆ, ಸಲ್ಲಿಸಬೇಕಾದ ದಾಖಲೆಗಳು ಹಾಗೂ ವಿದ್ಯಾರ್ಥಿವೇತನಕ್ಕೆ ಸಂಬಂಧಿಸಿದ ಸರ್ಕಾರಿ ಆದೇಶಗಳ ಬಗ್ಗೆ ಮಾಹಿತಿಗಾಗಿ https://bcwd.karnataka.gov.in ವೆಬ್‌ಸೈಟ್ ವಿಳಾಸಕ್ಕೆ ಭೇಟಿ ನೀಡಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಸಹಾಯವಾಣಿ ಸಂಖ್ಯೆ: 8050770004 ಸಂಪರ್ಕಿಸಬಹುದಾಗಿದೆ.

## ವಿದ್ಯುತ್ ವ್ಯತ್ಯಯ

**ಮೈಸೂರು:** ಹೆಚ್.ಡಿ.ಕೋಟೆ ಉಪ ವಿಭಾಗದ ಆಲನಹಳ್ಳಿ ಶಾಖಾ ವ್ಯಾಪ್ತಿಯ ಕ್ಯಾತನಹಳ್ಳಿ ಗ್ರಾಮದಲ್ಲಿ ಮಾದರಿ ಗ್ರಾಮದ ಯೋಜನೆಯಡಿ ವಿದ್ಯುತ್ ಕಾಮಗಾರಿ ಕೆಲಸದ ನಿಮಿತ್ತ ಫೆಬ್ರವರಿ 24 ರಿಂದ 15 ದಿನಗಳವರೆಗೆ ಬೆಳಿಗ್ಗೆ 10–00 ರಿಂದ ಸಂಜೆ 6–00 ರವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

ವಿದ್ಯುತ್ ವ್ಯತ್ಯಯವಾಗುವ ಪ್ರದೇಶಗಳು: ಕ್ಯಾತನಹಳ್ಳಿ, ಚಾಮಲಾಪು, ಖಂಡೇಗೌಡನಪುರ ಮತ್ತು ಕಾಡಸೂರು ಗ್ರಾಮಗಳು ಹಾಗೂ ಸುತ್ತ ಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಚಾ.ವಿ.ಸ.ನಿ.ನಿ., ಹೆಚ್.ಡಿ.ಕೋಟೆ ಸಹಾಯಕ ಕಾರ್ಯ ನಿರ್ವಾಹಕ ಇಂಜಿನಿಯರ್ ಚಂದು ಕುಮಾರ್.ಕೆ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಸಾಮಾಜಿಕ ಭದ್ರತಾ ಯೋಜನೆಗಳ ಜಾರಿ

**ಮೈಸೂರು:** ಸರ್ಕಾರವು ಸಾರ್ವಜನಿಕರಿಗೆ ಮತ್ತು ಸರ್ಕಾರಿ ಅಧಿಕಾರಿ, ನೌಕರರಿಗೆ ಜೀವನ ಅನಿಶ್ಚಿತತೆಗಳನ್ನು ಹಾಗೂ ಆರ್ಥಿಕ ಭದ್ರತೆಗಳನ್ನು ನೀಡಲು ಪ್ರಧಾನ ಮಂತ್ರಿ ಜೀವನ್ ಜ್ಯೋತಿ ಬಿಮಾ ಯೋಜನೆ, ಪ್ರಧಾನ ಮಂತ್ರಿ ಸುರಕ್ಷಾ ಬಿಮಾ ಯೋಜನೆ, ಎಸ್‌ಬಿಐ ವಯಕ್ತಿಕ ಅಪಘಾತ ವಿಮೆ, ಸರ್ಕಾರಿ ನೌಕರರಿಗೆ ಸಂಬಳ ಪ್ಯಾಕೇಜ್ ಸೌಲಭ್ಯ ಎಂಬ ಸಾಮಾಜಿಕ ಭದ್ರತಾ ಯೋಜನೆಗಳನ್ನು ಜಾರಿಗೆ ತರಲಾಗಿದೆ.

ಸರ್ಕಾರಿ ಅಧಿಕಾರಿಗಳು, ಸಿಬ್ಬಂದಿಗಳಿಗೆ ತಮ್ಮ ವೇತನ ಪಡೆಯುವ ಬ್ಯಾಂಕಿನಲ್ಲಿ ಬಹು ವಿವಿಧ ಅನುಕೂಲಕರವಾದ ಸಾಮಾಜಿಕ ಸುರಕ್ಷತೆ, ಭದ್ರತೆಗಳುಳ್ಳ ಹಲವಾರು ಸೌಲಭ್ಯಗಳು ಇದ್ದು, ನಿಯಮಾನುಸಾರ ಪಡೆದುಕೊಳ್ಳಬಹುದಾಗಿದೆ.

ಪಟ್ಟಣದ ಸಾರ್ವಜನಿಕರು ಮತ್ತು ಅಧಿಕಾರಿ/ಸಿಬ್ಬಂದಿಗಳು ತಮ್ಮ ಎಸ್.ಬಿ.ಖಾತೆ ಹೊಂದಿರುವ ಬ್ಯಾಂಕಿನಲ್ಲಿ ತಮ್ಮ ತಮ್ಮ ಸ್ವಂತ ಹಣದಿಂದ ವಿಮೆ ಮಾಡಿಸಿಕೊಂಡು ಸೌಲಭ್ಯ ಪಡೆದುಕೊಳ್ಳಬಹುದಾಗಿರುತ್ತದೆ ಎಂದು ಶ್ರೀರಾಂಪುರ ಪಟ್ಟಣ ಪಂಚಾಯತಿ ಮುಖ್ಯಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಹನಕೆರೆ ಗ್ರಾ.ಪಂ ಪಿಡಿಓ ಹಾಗೂ ಕಾರ್ಯದರ್ಶಿಯನ್ನು ಸೇವೆಯಿಂದ ಅಮಾನತು ಮಾಡುವಂತೆ ಆಗ್ರಹ




**ಮಂಡ್ಯ:** ಕ್ರಿಮಿನಲ್ ಪ್ರಕರಣದ ಆರೋಪಿ ಎಚ್.ಎಂ.ಪ್ರಸನ್ನ ಅವರಿಗೆ ಸಹಕಾರ ನೀಡಿ ಪರಿಶಿಷ್ಟ ಜಾತಿ ಫಲಾನುಭವಿ ಕುಟುಂಬದ ವಿರುದ್ಧ ಅಧಿಕಾರ ದುರ್ಬಳಕೆ ಮಾಡಿ ತೊಂದರೆ ನೀಡುತ್ತಿರುವ ಹನಕೆರೆ ಗ್ರಾ.ಪಂ ಪಿಡಿಓ ಎಸ್.ಭಾಗ್ಯ ಹಾಗೂ ಕಾರ್ಯದರ್ಶಿ ಎ.ಎಲ್.ಉಮೇಶ್ ಅವರನ್ನು ಸೇವೆಯಿಂದ ಅಮಾನತು ಮಾಡುವಂತೆ ಡಾ.ಬಿ.ಆರ್.ಅಂಬೇಡ್ಕರ್ ಸ್ವಾಭಿಮಾನ–ಜಾಗೃತಿ ಅಭಿಯಾನ ಸಮಿತಿಯ ರಾಜ್ಯಾಧ್ಯಕ್ಷ ಸಿ.ಎಂ.ಕೃಷ್ಣ ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಗ್ರಾಮದ ಶಾಲಿನಿ ಎಚ್.ಜಿ.ಗಂಗರಾಜು ಅವರು ರಾಜೀವ್‌ಗಾಂಧಿ ವಸತಿ ಯೋಜನೆಯಡಿ ಸರಕಾರದಿಂದ ನೀಡಿರುವ ಖಾಲಿ ನಿವೇಶನದಲ್ಲಿ ಕಟ್ಟಡ ಕಾಮಗಾರಿ ಆರಂಭಿಸಿದ್ದು, ಗ್ರಾಮದ ಎಚ್.ಎಂ.ಪ್ರಸನ್ನ ವೈಯಕ್ತಿಕ ದ್ವೇಶ ಮತ್ತು ಅಸೂಯೆ ಕಾರಣದಿಂದ ಈ ಅಧಿಕಾರಿಗಳಿಗೆ ಇಲ್ಲ ಸಲ್ಲದ ಕಾರಣ ನೀಡಿ ಅನಗತ್ಯವಾಗಿ ಕಟ್ಟಡ ನಿರ್ಮಾಣಕ್ಕೆ ತೊಂದರೆಯುಂಟು ಮಾಡಿ ಕಿರುಕುಳ ನೀಡುತ್ತಿದ್ದಾರೆ ಎಂದು ಆರೋಪಿಸಿದರು.

ಈ ಹಿಂದೆ ಶಾಲಿನ ಅವರ ಪತಿ ಎಚ್.ಜಿ.ಗಂಗರಾಜು ಅವರು ಪ್ರಸನ್ನ ವಿರುದ್ಧ ಪರಿಶಿಷ್ಟರ ದೇವಾಲಯ ಪ್ರವೇಶ ಸಂಬಂಧ ನಡೆದ ಅಸ್ಪೃಶ್ಯತೆ ಆಚರಣೆಯ ವಿಚಾರವಾಗಿ ಪ್ರಮುಖ ಸಾಕ್ಷಿದಾರರಾಗಿದ್ದಾರೆ. ಅವರು ಸಾಕ್ಷಿ ಹೇಳಿಕೆಯಿಂದ ಹಿಂದೆ ಸರಿಯಲೆಂಬ ಕಾರಣಕ್ಕೆ ಅನಗತ್ಯವಾಗು ದೌರ್ಜನ್ಯ ಎಸಗಲಾಗುತ್ತಿದೆ ಎಂದು ದೂರಿದರು. ಆರೋಪಿ ಎಚ್.ಎಂ.ಪ್ರಸನ್ನ ಸೇರಿದಂತೆ ಇತರರು ದುರುದ್ದೇಶದಿಂದ ಸಾರ್ವಜನಿಕ ತಕರಾರು ಅರ್ಜಿ ಹೆಸರಿನಲ್ಲಿ ನೀಡುತ್ತಿರುವ ಅನಗತ್ಯ ಕಿರುಕುಳಕ್ಕೆ ಅಧಿಕಾರಿಗಳು ಬೆಂಬಲ ನೀಡುವ ಸಂಬಂಧ ಜಿ.ಪಂ ಸಿಇಓ ಕೆ.ಆರ್.ನಂದಿನಿ ಅವರ ಗಮನಕ್ಕೆ ತರಲಾಗಿದೆ. ಅವರ ಸೂಚನೆ ಮೇರೆಗೆ ಕಟ್ಟಡ ನಿರ್ಮಾಣಕ್ಕೆ ನೀಡುತ್ತಿರುವ ಕಿರುಕುಳ ಸದ್ಯಕ್ಕೆ ಕಡಿಮೆಯಾಗಿದೆ. ಭವಿಷ್ಯದಲ್ಲಿ ಇದು ಮುಂದುವರೆಯುವ ಸಾಧ್ಯತೆಯಿದ್ದು, ಅಧಿಕಾರಿಗಳನ್ನು ಅಮಾನತು ಮಾಡಲು ಜಿಲ್ಲಾಧಿಕಾರಿ ಹಾಗೂ ಜಿ.ಪಂ ಸಿಇಓ ಮುಂದಾಗುವಂತೆ ಒತ್ತಾಯಿಸಿದರು. ಗೋಷ್ಠಿಯಲ್ಲಿ ಎಚ್.ಜಿ.ಗಂಗರಾಜು, ಪಾಪಣ್ಣ, ಲೋಕೇಶ್ ಇದ್ದರು.

# ಎಲ್ಲರೊಗೊಂದಾಗು ಮಂಕುತಿಮ್ಮ ಟ್ರಸ್ಟ್‌ನ ಅಧ್ಯಕ್ಷ ಎಂ.ವಿನಯ್‌ಕುಮಾರ್ ಹುಟ್ಟು ಹಬ್ಬ ಆಚರಣೆಗೆ ಸಿದ್ದತೆ




**ಮಂಡ್ಯ:** ಎಲ್ಲರೊಗೊಂದಾಗು ಮಂಕುತಿಮ್ಮ ಟ್ರಸ್ಟ್‌ನ ಅಧ್ಯಕ್ಷ ಎಂ.ವಿನಯ್‌ಕುಮಾರ್ ಅವರ 36ನೇ ಹುಟ್ಟುಹಬ್ಬದ ಅಂಗವಾಗಿ ಸಮಾಜದ ಒಳಿತಿಗಾಗಿ 36 ಕ್ಕೂ ಹೆಚ್ಚು ರೀತಿಯ ಸೇವಾ ಕಾರ್ಯಗಳ ಮೂಲಕ ವಿಶೇಷವಾಗಿ ಆಚರಿಸಲಾಗುತ್ತಿದೆ ಎಂದು ಎಲ್ಲರೊಳಗೊಂದಾಗು ವಿನಯ್ ಸ್ನೇಹಬಳಗದ ಸಂಚಾಲಕ ಅರವಿಂದ್ ಪ್ರಭು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 10 ವರ್ಷಗಳಿಂದ ನೂರಾರು ಸಾಮಾಜಿಕ ಕಾರ್ಯಗಳನ್ನು ತಮ್ಮ ಟ್ರಸ್ಟ್‌ನ ಮೂಲಕ ಮಾಡುತ್ತಾ ಬಂದಿರುವ ವಿನಯ್‌ಕುಮಾರ್ ಅಪಾರ ಸ್ನೇಹ ಬಳಗವನ್ನು ಹೊಂದಿದ್ದಾರೆ. ಹುಟ್ಟುಹಬ್ಬವನ್ನು ಸಾರ್ಥಕಗೊಳಿಸುವ ನಿಟ್ಟಿನಲ್ಲಿ ವಿಶಿಷ್ಟ ರೀತಿಯಲ್ಲಿ ವಿನಯ್ ಅವರ ಸ್ನೇಹ ಬಳಗದ ಗೆಳೆಯರು ಸಮಾಜಸೇವಾ ಕಾರ್ಯಗಳನ್ನು ಹಮ್ಮಿಕೊಂಡಿರುವುದು ವಿಶೇಷವಾಗಿದೆ ಎಂದರು.

ವಿನಯ್ ಅವರು ತಮ್ಮ ಸಂತೋಷವನ್ನು ಸಾಮಾಜಿಕ ಕಾಳಜಿಯಿಂದ ಜನರೊಂದಿಗೆ ಹಂಚಿಕೊಂಡು ವಿಶಿಷ್ಟವಾಗಿ ಹುಟ್ಟುಹಬ್ಬ ಆಚರಿಸಿಕೊಳ್ಳುತ್ತಿದ್ದಾರೆ. ಈ ನಿಟ್ಟಿನಲ್ಲಿ ಎಚ್‌ಐವಿ ಬಾಧಿತ ಮಕ್ಕಳಿಗೆ ಡ್ರೈಫ್ರೂಟ್ಸ್ ವಿತರಣೆ, ವಿಕಲ ಚೇತನರನ್ನು ಪ್ರೋತ್ಸಾಹಿಸುವ ಸೇವಾ ಕಾರ್ಯ, ಸಾವಯವ ಕೃಷಿಕರಿಗೆ ಪ್ರೋತ್ಸಾಹ, ವಚನ ಮತ್ತು ತತ್ವಪದ ಗಯನ, ಸಸಿ ನೆಡುವುದು, ಅನ್ನದಾಸೋಹ ಸೇರಿದಂತೆ ಹಲವು ಕಾರ್ಯಕ್ರಮಗಳು ಕಳೆದ 3 ದಿನದಿಂದ ನಡೆಯುತ್ತಿದ್ದು, ಮುಂದಿನ 3 ದಿನಗಳು ನಡೆಯಲಿವೆ ಎಂದು ಹೇಳಿದರು.

ಜಿ.ಸಂತೋಷ್ ಮಾತನಾಡಿ, ಈ ಕಾರ್ಯಕ್ರಮಗಳು ಸದುದೇಶದಿಂದ ಕೂಡಿವೆ. ಇತರರಿಗೂ ಈ ಕಾರ್ಯಕ್ರಮಗಳು ಸ್ಫೂರ್ತಿಯಾಗಲಿದೆ ಎನ್ನುವುದು ಗೆಳೆಯರ ಬಳಗದ ಆಶಯ ಎಂದ ಅವರು, ವಿನಯ್ ಅವರು ರಾಜಕೀಯ ಪ್ರವೇಶದ ಹಿನ್ನಲೆ ಸಮಾಜಮುಖಿ ಕಾರ್ಯಗಳನ್ನು ಮಾಡುತ್ತಿರುವ ಗುಮಾನಿ ಕೇಳಿಬಂದಿದೆ. ಅವರು ರಾಜಕೀಯ ಪ್ರವೇಶ ಮಾಡಿದರೆ ಸ್ನೇಹಬಳಗದ ಎಲ್ಲ ಸಂಘಟನೆಗಳು ಅವರಿಂದ ಹಿಂದೆ ಸರಿಯಲಿವೆ ಎಂದು ಪ್ರಶ್ನೆಗೆ ಉತ್ತರ ನೀಡಿದರು.

# ಸ್ವಯಂ ಉದ್ಯೋಗ, ಸ್ಟಾರ್ಟ್‌ಅಪ್ ಚಟುವಟಿಕೆಗಳ ಉತ್ತೇಜನಕ್ಕಾಗಿ ಇಂಕ್ಯುಬೇಟರ್ ಫೌಂಡೇಷನ್‌ನಿಂದ ಮಾರ್ಗದರ್ಶನ: ಸಿಇಓ




**ಮಂಡ್ಯ:** ಸ್ವಯಂ ಉದ್ಯೋಗಗಳ ಸ್ಟಾರ್ಟ್‌ಅಪ್ ಚಟುವಟಿಕೆಗಳಿಗೆ ಉತ್ತೇಜನ ನೀಡುವ ನಿಟ್ಟಿನಲ್ಲಿ ಜಿಎಸ್‌ಎಸ್‌ಎಸ್ ಟೆಕ್ನಾಲಜಿ ಬಿಸಿನೆಸ್ ಇಂಕ್ಯುಬೇಟರ್ ಫೌಂಡೇಷನ್ ಸಂಸ್ಥೆಯಿಂದ ಮಾರ್ಗದರ್ಶನ ಮತ್ತು ಬೆಂಬಲ ಒದಗಿಸಲಾಗುತ್ತಿದೆ ಎಂದು ಸಂಸ್ಥೆಯ ಸಿಇಓ ಯಶಸ್ವಿನಾಗ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಭಾರತ ಸರಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ 'ನಿಧಿ–ಐಟಿಬಿಐ' ಯೋಜನೆಯಡಿ ಸಂಸ್ಥೆ ಕಾರ್ಯನಿರ್ವಹಿಸುತ್ತಿದ್ದು, ಮೈಸೂರು ಹಾಗೂ ಸುತ್ತಮುತ್ತಲ ಪ್ರದೇಶದಲ್ಲಿ ತಂತ್ರಜ್ಞಾನ ಆಧಾರಿತ ಸ್ಟಾರ್ಟ್‌ಅಪ್‌ಗಳಿಗೆ ನೆರವಾಗುತ್ತಿದೆ ಎಂದರು.

ಜಿಎಸ್‌ಎಸ್ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್ ಅಂಡ್ ಟೆಕ್ನಾಲಜಿ ಫಾರ್ ವುಮನ್ (ಜಿಎಸ್‌ಎಸ್‌ಎಸ್‌ಐಇಟಿಡಬ್ಲ್ಯೂ) ಆವರನ್ನು ಸಂಸ್ಥೆಯು ಕಾರನಿರ್ವಹಿಸುತ್ತಿದೆ. ಕೃಷಿ, ಆಹಾರ, ಆರೋಗ್ಯ ಕ್ಷೇತ್ರಗಳಲ್ಲಿ ವಿನೂತನ ರೀತಿಯ ಉದ್ಯಮಗಳ ಆರಂಭಕ್ಕೆ ಮೂಲ ಸೌಕರ್ಯ, ಮಾರ್ಗದರ್ಶನ, ನೆಟ್‌ವರ್ಕಿಂಗ್, ಮಾರುಕಟ್ಟೆ ಸಂಪರ್ಕ ಮತ್ತು ಅನುದಾನ ಮಾರ್ಗದರ್ಶನ ನೀಡಲಾಗುವುದು. ಈಗಾಗಲೇ ಸಂಸ್ಥೆಯಿಂದ 10 ಸ್ಟಾರ್ಟ್‌ಅಪ್ ಕಂಪನಿಗಳು ಆರಂಭಗೊಂಡು ಕಾರ್ಯನಿರ್ವಹಿಸುತ್ತಿವೆ ಎಂದು ಹೇಳಿದರು.

ಸಂಸ್ಥೆಯು ಪ್ರೀ–ಇಂಕ್ಯುಬೇಷನ್ ಮತ್ತು ಐಡಿಯಾ ಮಾರ್ಗದರ್ಶನ, ರೂ.10 ಲಕ್ಷದವರೆಗೆ ಸ್ಟಾರ್ಟ್‌ಅಪ್ ಅನುದಾನ, ಆಹಾರ ಸಂಸ್ಕರಣೆ ಉದ್ಯಮದಲ್ಲಿ ತೊಡಗಿರುವವರು ಸಂಸ್ಥೆಯಲ್ಲಿ ಲಭ್ಯವಿರುವ ಯಂತ್ರೋಪಕರಣಗಳ ಬಳಕೆಗೆ ಅವಕಾಶ, ಪ್ರೋಟೋಟೈಪ್ ಅಭಿವೃದ್ಧಿಗೆ ಸಹಾಯ, ವ್ಯವಹಾರ ಮಾರ್ಗದರ್ಶನ, ಮಾರುಕಟ್ಟೆ ಸಂಪರ್ಕ, ಹೂಡಿಕೆದಾರರ ಸಂಪರ್ಕ ಮತ್ತು ಅನುದಾನಕ್ಕೆ ಸೂಕ್ತ ಸಹಾಯ ಒದಗಿಸಲಾಗುವುದು ಎಂದು ವಿವರಿಸಿದರು.

ಕಾಲೇಜು ಹಂತದಲ್ಲಿನ ಕ್ರಿಯಾತ್ಮಕ ಆಲೋಚನೆಯುಳ್ಳ ವಿದ್ಯಾರ್ಥಿಗಳಿಗೆ ಕೃಷಿ ಆಧಾರಿತ ಉದ್ಯಮಕ್ಕೆ ಪ್ರೋತ್ಸಾಹ ನೀಡಲು ಮಾ.13ರಂದು ಜಿಎಸ್‌ಎಸ್‌ಎಸ್‌ಐಇಟಿಡಬ್ಲ್ಯೂ ಆವರಣದಲ್ಲಿ 'ಟೆಕ್ನಾಲಜಿ ಚಾಲೆಂಜ್' ಹೆಸರಿನಲ್ಲಿ ಕಾರ್ಯಕ್ರಮ ಆಯೋಜಿಸಲಾಗಿದೆ. ಭಾಗವಹಿಸುವ ತಂಡದಲ್ಲಿ 1–5 ಮಂದಿ ಇರಬೇಕು, 1500 ರೂ ಪ್ರವೇಶ ಶುಲ್ಕ ಪಾವತಿಸಬೇಕು. ಅತ್ಯುತ್ತಮ ಯೋಜನೆಗಳಿಗೆ 50 ಸಾವಿರ ನಗದು ಬಹುಮಾನ, 10 ಉತ್ತಮ ಯೋಜನೆಗಳ ಸ್ಟಾರ್ಟ್‌ಅಪ್‌ಗೆ ಸಹಕಾರ ಹಾಗೂ ಉದ್ಯಮಗಳ ಪ್ರವೇಶಕ್ಕೆ ಉತ್ತೇಜನ ನೀಡಲಾಗುವುದು ಎಂದು ಇದೇ ವೇಳೆ ತಿಳಿಸಿದರು. ಗೋಷ್ಠಿಯಲ್ಲಿ ಅಶೋಕಾನಂದ, ಸಂಜಯ್ ಪಾಂಡೆ ಇದ್ದರು.

# ಶ್ರೀಶನೇಶ್ವರಸ್ವಾಮಿ 41ನೇ ವರ್ಷದ ಜಾತ್ರಾ ಮಹೋತ್ಸವ




ಮಂಡ್ಯ: ತಾಲೂಕಿನ ಕಚ್ಚಿಗೆರೆ ಗ್ರಾಮದ ಶ್ರೀಶನೇಶ್ವರಸ್ವಾಮಿ ದೇವಾಲಯದ 41ನೇ ವರ್ಷದ ಜಾತ್ರಾ ಮಹೋತ್ಸವವು ಫೆ.28 ಮತ್ತು ಮಾ.1ರಂದು ನಡೆಯಲಿದೆ ಎಂದು ಕನ್ನಡ ಸೇನೆ ಜಿಲ್ಲಾಧ್ಯಕ್ಷ ಮಂಜುನಾಥ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜಾತ್ರಾ ಮಹೋತ್ಸವದ ಅಂಗವಾಗಿ ಫೆ.28ರಂದು ಬೆಳಿಗ್ಗೆ 7.30ರಿಂದ ದೇವಾಲಯದಲ್ಲಿ ವಿವಿಧ ಧಾರ್ಮಿಕ ಕೈಂಕರ್ಯಗಳು ನೆರವೇರಲಿವೆ. ಮಧ್ಯಾಹ್ನ 12 ಗಂಟೆಗೆ ಮಹಾಮಂಗಳಾರತಿ, ತೀರ್ಥ ಪ್ರಸಾದ ವಿನಿಯೋಗ ಮಧ್ಯಾಹ್ನ 2 ರಿಂದ 5 ಗಂಟೆವರೆಗೆ ತಲೆಮುಡಿ ಸೇವೆ ನಡೆಯಲಿದೆ ಎಂದರು.

ಸಂಜೆ. 5ರಿಂದ 7.30ರವರೆಗೆ ವೀರಗಾಸೆ, ವಾದ್ಯ ಮೆರವಣಿಗೆ ಮೂಲಕ ಮೀಸಲು ನೀರು ತರಲಾಗುವುದು. ತರಿಕೆರೆ ಗ್ರಾಮಸ್ಥರಿಂದ ಕರಿಯಣ್ಣ, ಕೆಂಚಣ್ಣ ದೇವರುಗಳು ಮಣಿಸೇವೆ ನಡೆಯಲಿದೆ. ಸಂಜೆ 7.30ಕ್ಕೆ ವೇದಿಕೆ ಕಾರ್ಯಕ್ರಮ ನಡೆಯಲಿದ್ದು, ವಿನಾಯಕ ಗೆಳೆಯರ ಬಳಗದಿಂದ ಸಿನಿ ಮ್ಯೂಸಿಕ್, ಶ್ರೀಕಾಂತ ತಂಡದಿಂದ ಸುಗಮ ಸಂಗೀತ ಮತ್ತು ಭಕ್ತಿಗೀತೆ, ಝೀ ಕನ್ನಡ ಸರಿಗಮಪ ಖ್ಯಾತಿಯ ಜ್ಞಾನ ಗುರುರಾಜ್ ಅವರಿಂದ ಸುಗಮ ಸಂಗೀತ ಕಾರ್ಯಕ್ರಮ, ಮಿಮಿಕ್ರಿ ಗೋಪಿ ಅವರಿಂದ ಹಾಸ್ಯ ಕಾರ್ಯಕ್ರಮ, ಬಿ.ಪಿ.ಗೌತಮಿ ಅವರಿಂದ ಭರತನಾಟ್ಯ, ವಿದ್ವಾನ್ ಸತೀಶ್‌ಕುಮಾರ್ ತಾಂಡವಮೂರ್ತಿ ತಂಡದಿಂದ ಶಾಸ್ತ್ರೀಯ ಸಂಗೀತ ನಡೆಯಲಿದೆ. ಕಾರ್ಯಕ್ರಮದಲ್ಲಿ ಶಾಸಕ ರವಿಕುಮಾರ್ ಗೌಡ, ಕರ್ನಾಟಕ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷ ಡಾ.ನಾಗಲಕ್ಷ್ಮಿ ಚೌಧರಿ ಭಾಗವಹಿಸಿದ್ದು, ಕಿರುತೆರೆ ನಟ ಕಿರಣ್‌ರಾಜ್ ಹಾಗೂ ನಿವೃತ್ತ ಯೋಧ, ಇಟ್ನಕೊಪ್ಪಲು ಗ್ರಾಮದ ಯೋಗೇಶ್ ಅವರನ್ನು ಅಭಿನಂದಿಸಲಾಗುವುದು ಎಂದು ವಿವರಿಸಿದರು.

ರಾತ್ರಿ 9ರಿಂದ 11ರವರೆಗೆ ಅನ್ನ ಸಂತರ್ಪಣೆ ನೆರವೇರಲಿದ್ದು, ಬೆಳಿಗ್ಗೆ 5ರವರೆಗೆ ಅದ್ದೂರಿ ಬೆಳ್ಳಿ ಗಿಂಡಿ ಪೂಜೆ, ಶನೇಶ್ವರ ಸ್ವಾಮಿ ಬೆಳ್ಳಿರಥೋತ್ಸವ, ಮಲೆ ಮಹದೇಶ್ವರ ಸ್ವಾಮಿಯ ಹುಲಿವಾಹನೋತ್ಸವ ನಡೆಯಲಿದೆ. ಮಾ.1ರ ಬೆಳಿಗ್ಗೆ 7ರಿಂದ 12ರವರೆಗೆ ಅನ್ನ ಸಂತರ್ಪಣೆ ಏರ್ಪಡಿಸಲಾಗಿದೆ ಎಂದು ಮಾಹಿತಿ ನೀಡಿದರು.

ಗೋಷ್ಠಿಯಲ್ಲಿ ದೇವಾಲಯದ ಪ್ರಧಾನ ಅರ್ಚಕ ಪ್ರಸನ್ನ, ಮಹಾಂತಪ್ಪ, ಕಿರಣ್‌ರಾಜ್, ನಿತಿನ್, ಶಿವು ಇದ್ದರು.

# ಹ್ಯೂ ಲರ್ನ್ ಜೊತೆಗೆ ಧೀ ಆಸ್ಪತ್ರೆ ಪಾಲುದಾರಿಕೆ | ಬೊಲಿವಿಯಾ ಸಚಿವರ ಶ್ಲಾಘನೆ

# 'ಹ್ಯೂ ಬ್ರೈನ್ ರೂಮ್' ಎಐ ಚಾಲಿತ ನರವಿಜ್ಞಾನ ತರಬೇತಿ




**ಬೆಂಗಳೂರು:** ಇಲ್ಲಿನ ಕನಕಪುರ ರಸ್ತೆಯಲ್ಲಿರುವ ಆಊಇಇ ಆಸ್ಪತ್ರೆಯಲ್ಲಿ ಜಾಗತಿಕ ಶಿಕ್ಷಣ ತಂತ್ರಜ್ಞಾನ ಸಂಸ್ಥೆ Hue Learn ಜೊತೆಗೆ ಕಾರ್ಯತಂತ್ರದ ಪಾಲುದಾರಿಕೆಯನ್ನು ಘೋಷಿಸಿದೆ. ಈ ಸಹಯೋಗದ ಭಾಗವಾಗಿ ಸೋಮವಾರಂದು ದಕ್ಷಿಣ ಅಮೆರಿಕದ ಬೊಲಿವಿಯಾದ ವಿಜ್ಞಾನ ಮತ್ತು ತಂತ್ರಜ್ಞಾನದ ಸಚಿವ ಓಮರ್ ಆಲ್ಫ್ರೆಡೊ ಪೆನಲೋಜಾ ಎಸ್ಕಲೇರಾ ಅವರು ಆರೋಗ್ಯ ವೃತ್ತಿಪರ ತರಬೇತಿಯಲ್ಲಿ ಕ್ರಾಂತಿ ತರಲಿರುವ ಂಐ ಮತ್ತು ನರವಿಜ್ಞಾನ ಚಾಲಿತ 'ಹ್ಯೂ ಬ್ರೈನ್ ರೂಮ್' ಅನ್ನು ಪ್ರದರ್ಶನದ ಮೂಲಕ ಪರಿಚಯಿಸಲಾಯಿತು.

Hue Learnನ ಸಿಇಒ ಹಾಗೂ ಸಹ–ಸಂಸ್ಥಾಪಕ ಶಿವರಾಮ್ ಕೆ.ಆರ್.ಮಾತನಾಡಿ, ನರವಿಜ್ಞಾನ ಭಾಗವಾಗಿ ದೃಶ್ಯ, ಆಲಿಸುವಿಕೆ ಮತ್ತು ಸಂವಾದಾತ್ಮಕ ಅನುಭವಗಳ ಮೂಲಕ ಕಲಿಕೆಗೆ ಹೆಚ್ಚು ಆಳವಾಗಿ ತೊಡಗಿಸಿಕೊಳ್ಳುವಂತೆ ಮಾಡಲು ಹ್ಯೂ 'ಬ್ರೈನ್ ರೂಮ್' ವಿನ್ಯಾಸಗೊಳಿಸಲಾಗಿದೆ.

ಆಊಇಇ ಆಸ್ಪತ್ರೆಯೊಂದಿಗಿನ ನಮ್ಮ ಸಹಯೋಗವು ಜಾಗತಿಕ ಆರೋಗ್ಯ ಶಿಕ್ಷಣವನ್ನು ಮರುವ್ಯಾಖ್ಯಾನಿಸುವತ್ತ ಪ್ರಮುಖ ಹೆಜ್ಜೆಯಾಗಿದೆ. 'ಬೆಂಗಳೂರು ಇಂದು ಜಾಗತಿಕ ನಾವೀನ್ಯತೆ ಕೇಂದ್ರವಾಗಿದ್ದು, ಈ ಪಾಲುದಾರಿಕೆ ಅದಕ್ಕೆ ಸಾಕ್ಷಿಯಾಗಿದೆ' ಎಂದರು.

ಹ್ಯೂ ಬ್ರೈನ್ ರೂಮ್' ಸಂವಾದಾತ್ಮಕ ಸ್ಮಾರ್ಟ್ ಬೋರ್ಡ್ Hue Play ಮತ್ತು Hue Spark ಎಂಬ ಸ್ವಾಮ್ಯದ ಅಪ್ಲಿಕೇಶನ್‌ಗಳೊಂದಿಗೆ ಸಂಯೋಜಿಸಿ, ವಿದ್ಯಾರ್ಥಿಗಳಿಗೆ ತಲ್ಲೀನಗೊಳಿಸುವ, ಗಮನ–ಚಾಲಿತ ಹಾಗೂ ಫಲಿತಾಂಶಾಧಾರಿತ ಕಲಿಕಾ ಅನುಭವವನ್ನು ಇದು ಒದಗಿಸುತ್ತದೆ.

ಬೊಲಿವಿಯಾದ ವಿಜ್ಞಾನ ಮತ್ತು ತಂತ್ರಜ್ಞಾನದ ಸಚಿವ ಓಮರ್ ಆಲ್ಫ್ರೆಡೊ ಪೆನಲೋಜಾ ಎಸ್ಕಲೇರಾ ಅವರು ಈ ಆವಿಷ್ಕಾರವನ್ನು ಪ್ರಶಂಶಿಸಿ ಈ ಸಂಶೋಧನೆ ಜಾಗತಿಕ ಮಟ್ಟದಲ್ಲಿ ಮತ್ತಷ್ಟು ಅವಕಾಶಗಳನ್ನು ತೆರೆಯಲು ಪೂರಕವಾಗಿದೆ. Hue Learnನ ಸಿಇಒ ಹಾಗೂ ಸಹ–ಸಂಸ್ಥಾಪಕ ಶಿವರಾಮ್ ಕೆ.ಆರ್. ಅವರನ್ನು ಈ ಸಂದರ್ಭದಲ್ಲಿ ಶ್ಲಾಘಿಸಿದರು. ಆಗಮಿಸಿದ್ದ ಅತಿಥಿಗಳನ್ನು ಇದೇ ಸಂದರ್ಭದಲ್ಲಿ ಗೌರವಿಸಲಾಯಿತು.

- ಕಲಿಕಾ ಗಮನ ಸೆರೆಹಿಡಿದು ದೀರ್ಘಕಾಲ ಉಳಿಸಿಕೊಳ್ಳಲು ಸಹಾಯ ಮಾಡುತ್ತದೆ.
- ಮೆದುಳಿನ ಹಲವು ಭಾಗಗಳನ್ನು ಸಕ್ರಿಯಗೊಳಿಸಿ ಆಳವಾದ ತಿಳುವಳಿಕೆಗೆ ಉತ್ತೇಜನ ನೀಡುತ್ತದೆ.
- ನೆನಪಿನ ಶಕ್ತಿಯನ್ನು ಹೆಚ್ಚಿಸುತ್ತದೆ.
- AI–ರಚಿತ ವಿಷಯದೊಂದಿಗೆ ಮಾನವ ಪರಿಣತಿಯನ್ನು ಸಂಯೋಜಿಸುತ್ತದೆ.
- ಕಲಿಯುವ ಪ್ರತಿಯೊಬ್ಬರಿಗೆ ವೈಯಕ್ತೀಕರಿಸಿದ ಕಲಿಕಾ ಮಾರ್ಗ ರೂಪಿಸುತ್ತದೆ.

ಇದು ವೈದ್ಯರಿಗೆ ವೇಗವಾಗಿ ಬದಲಾಗುತ್ತಿರುವ ವೈದ್ಯಕೀಯ ಜಗತ್ತಿನಲ್ಲಿ ಪರಿಣಾಮಕಾರಿ ತರಬೇತಿ ನೀಡುವ ಮಹತ್ವದ ಪರಿಹಾರವಾಗಿ ರೂಪುಗೊಂಡಿದೆ.

- Hue Learn ಜಾಗತಿಕ ಶಿಕ್ಷಣದ ಹೊಸ ದೃಷ್ಟಿಕೋನ

AI–ಸಕ್ರಿಯಗೊಳಿಸಿದ ಆರೋಗ್ಯ ತರಬೇತಿ ಈಗ ಮುಂಚೂಣಿಯಲ್ಲಿದೆ ಎಂದು ಧೀ ಆಸ್ಪತ್ರೆ ಸಂಸ್ಥಾಪಕ ಸಿಇಒ ಹಾಗೂ ಮೂಳೆ ಶಸ್ತ್ರಚಿಕಿತ್ಸಕ ಡಾ.ಚಂದ್ರಶೇಖರ್ ಚಿಕ್ಕಮುನಿಯಪ್ಪ ಹೇಳಿದರು.

ಜನರನ್ನು ಆರೋಗ್ಯವಂತರನ್ನಾಗಿ ಮುನ್ನಡೆಸುವುದೇ ನಮ್ಮ ಮೂಲ ಧ್ಯೇಯವಾಗಿದ್ದು, ಇದಕ್ಕೆ ಮೊದಲ ಹೆಜ್ಜೆ ಎಂದರೆ, ಅವರನ್ನು ನೋಡಿಕೊಳ್ಳುವ ಸಿಬ್ಬಂದಿಗೆ ಅತ್ಯುತ್ತಮ ತರಬೇತಿ ನೀಡುವುದಾಗಿದೆ. AI ಅನ್ನು ನಾವು ಮನುಷ್ಯ ಬೋಧನೆಗೆ ಬದಲಾಗಿ ಅಲ್ಲ, ಬದಲಾಗಿ ಮನುಷ್ಯ ಸಾಮರ್ಥ್ಯದ ಬಲವರ್ಧಕವಾಗಿ ನೋಡುತ್ತೇವೆ ಎಂದರು.

'ಹ್ಯೂ ಬ್ರೈನ್ ರೂಮ್' ನರವಿಜ್ಞಾನ, ತಂತ್ರಜ್ಞಾನ ಮತ್ತು ಸಹಾನುಭೂತಿಯ ಆರೋಗ್ಯ ತರಬೇತಿಯನ್ನು ಒಟ್ಟುಗೂಡಿಸುವ ಹೊಸ ಮಾದರಿಯಾಗಿದೆ. ಇದು ಭಾರತದಲ್ಲಿ AI–ಚಾಲಿತ ಆರೋಗ್ಯ ಶಿಕ್ಷಣಕ್ಕೆ ಹೊಸ ದಿಕ್ಕು ನೀಡಲಿದೆ' ಎಂದರು.

## ಅವಧಿ ವಿಸ್ತರಣೆ

**ತುಮಕೂರು:** ಕೈಮಗ್ಗ ಮತ್ತು ಜವಳಿ ಇಲಾಖೆ ವತಿಯಿಂದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ ವೈಯಕ್ತಿಕ ಫಲಾನುಭವಿ/ ಪಾಲುದಾರಿಕೆ ಸಂಸ್ಥೆ/ ಕಂಪನಿ/ ಜವಳಿ ಸಹಕಾರಿ ಸಂಘ/ ಸಂಸ್ಥೆಗಳು ಜವಳಿ ಕ್ಷೇತ್ರಕ್ಕೆ ಸಂಬಂಧಿಸಿದ ಸಣ್ಣ ಮತ್ತು ಅತೀಸಣ್ಣ ಘಟಕಗಳನ್ನು ಸ್ಥಾಪಿಸಲು ಸಹಾಯಧನಕ್ಕಾಗಿ ಅರ್ಜಿ ಸಲ್ಲಿಸುವ ಅವಧಿಯನ್ನು ಮಾರ್ಚ್ 10ರವರೆಗೆ ವಿಸ್ತರಿಸಲಾಗಿದೆ.

ಜವಳಿ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಸಣ್ಣ ಮತ್ತು ಅತಿ ಸಣ್ಣ ಘಟಕಗಳನ್ನು ಸ್ಥಾಪಿಸಲು ಈಗಾಗಲೇ ಜಿಲ್ಲಾ ಮಟ್ಟದ ಏಕಗವಾಕ್ಷಿ ಒಪ್ಪಿಗೆ ಸಮಿತಿ ಸಭೆಯಲ್ಲಿ ಅನುಮೋದನೆ ಪಡೆದ ಹಾಗೂ ಬ್ಯಾಂಕ್/ಹಣಕಾಸು ಸಂಸ್ಥೆಗಳಿಂದ ಸಾಲ ಮಂಜೂರಾತಿ ಪಡೆದಿರುವ ಅರ್ಹ ಘಟಕಗಳು ಪೂರ್ಣ ಪ್ರಮಾಣದ ದಾಖಲಾತಿಗಳೊಂದಿಗೆ ಪ್ರಸ್ತಾವನೆಯನ್ನು ಮಾರ್ಚ್ 10ರೊಳಗಾಗಿ ಸಲ್ಲಿಸಬೇಕು.

ಯೋಜನೆ ಕುರಿತು ಪೂರ್ಣ ಮಾಹಿತಿಯನ್ನು ಉಪನಿರ್ದೇಶಕರು, ಕೈಮಗ್ಗ ಮತ್ತು ಜವಳಿ ಇಲಾಖೆ, ನಾಗನಿಲಯ, 5ನೇ ಮುಖ್ಯರಸ್ತೆ, ಸಿದ್ದಗಂಗಾ ಬಡಾವಣೆ, ತುಮಕೂರು ಅಥವಾ ದೂ.ವಾ.ಸಂ. 0816–2275370ಯನ್ನು ಸಂಪರ್ಕಿಸಬಹುದಾಗಿದೆ .

# ವಿನಯ್ ಸ್ನೇಹ ಬಳಗದಿಂದ ಸಮವಸ್ತ್ರ ವಿತರಣೆ

**ಮಂಡ್ಯ:** ನಗರದ ಕಾಳೇಗೌಡ ಪ್ರೌಢಶಾಲೆ ಆವರಣದಲ್ಲಿ ಎಲ್ಲರೊಳಗೊಂದಾಗು ವಿನಯ್ ಸ್ನೇಹ ಬಳಗದ ವತಿಯಿಂದ ಶಾಲಾ ಮಕ್ಕಳಿಗೆ ಉಚಿತ ಸಮವಸ್ತ್ರವನ್ನು ವಿತರಿಸಲಾಯಿತು. ಎಲ್ಲರೊಳಗೊಂದಾಗು ಮಂಕುತಿಮ್ಮ ಟ್ರಸ್ಟ್ ಸಂಸ್ಥಾಪಕ ಅಧ್ಯಕ್ಷ ಎಂ.ವಿನಯ್ ಕುಮಾರ್ ಮಾತನಾಡಿ, ನನ್ನ ಜನ್ಮದಿನದ ಅಂಗವಾಗಿ ಸಮಾಜ ಮುಖಿ ಕಾರ್ಯಕ್ರಮ ಮಾಡುವ ಉದ್ದೇಶದಿಂದ ಇಂದು ಕಾಳೇಗೌಡ ಪ್ರೌಢಶಾಲೆಯಲ್ಲಿ ವಿದ್ಯಾರ್ಥಿಗಳಿಗೆ ಸಮವಸ್ತ್ರ ವಿತರಣೆ ಮಾಡಿದ್ದು 36ನೇವರ್ಷದ ಜನ್ಮದಿನ ಅಂಗವಾಗಿ 36 ಸಮಾಜಮುಖಿ ಸೇವೆ ಮಾಡಿ ಸಾರ್ಥಕತೆ ಜೀವನ ನಡೆಸುತ್ತೇನೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಎಂ.ಎಸ್.ರಾಜೇಂದ್ರ ಪ್ರಸಾದ್ ಟ್ರಸ್ಟ್ ಕಾರ್ಯದರ್ಶಿ ನಾಗರತ್ನ, ಆಲಯನ್ಸ್ ಮೋಹನ್ ಕುಮಾರ್, ಶಿಕ್ಷಕರಾದ ಉಮೇಶ್, ಮೋಹನ್, ರಾಥೋಡ್, ಗೋವಿಂದರಾಜು ಭಾಗವಹಿಸಿದ್ದರು.




# ರಾಜ್ಯಪಾಲರಿಗೆ ಮಾದಿಗ ಸಮುದಾಯ ಒತ್ತಾಯ ಒಳಮೀಸಲಾತಿ ವಿಧೇಯಕ ಅಂಗೀಕಾರಗೊಳಿಸಿ




**ಮಂಡ್ಯ:** ರಾಜ್ಯದಲ್ಲಿ ಸಂಪೂರ್ಣ ಒಳಮೀಸಲಾತಿ ಜಾರಿಗೆ ಆಗ್ರಹಿಸಿ ಹಾಗೂ ಕೂಡಲೇ ರಾಜ್ಯಪಾಲರು ಒಳಮೀಸಲಾತಿ ವಿಧೇಯಕಕ್ಕೆ ರಾಜ್ಯಪಾಲರು ಅಂಕಿತ ಹಾಕುವಂತೆ ಒತ್ತಾಯಿಸಿ ಮಂಡ್ಯನಗರದಲ್ಲಿ ಮಾದಿಗ ಸಮುದಾಯದ ಸಂಘಟನೆಗಳು ಸೋಮವಾರ ಪ್ರತಿಭಟನೆ ನಡೆಸಿದವು.

ಮಂಡ್ಯನಗರದ ಸಂಜಯ ವೃತ್ತದಿಂದ ಪ್ರತಿಭಟನಾ ಮೆರವಣಿಗೆ ಹೋರಾಟ ಪ್ರತಿಭಟನಕಾರರು ರಾಜ್ಯ ಸರ್ಕಾರ ಹಾಗೂ ಸಮಾಜ ಕಲ್ಯಾಣ ಸಚಿವ ಹೆಚ್.ಸಿ.ಮಹದೇವಪ್ಪ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ನೇರ ನೇಮಕಾತಿಯ ಜೊತೆಗೆ ಬಡ್ತಿ ಹಾಗೂ ಬ್ಯಾಕ್ ಲಾಗ್ ಏಖಂಆಃ ಹಾಗೂ ಃಆಂ ಮತ್ತು ಸರ್ಕಾರಿ ಗುತ್ತಿಗೆ ಸೇರಿದಂತೆ ಎಲ್ಲಾ ನೇಮಕಾತಿಯಲ್ಲೂ ಸಂಪೂರ್ಣ ಒಳಮೀಸಲಾತಿ ಜಾರಿ ಮಾಡಬೇಕು. ಎಸ್‌ಸಿಪಿ /ಟಿಎಸ್ ಪಿ ಅನುದಾನದಲ್ಲೂ 6:6:5 ಅನುಪಾತದಲ್ಲಿ ಹಂಚಿಕೆಯಾಗ ಬೇಕು ಹಾಗೂ ಮುಂಬರುವ ಗ್ರಾಮ ಪಂಚಾಯಿತಿ, ತಾಲ್ಲೂಕು. ಜಿಲ್ಲಾ ಪಂಚಾಯಿತಗಳ ಚುನಾವಣೆಯಲ್ಲೂ ಸಹ ರಾಜಕೀಯ ಒಳಮೀಸಲಾತಿ ಕಲ್ಪಿಸಬೇಕು ಹಾಗೂ ಆದಿಜಾಂಬವ ಅಭಿವೃದ್ಧಿ ನಿಗಮ ಡಾ? ಬಾಬು ಜಗಜೀವನ್ ರಾಮ್ ಅಭಿವೃದ್ಧಿ ನಿಗಮ. ಸಫಾಯಿ ಕರ್ಮಚಾರಿ ಅಭಿವೃದ್ಧಿ ನಿಗಮಗಳಿಗೆ ತಲಾ 2 ಸಾವಿರ ಕೋಟಿ ಹಣ ನೀಡಬೇಕು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಮಾದಿಗ ಒಳಮೀಸಲಾತಿ ಹೋರಾಟ ಸಮಿತಿ ಜಿಲ್ಲಾ ಅಧ್ಯಕ್ಷರಾದ ಸಿ ಕೆ ಪಾಪಯ್ಯ, ಮಾದರ ಮಹಾಸಭಾದ ಜಿಲ್ಲಾ ಅಧ್ಯಕ್ಷ ಬಿನ್ ಕಾಂತರಾಜು, ಮುಖಂಡರಾದ, ಬಿ ಕೃಷ್ಣ, ಹೆಚ್ ಎಂ ಪುಟ್ಟರಾಜು, ಜಿ.ಪಂ. ಮಾಜಿ ಅಧ್ಯಕ್ಷ ಕುಮಾರ್, ಚಾಮನಹಳ್ಳಿ ಮಂಜು, ಬಾಳೆಹೊನ್ನಿಗ ಕುಮಾರ್, ಕನ್ನಲಿ ಕೆಂಪಯ್ಯ, ಗೋವಿಂದಯ್ಯ, ಶಂಭುನಹಳ್ಳಿ ರವಿಕುಮಾರ್, ಚಿಕ್ಕಲಿಂಗಯ್ಯ, ಇನ್ನಿತರರು ಹಾಜರಿದ್ದರು.

# ಪ್ರಗತಿ ಶಾಲೆಯಲ್ಲಿ ಬಹುಮಾನ ವಿತರಣೆ



**ಕೆ .ಆರ್. ಪೇಟೆ ,:** ಪಟ್ಟಣದ ಪ್ರಗತಿ ಆಂಗ್ಲ ಮಾಧ್ಯಮ ಶಾಲೆಯಲ್ಲಿ ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಣಾ ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಸಲಾಯಿತು.

ತಾಲೂಕಿನ ರೈತ ಮುಖಂಡ ತಜ್ಞ ವಿಠಲಪುರ ಸುಬ್ಬೆಗೌಡ ಕಾರ್ಯಕ್ರಮವನ್ನು ಗಿಡಕ್ಕೆ ನೀರಿರುವುದರ ಮೂಲಕ ಉದ್ಘಾಟನೆ ಮಾಡಿ ಮಾತನಾಡಿದರು

ಶಿಕ್ಷಣ ಅತ್ಯಂತ ಅಮೂಲ್ಯವಾದದ್ದು ಶಿಕ್ಷಣ ಪಡೆದವರು ಯಾರು ಹಿಂದುಳಿಯಲು ಸಾಧ್ಯವಿಲ್ಲ. ಮಕ್ಕಳಿಗೆ ಉತ್ತಮವಾದ ಶಿಕ್ಷಣವನ್ನು ನೀಡುವುದರ ಮೂಲಕ ಉತ್ತಮ ಸಮಾಜ ನಿರ್ಮಾಣ ಮಾಡಲು ಸಾಧ್ಯವಾಗುತ್ತದೆ. ಮಕ್ಕಳಿಗೆ ಸ್ಪರ್ಧಾ ಮನೋಭಾವನೆಯನ್ನು ಬೆಳೆಸಬೇಕು ಸ್ಪರ್ಧೆಯಲ್ಲಿ ಭಾಗವಹಿಸುವಂತೆ ಹೇಳಬೇಕು ಸೋಲು ಗೆಲುವು ಮುಖ್ಯವಲ್ಲ ಪ್ರತಿಯೊಂದು ರಂಗದಲ್ಲಿಯೂ ಚಟುವಟಿಕೆಯಿಂದ ಇರಬೇಕು. ವಿದ್ಯಾರ್ಥಿಗಳ ಮನಸ್ಸಿಗೆ ಹಿತವಾಗುವ ಕಾರ್ಯಗಳನ್ನು ಮಾಡಬೇಕು ವಿದ್ಯಾರ್ಥಿಗಳಿಗೆ ಅನುಕೂಲಕರವಾದ ಸಾಂಸ್ಕೃತಿಕ ಕ್ರೀಡಾ ಚಟುವಟಿಕೆಗಳನ್ನು ವ್ಯವಸ್ಥಿತವಾಗಿ ನಡೆಸಬೇಕು ಈ ರೀತಿ ಮಾಡುವುದರಿಂದ ಮಕ್ಕಳ ದೈಹಿಕ ಮಾನಸಿಕ ಬೌದ್ಧಿಕ ಬೆಳವಣಿಗೆ ಸಾಧ್ಯವಾಗುತ್ತದೆ ಮಕ್ಕಳಲ್ಲಿ ಸೂಕ್ತವಾಗಿರುವ ಪ್ರತಿಭೆಗಳನ್ನು ಹೊರ ತರಲು ಇಂತಹ ಸ್ಪರ್ಧೆಗಳು ನಿರಂತರವಾಗಿ ನಡೆಯಬೇಕು ಮಕ್ಕಳಿಗೆ ಉತ್ತಮವಾದ ಮನೋಭಾವನೆ ಬರುವಂತೆ ಶಿಕ್ಷಣ ನೀಡಬೇಕು ಸಮಾಜದಲ್ಲಿ ಉತ್ತಮವಾದ ವ್ಯಕ್ತಿತ್ವ ರೂಪಿಸಲು ಶಿಕ್ಷಕರು ಶ್ರಮಿಸಬೇಕು ಸಾಮಾಜಿಕ ಹೊಣೆಗಾರಿಕೆಯನ್ನು ನೀಡಬೇಕು ಸಮಾಜದಲ್ಲಿ ಬದುಕುವ ಕಲೆಯನ್ನು ರೂಪಿಸಬೇಕು. ಸಮಾಜದ ಎಲ್ಲಾ ರಂಗಗಳಲ್ಲಿ ತೊಡಗಬೇಕು ಎಂದು ಸುಬ್ಬೆಗೌಡ ಹೇಳಿದರು. ಸಮಾರಂಭದ ಅಧ್ಯಕ್ಷತೆಯನ್ನು ನಿವೃತ್ತ ಪ್ರಾಂಶುಪಾಲ ಹಾಗೂ ಲೇಖಕ ಕೆ .ಕಾಳೇಗೌಡ ವಹಿಸಿದ್ದರು.

ಅವರು ಮಾತನಾಡಿ ಮಕ್ಕಳಿಗೆ ಔಪಚಾರಿಕ ಶಿಕ್ಷಣದ ಜೊತೆಗೆ ಅವನು ಅನೌಪಚಾರಿಕ ಕಲೆಗಳನ್ನು ಕಲಿಕೆಯನ್ನು ನೀಡಬೇಕು ಶಿಕ್ಷಣ ಅತ್ಯಂತ ಪ್ರಮುಖವಾದ ಭಾಗ ಒಂದು ಎಷ್ಟು ಮುಖ್ಯವೋ ಭಾಗ–2. ಮುಖ್ಯ ವಾಗಿರುತ್ತದೆ ಮಕ್ಕಳಲ್ಲಿ ಚಿಕ್ಕದರಿಂದಲೇ ಸಾಮಾನ್ಯ ಜ್ಞಾನ ಇಂಗ್ಲಿಷ್ ಸಂವಹನ ಕುಶಲತೆ ಮುಂತಾದವುಗಳನ್ನು ನೀಡಬೇಕು ಆ ಮೂಲಕ ವಿದ್ಯಾರ್ಥಿಗಳ ವಯಕ್ತಿಕ ಮನೋಭಾವನೆಯನ್ನು ಉತಮ ಪಡಿಸಬೇಕು ಎಂದು ಕಾಳೇಗೌಡ ಹೇಳಿದರು. ನಿವೃತ್ತ ಶಿಕ್ಷಕ ಬಿಸಿಎಸ್ ಕುಮಾರ್ ಮಾತನಾಡಿ ಪ್ರಗತಿ ಶಾಲೆಯಲ್ಲಿ ಕೈಗೊಂಡಿರುವ ಹಲವು ಕಾರ್ಯಕ್ರಮಗಳ ಬಗ್ಗೆ ಮೆಚ್ಚಿಗೆ ವ್ಯಕ್ತಪಡಿಸಿದರೆ ಮಕ್ಕಳ ಸೂಕ್ತ ಪ್ರತಿಭೆಯ ಅನಾವರಣಕ್ಕೆ ಇದು ಸಹಕಾರಿಯಾಗಿದೆ ಈ ದಿಕ್ಕಿನಲ್ಲಿ ಎಲ್ಲರೂ ಸಹಕರಿಸಬೇಕು ವಿದ್ಯಾರ್ಥಿಗಳೇ ಪೋಷಕರು ಪೋಷಕರು ಉತ್ತಮ ನಿಟ್ಟಿನಲ್ಲಿ ಸಾಗಿದರೆ ಸಮಾಜವನ್ನು ಉತ್ತಮ ಪ್ರಗತಿಯತ್ತ ಕೊಂಡೊಯ್ಯಲು ಸಾಧ್ಯವಾಗುತ್ತದೆ. ಉತ್ತಮವಾದ ಶಿಕ್ಷಣ ನೀಡುವುದರಿಂದ ತಮ್ಮ ಸಮಾಜ ನೀಡಲು ಸಾಧ್ಯವಾಗುತ್ತದೆ ಸಂಸ್ಕಾರಯುತ ಕಲಿಕೆಯ ಮೂಲಕ ವ್ಯಕ್ತಿತ್ವ ಬೆಳವಣಿಗೆಗೆ ಸಹಾಯವಾಗುತ್ತದೆ ಎಂದು ಅವರು ಹೇಳಿದರು. ವಿದ್ಯಾರ್ಥಿ ಧನುಶ್ರೀ ಲಕ್ಷ್ಮಿ ಪ್ರಾರ್ಥನೆಯೊಂದಿಗೆ ಕಾರ್ಯಕ್ರಮ ಆರಂಭಗೊಂಡಿತು. ಶ್ರೀನಿಧಿ ಸ್ವಾಗತಿಸಿದರು ಮಾನ್ಯ ಶ್ರೀ ಹೊಂದಿಸಿದರು ಹೊಂದಿಸಿದರು. ಕುಮಾರಿ ಚೈತನ್ಯ ಕಾರ್ಯಕ್ರಮ ನಿರೂಪಿಸಿದರು.

# ರೈತರ ಅಭಿವೃದ್ಧಿ ನಮ್ಮ ಜವಾಬ್ದಾರಿ: ದೊಡ್ಡ ಸ್ವಾಮಿಗೌಡ

**ಕೆ .ಆರ್ .ನಗರ :** ಹನಸೋಗೆ ಗ್ರಾಮದ ಅಭಿವೃದ್ಧಿಗೆ ಈಗಾಗಲೇ ಏಳು ಕೋಟಿಗೂ ಹೆಚ್ಚು ಅನುದಾನವನ್ನು ಶಾಸಕ ಡಿ. ರವಿಶಂಕರ್ ನೀಡಲಾಗಿದ್ದು ಕೃಷಿ ಪತ್ತಿನ ಸಹಕಾರ ಸಂಘ ಮತ್ತು ರೈತರ ಅಭಿವೃದ್ಧಿ ನಮ್ಮ ಜವಾಬ್ದಾರಿ ಆಗಿದೆ ನಿಮ್ಮೆಲ್ಲರ ಸಹಕಾರ ಇರಲಿ ಎಂದು ಜಿಲ್ಲಾ ಡಿಸಿಸಿ ಬ್ಯಾಂಕ್ ಅಧ್ಯಕ್ಷ ದೊಡ್ಡ ಸ್ವಾಮಿಗೌಡ ತಿಳಿಸಿದರು ಹನಸೋಗೆ ಗ್ರಾಮಸ್ಥರಿಂದ ಆಯೋಜಿಸಿದ ಅಭಿನಂದನೆ ಸ್ವೀಕರಿಸಿ ಮಾತನಾಡಿದರು.

ಪ್ರತಿ ವರ್ಷ ಗ್ರಾಮದಲ್ಲಿ ನಡೆಯಲಿರುವ ಶ್ರೀ ಶ್ರೀನಿವಾಸ ಸ್ವಾಮಿ ಹಬ್ಬ ಮತ್ತು ರಥೋತ್ಸವಕ್ಕೆ ವಿಶೇಷ ಪೂಜೆ ಸಲ್ಲಿಸುವುದರ ಜೊತೆಗೆ ಗ್ರಾಮದ ಎಲ್ಲಾ ಅಭಿವೃದ್ಧಿಗೆ ಸಹಕಾರ ನೀಡುತ್ತಾ ಬರುತ್ತಿದ್ದೇವೆ. ಈಗಾಗಲೇ ರಸ್ತೆ ಮತ್ತು ವಿವಿಧ ದೇವಸ್ಥಾನಗಳ ಅಭಿವೃದ್ಧಿಗೆ ಸಾಕಷ್ಟು ಅನುದಾನವನ್ನು ಶಾಸಕ ರವಿಶಂಕರ್ ಅವರು ನೀಡಿದ್ದಾರೆ. ಇನ್ನೂ ಹೆಚ್ಚು ಅನುದಾನ ನೀಡುವುದರ ಜೊತೆಗೆ ಗ್ರಾಮವನ್ನು ಸಮಗ್ರಹ ಅಭಿವೃದ್ಧಿ ಮಾಡುವುದರ ಕಡೆಗೆ ನಾವೆಲ್ಲರೂ ಗಮನ ಹರಿಸೋಣ ಎಂದರು.

ಕಾಂಗ್ರೆಸ್ ಯೂಥ್ ಮುಖಂಡ ನವೀನ್ ಮಾತನಾಡಿ ಶಾಸಕರು ಮತ್ತು ಜಿಲ್ಲಾ ಡಿ ಸಿ ಸಿ ಬ್ಯಾಂಕ್ ಅಧ್ಯಕ್ಷ ದೊಡ್ಡ ಸ್ವಾಮಿಗೌಡ ಅವರು ನಮ್ಮ ಗ್ರಾಮದ ಅಭಿವೃದ್ಧಿಗೆ ಸಹಕಾರ ನೀಡುತ್ತಿದ್ದಾರೆ ಜೊತೆಗೆ ಗ್ರಾಮದಲ್ಲಿ ಪ್ರತಿವರ್ಷ ನಡೆಯಲಿರುವ ಶ್ರೀ ಶ್ರೀನಿವಾಸ ಸ್ವಾಮಿ ರಥೋತ್ಸವದ ದಿನ ನಡೆಯಲಿರುವ ಮನರಂಜನ ಕಾರ್ಯಕ್ರಮವನ್ನು ವೈಯಕ್ತಿಕವಾಗಿ ಆರ್ಥಿಕ ನೆರವು ನೀಡುವ ಮೂಲಕ ಸುಮಾರು ವರ್ಷಗಳಿಂದ ಮಾಡಿಕೊಂಡು ಬರುತ್ತಿದ್ದಾರೆ. ಅದೇ ರೀತಿ ಈ ವರ್ಷವೂ ಮನರಂಜನ ಕಾರ್ಯಕ್ರಮವನ್ನು ಆಯೋಜನೆ ಮಾಡಿಕೊಟ್ಟಿದ್ದಾರೆ ಹಾಗಾಗಿ ಅವರಿಗೆ ಗ್ರಾಮದ ಪರವಾಗಿ ಹೃತ್ಪೂರ್ವಕ ಕೃತಜ್ಞತೆ ಸಲ್ಲಿಸುತ್ತೇವೆ ಎಂದರು.

ಶಾಸಕ ಡಿ. ರವಿಶಂಕರ್ ಮತ್ತು ಜಿಲ್ಲಾ ಡಿಸಿಸಿ ಅಧ್ಯಕ್ಷ ದೊಡ್ಡ ಸ್ವಾಮಿಗೌಡ ಅವರಿಗೆ ಗ್ರಾಮಸ್ಥರು ಮಾಡಿದ ಮನವಿಗೆ ಸ್ಪಂದಿಸಿ ಪರಿಶಿಷ್ಟ ಜಾತಿ ಮತ್ತು ಮುಸ್ಲಿಂ ಸಮುದಾಯದ ಬೀದಿ ಮುಂಭಾಗ ಇರುವ ಕಾವೇರಿ ನದಿಗೆ ಒಂದು ಕೋಟಿ ರೂ ವೆಚ್ಚದಲ್ಲಿ ಸೋಪಾನ ಕಟ್ಟೆ ನಿರ್ಮಿಸಿ ಕೊಟ್ಟಿದ್ದಾರೆ. ಅನಸೋಗೆ ದೊಡ್ಡ ಓಣಿ ರಸ್ತೆಗೆ 20 ಲಕ್ಷ ಅನುದಾನದಲ್ಲಿ ರಸ್ತೆ ನಿರ್ಮಿಸಿದ್ದಾರೆ. ವಾಲ್ಮೀಕಿ ಸಮುದಾಯ ಭವನ ಮುಂದುವರಿದ ಕಾಮಗಾರಿಗೆ 20 ಲಕ್ಷ ಅನುದಾನ ನೀಡಿದ್ದಾರೆ. ಅಭಿಮಕೇಶ್ವರ ದೇವಸ್ಥಾನ, ಶ್ರೀನಿವಾಸ ಸ್ವಾಮಿ ದೇವಸ್ಥಾನ, ರಾಘವೇಂದ್ರ ಸ್ವಾಮಿ ಮಠ, ಈಶ್ವರ ಸ್ವಾಮಿ ದೇವಸ್ಥಾನಗಳಿಗೆ ತಡೆಗೋಡೆ ನಿರ್ಮಿಸಲು ಈಗಾಗಲೇ ಆರು ಕೋಟಿ ಅನುದಾನ ಮಂಜೂರು ಮಾಡಿದ್ದಾರೆ ಎಂದು ತಿಳಿಸಿದರು.

ಸಂದರ್ಭದಲ್ಲಿ ಹಾಡ್ಯ ಮಹಾದೇವಸ್ವಾಮಿ, ಹನಸೋಗೆ ನವೀನ್, ಪ್ರಸನ್ನನಾಯಕ, ಪರಮೇಶ್, ಎಚ್‌ಎಸ್ ಪಾಂಡುರಂಗ, ಎಚ್ ಟಿ ಅವಿನಾಶ್, ಕರಿಗೌಡ, ಅಮ್ಜದ್ ಭಾಷಾ, ಎಚ್ ಟಿ ರಾಜೇಗೌಡ, ಅಣ್ಣೇಗೌಡ, ಯಜಮಾನ್ ಚೆಲುವ ನಾಯಕ, ಕೃಷ್ಣನಾಯಕ, ರಂಜನ್, ರಘು, ಬೀರೇಶ್, ಪಾಲಾಕ್ಷ, ಸಿದ್ದಯ್ಯ, ಗಾಡಿಸಿದ್ದಪ್ಪ, ಕಿಶೋರ್, ಸಂತೋಷ್, ಶಶಾಂಕ್, ಚನ್ನಮಗೆರೆ ಪಾಪ, ಹರೀಶ್ ಇತರರು ಇದ್ದರು,



# ಬೇಸಿಗೆಯಲ್ಲಿ ಕುಡಿಯುವ ನೀರಿನ ಸಮಸ್ಯೆ ಪರಿಹಾರಕ್ಕೆ ಕ್ರಮವಹಿಸಿ : ಜಿ.ಪಂ ಸಿಇಓ ಸೂಚನೆ

**ಮಂಡ್ಯ:** ಜಿಲ್ಲೆಯಲ್ಲಿ ಮುಂದಿನ ಬೇಸಿಗೆ ಹಂಗಾಮಿನಲ್ಲಿ ಕುಡಿಯುವ ನೀರಿನ ಕೊರತೆ ಉಂಟಾಗದಂತೆ ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಳ್ಳಲು ಸಂಬಂಧಿತ ಅಧಿಕಾರಿಗಳಿಗೆ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಸೂಚನೆ ನೀಡಿದ್ದಾರೆ.

ಈ ಕುರಿತು ಜಿಲ್ಲಾ ಪಂಚಾಯತ್ ಕಚೇರಿಯಲ್ಲಿ ನಡೆದ ಸಭೆಯಲ್ಲಿ ಮಾತನಾಡಿದ ಸಿ.ಇ.ಓ ರವರು, ಗ್ರಾಮ ಪಂಚಾಯತ್ ಮಟ್ಟದಲ್ಲಿ ಲಭ್ಯವಿರುವ ಕುಡಿಯುವ ನೀರಿನ ಮೂಲಗಳನ್ನು ಪರಿಶೀಲಿಸಿ, ದುರಸ್ಥಿಗೆ ಒಳಪಡುವ ಬೋರ್‌ವೆಲ್‌ಗಳು ಹಾಗೂ ಪೈಪ್‌ಲೈನ್‌ಗಳ ತಕ್ಷಣದ ದುರಸ್ತಿ ಕಾರ್ಯಗಳನ್ನು ಕೈಗೊಳ್ಳುವಂತೆ ನಿರ್ದೇಶಿಸಿದರು.

ನೀರು ಸರಬರಾಜು ವ್ಯವಸ್ಥೆ ಸುಗಮವಾಗಿರುವುದನ್ನು ಖಚಿತಪಡಿಸಿಕೊಳ್ಳಲು ನಿಯಮಿತವಾಗಿ ಮೇಲ್ವಿಚಾರಣೆ ನಡೆಸಬೇಕು ಎಂದು ಹೇಳಿದರು.

**ಪ್ರಮುಖ ಸೂಚನೆಗಳು:**

- ಗ್ರಾಮವಾರು ಕುಡಿಯುವ ನೀರಿನ ಲಭ್ಯತೆ ಬಗ್ಗೆ ಸಮಗ್ರ ವರದಿ ಸಿದ್ಧಪಡಿಸಬೇಕು.
- ಅಗತ್ಯವಿದ್ದಲ್ಲಿ ಟ್ಯಾಂಕರ್‌ಗಳ ಮೂಲಕ ನೀರು ಪೂರೈಕೆ ಮಾಡುವ ವ್ಯವಸ್ಥೆ ಮಾಡಬೇಕು.
- ನೀರಿನ ಸಂರಕ್ಷಣೆ ಹಾಗೂ ಸಮರ್ಪಕ ಬಳಕೆ ಕುರಿತು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಬೇಕು.
- ಶಾಲೆಗಳು, ಅಂಗನವಾಡಿಗಳು ಹಾಗೂ ಸಾರ್ವಜನಿಕ ಆರೋಗ್ಯ ಕೇಂದ್ರಗಳಿಗೆ ಆದ್ಯತೆ ನೀಡಬೇಕು.

ಬೇಸಿಗೆ ಅವಧಿಯಲ್ಲಿ ಯಾವುದೇ ಗ್ರಾಮದಲ್ಲಿ ಕುಡಿಯುವ ನೀರಿನ ಸಮಸ್ಯೆ ಎದುರಾಗದಂತೆ ಎಲ್ಲಾ ಅಧಿಕಾರಿಗಳು ಸಮನ್ವಯದಿಂದ ಕಾರ್ಯನಿರ್ವಹಿಸಬೇಕು ಎಂದು ಸಿಇಓ ಸೂಚಿಸಿದರು.



ಕುಡಿಯುವ ನೀರಿನ ಪೂರೈಕೆಯಲ್ಲಿ ನಿರ್ಲಕ್ಷ್ಯ ತೋರಿದರೆ ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಸಿದರು.

ಬೇಸಿಗೆ ಸಮೀಪಿಸುತ್ತಿರುವ ಹಿನ್ನೆಲೆಯಲ್ಲಿ ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಗಂಭೀರವಾಗುವ ಸಾಧ್ಯತೆ ಇದೆ. ತಾಪಮಾನ ಹೆಚ್ಚಾದಂತೆ ನೀರಿನ ಮೂಲಗಳು ಒಣಗುವುದು, ಭೂಗರ್ಭ ಜಲಮಟ್ಟ ಕುಸಿಯುವುದು, ಮತ್ತು ನೀರಿನ ಬೇಡಿಕೆ ಹೆಚ್ಚಾಗುವುದು ಸಾಮಾನ್ಯ. ಆದ್ದರಿಂದ ಮಳೆ ಕಡಿಮೆಯಾಗಿ ಕೆರೆ, ಕುಂಟೆ, ಬಾವಿಗಳು ಒಣಗುತ್ತವೆ. ಭೂಗರ್ಭ ಜಲಮಟ್ಟ ಕುಸಿತ ? ಅತಿಯಾದ ಬೋರ್‌ವೆಲ್ ಬಳಕೆ. ನೀರಿನ ದುರ್ಬಳಕೆ ? ಕೃಷಿ ಮತ್ತು ಗೃಹ ಬಳಕೆಯಲ್ಲಿ ಅತಿಯಾದ ನೀರಿನ ಬಳಕೆ ಮಾಡುವುದರಿಂದ ನೀರಿನ ಅಭಾವ ಹೆಚ್ಚಾಗುತ್ತದೆ ಹಾಗೂ ರೋಗ–ರುಜಿನಗಳು ಹರಡು ಸಾಧ್ಯತೆ ಹೆಚ್ಚಾಗಿರುತ್ತದೆ. ಆದ್ದರಿಂದ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಈ ಸಮಸ್ಯೆಗಳು ಉಂಟಾಗದಂತೆ ಕ್ರಮವಹಿಸಬೇಕಾಗುತ್ತದೆ.

ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ತೆಗೆದುಕೊಳ್ಳಬೇಕಾದ ಪ್ರಮುಖ ಕ್ರಮಗಳ ಬಗ್ಗೆ ಸಿ.ಇ.ಓ ರವರು ಈ ಕೆಳಗಿನಂತೆ ತಿಳಿಸಿದರು.

**1. ಸಮಸ್ಯೆ ಇರುವ ಗ್ರಾಮಗಳ ಗುರುತಿಸುವಿಕೆ.**

ಹಿಂದಿನ ವರ್ಷದ ಮಾಹಿತಿ ಪರಿಶೀಲನೆ

- ಕಳೆದ ಬೇಸಿಗೆಯಲ್ಲಿ ಟ್ಯಾಂಕರ್ ಮೂಲಕ ನೀರು ಪೂರೈಸಿದ ಗ್ರಾಮಗಳ ಪಟ್ಟಿ ಸಿದ್ಧಪಡಿಸುವುದು.
- ಕಡಿಮೆ ಮಳೆ ದಾಖಲಾಗಿರುವ ಹೋಬಳಿ/ ಗ್ರಾಮಗಳನ್ನು ಗುರುತಿಸುವುದು.

**ನೀರಿನ ಮೂಲಗಳ ಸ್ಥಿತಿ ಪರಿಶೀಲನೆ**

- ಬೋರ್‌ವೆಲ್‌ಗಳ ನೀರಿನ ಮಟ್ಟ (Water Level) ಪರಿಶೀಲನೆ.
- ಓಪನ್ ವೆಲ್, ಕೆರೆ, ಕುಂಟೆ, ಟ್ಯಾಂಕ್‌ಗಳ ನೀರಿನ ಸಂಗ್ರಹ ಮಟ್ಟ ಪರಿಶೀಲನೆ.
- ಹಾನಿಗೊಳಗಾದ ಪಂಪ್ ಸೆಟ್‌ಗಳು, ಮೋಟಾರ್, ಪೈಪ್‌ಲೈನ್‌ಗಳ ಮಾಹಿತಿ ಸಂಗ್ರಹ.

ಗ್ರಾಮಸಭೆ/VWSC ಸಮಿತಿ ಸಭೆ

- ಸ್ಥಳೀಯರ ಅಭಿಪ್ರಾಯ ಪಡೆದು ಸಮಸ್ಯೆ ಇರುವ ವಾರ್ಡ್/ಜನವಸತಿಗಳನ್ನು ಗುರುತಿಸುವುದು.
- ವಿಶೇಷವಾಗಿ ಖಅ/ಖಖ ಕಾಲೋನಿ, ಹಳ್ಳಿಯ ದೂರದ ಭಾಗಗಳನ್ನು ಪರಿಶೀಲನೆ.

**ತಕ್ಷಣ ಗ್ರಾಮ ಪಂಚಾಯಿತಿಗಳಲ್ಲಿ ಕೈಗೊಳ್ಳಬೇಕಾದ ಕ್ರಮಗಳು**

**ಬೋರ್‌ವೆಲ್ ರಿಪೇರಿ ಮತ್ತು ರೀಚಾರ್ಜ್**

- ಕೆಟ್ಟುಹೋಗಿರುವ ಮೋಟಾರ್/ಪಂಪ್‌ಗಳನ್ನು ಟ್ಯಾಂಕರ್ ಮೂಲಕ ನೀರು ಪೂರೈಕೆ
- ಅಗತ್ಯವಿದ್ದಲ್ಲಿ ಮಾತ್ರ ಟ್ಯಾಂಕರ್‌ಗಳ ನಿಯೋಜನೆ.
- ನೀರಿನ ಗುಣಮಟ್ಟ ಪರೀಕ್ಷೆ (Water Quality Test) ಕಡ್ಡಾಯ.

ಕುಡಿಯುವ ನೀರಿನ ಸಮಸ್ಯೆಗಳಿಗೆ ಸಂಬಂಧಿಸಿದಂತೆ ಖಾಸಗಿ ಕೊಳವೆ ಬಾವಿಗಳನ್ನು ಬಾಡಿಗೆ ಆದಾರದ ಮೇಲೆ ಪಡೆಯುವುದು, ಅಗತ್ಯವಿದ್ದಲ್ಲಿ ಟ್ಯಾಂಕರ್ ಮೂಲಕ ನೀರು ಸರಬರಾಜು ಮಾಡುವುದು, ಹೊಸ ಕೊಳವೆ ಬಾವಿಗಳನ್ನು ಕೊರೆಸುವುದು, ಪೈಪ್ ಲೈನ್ ಅಳವಡಿಸುವುದು, ವಿದ್ಯುತ್ ಸಂಪರ್ಕ ಕಲ್ಪಿಸುವುದು ಸೇರಿದಂತೆ ಅಗತ್ಯ ಕಾಮಗಾರಿಗಳನ್ನು ಕಾರ್ಯನಿರ್ವಾಹಕ ಅಧಿಕಾರಿ, ತಹಶಿಲ್ದಾರ್ ಮತ್ತು ಸಹಾಯಕ ಕಾರ್ಯಪಾಲಕ ಅಭಿಯಂತರರು ಜಂಟಿಯಾಗಿ ತಪಾಸಣೆ ನಡೆಸಿ, ತಾಲ್ಲೂಕು ಟಾಸ್ಕ್ ಪೋರ್ಸ್ ಸಮಿತಿಯಲ್ಲಿ ಮಂಡಿಸಿ ಅನುಮೋದನೆ ಪಡೆದು ಸಕ್ಷಮ ಪ್ರಾಧಿಕಾರಕ್ಕೆ ಕಳುಹಿಸಿ ಅನುಮತಿ ಪಡೆದು ನಂತರ ಕ್ರಮವಹಿಸಬೇಕು ಎಂದು ತಿಳಿಸಿದರು. ಈ ಎಲ್ಲಾ ಕಾಮಗಾರಿಗಳನ್ನು ಜಿಲ್ಲಾ ನೀರು ಮತ್ತು ನೈರ್ಮಲ್ಯ ಸಮಿತಿ ಸಭೆಯಲ್ಲಿ ಮಂಡಿಸಿ ಕಡ್ಡಾಯವಾಗಿ ಅನುಮತಿ ಪಡೆಯಬೇಕು ಎಂದು ಕಾರ್ಯಪಾಲಕ ಅಭಿಯಂತರರಿಗೆ ಸೂಚಿಸಿದರು.

ಟ್ರಾನ್ಸ್ ಪಾರ್ಮರ್ ಗಳನ್ನು ಅಳವಡಿಸುವುದು ಹಾಗೂ ಸ್ಥಗಿತವಾಗಿರುವ ಕೊಳವೆ ಬಾವಿಗಳಿಂದ ಟ್ರಾನ್ಸ್ ಪಾರ್ಮರ್ ಗಳನ್ನು ಸ್ಥಳಾಂತರ ಮಾಡುವ ಮೂಲಕ ಕುಡಿಯುವ ನೀರಿನ ಸಮಸ್ಯೆಯನ್ನು ಪರಿಹರಿಸಲು ಕ್ರಮವಹಿಸುವಂತೆ ಸೂಚಿಸಲಾಗಿದೆ ಎಂದು ತಿಳಿಸಿದರು.

ಬೇಸಿಗೆ ಹಿನ್ನೆಲೆಯಲ್ಲಿ ಮಾರ್ಚ್ 2 ರಿಂದ ಸಾರ್ವಜನಿಕ ಸೋಮವಾರದ ಕುಂದು ಕೊರತೆ ಸಭೆಯನ್ನು ತಾಲ್ಲೂಕು ಕೇಂದ್ರಗಳಲ್ಲೇ ಆಯೋಜಿಸುವಂತೆ ಸೂಚಿಸಲಾಗಿದೆ. ಪ್ರತೀ ಸೋಮವಾರ ಕ್ಷೇತ್ರ ಭೇಟಿ ನಡೆಸಿ ಕುಡಿಯುವ ನೀರಿನ ಸಮಸ್ಯೆ ಹಾಗೂ ಇನ್ನಿತರೆ ಸಮಸ್ಯೆಗಳ ಬಗ್ಗೆ ಪರಿಶೀಲಿಸಲಾಗುವುದು. ಈ ಸಂದರ್ಭದಲ್ಲಿ ಸಾರ್ವಜನಿಕರ ಕುಂದು ಕೊರತೆಯನ್ನು ಸ್ಥಳದಲ್ಲಿಯೇ ಆಲಿಸಲಾಗುವುದು ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಈ ಸಂದರ್ಭದಲ್ಲಿ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗದ ಕಾರ್ಯಪಾಲಕ ಅಭಿಯಂತರರಾದ ಪ್ರಮೋದ್ ಕುಮಾರ್ ಎನ್.ಜಿ. ಹಾಗೂ ಜಿಲ್ಲೆಯ ಎಲ್ಲಾ ಉಪ ವಿಭಾಗಗಳ ಕುಡಿಯುವ ನೀರಿನ ಇಲಾಖೆಯ ವಿವಿಧ ಇಲಾಖೆ ಅಧಿಕಾರಿಗಳು ಉಪಸ್ಥಿತರಿದ್ದರು.

# ರೈತರುಗಳು ಬೆಳೆಯುವ ಬೆಳೆಗಳಿಗೆ ವೈಜ್ಞಾನಿಕ ಬೆಲೆ ನೀಡುವಂತೆ ಒತ್ತಾಯ

**ಕೆ.ಆರ್.ನಗರ:** ರೈತರುಗಳು ಬೆಳೆಯುವ ಬೆಳೆಗಳಿಗೆ ವೈಜ್ಞಾನಿಕ ಬೆಲೆಯನ್ನು ನೀಡಬೇಕು ಎಂದು ಕರ್ನಾಟಕ ರಾಜ್ಯ ರೈತ ಸಂಘದ ಜಿಲ್ಲಾಧ್ಯಕ್ಷ ಹೊಸೂರು ಕುಮಾರ್ ಒತ್ತಾಯಿಸಿದರು.

ಅವರು ತಾಲೂಕಿನ ಲಕ್ಕಿಕುಪ್ಪೆ ಗ್ರಾಮದಲ್ಲಿ ಕರ್ನಾಟಕ ರಾಜ್ಯ ರೈತ ಸಂಘದ ಗ್ರಾಮ ಘಟಕವನ್ನು ಉದ್ಘಾಟಿಸಿ ಮಾತನಾಡಿದರು.

ರೈತರುಗಳು ಕಷ್ಟಪಟ್ಟು ಸಾಲ ಸೋಲ ಮಾಡಿ ಬೆಳೆದಂತಹ ಬೆಳೆಗಳಿಗೆ ಉತ್ತಮ ಬೆಲೆ ಸಿಗದಿದ್ದರೆ ರೈತರು ಸಂಕಷ್ಟಕ್ಕೆ ಸಿಲುಕುತ್ತಾರೆ. ರೈತರನ್ನು ಸಂಕಷ್ಟದಿಂದ ಪಾರು ಮಾಡುವ ಉದ್ದೇಶದಿಂದ ಸರ್ಕಾರಗಳು ಬೆಳೆಗಳಿಗೆ ಉತ್ತಮ ಬೆಲೆಯನ್ನು ನೀಡುವುದರ ಮೂಲಕ ರೈತರ ಹಿತವನ್ನು ಕಾಪಾಡಬೇಕು ಎಂದರು.

ಕೃಷಿ ಕ್ಷೇತ್ರವನ್ನು ಕಡೆಗಣಿಸುವ ಸರ್ಕಾರಗಳ ವಿರುದ್ಧ ರೈತರು ಧ್ವನಿ ಎತ್ತುವ ಮೂಲಕ ನಮ್ಮ ಹಕ್ಕನ್ನು ನಾವು ಪಡೆದುಕೊಳ್ಳಬೇಕು ಎಂದರು.

ರಾಜಕೀಯ ಪಕ್ಷಗಳು ಚುನಾವಣೆ ಸಂದರ್ಭದಲ್ಲಿ ಮತಗಳಿಕೆಗೋಸ್ಕರ ಜನಸಾಮಾನ್ಯರಿಗೆ ಆಸೆತೋರಿಸಿ ಅಧಿಕಾರಕ್ಕೆ ಬರುತ್ತಿವೆ. ಅವುಗಳು ನಿಜವಾಗಿ ರೈತರ ಪರ ಕಾರ್ಯ ನಿರ್ವಹಿಸಬೇಕು ಎಂದು ಆಗ್ರಹಿಸಿದ ಅವರು ರೈತರು ವ್ಯವಸಾಯೋತ್ಪನ್ನವನ್ನು ಮಾಡುವ ಮೂಲಕ ಈ ನಾಡಿಗೆ ಮಹತ್ತರವಾದ ಕೊಡುಗೆಯನ್ನು ನೀಡುತ್ತಾ ಬರುತ್ತಿದ್ದಾರೆ. ಇಂತಹ ರೈತರುಗಳ ಬೆಳೆಗಳಿಗೆ ಸರಿಯಾದ ಬೆಲೆಯನ್ನು ನೀಡಬೇಕೆಂದರು.

ರೈತರುಗಳು ಸಂಘಟಿತರಾಗಿ ಹೋರಾಟವನ್ನು ಮಾಡಿದರೆ ಅದರಲ್ಲಿ ಖಂಡಿತವಾಗಿ ಯಶಸ್ಸು ಪಡೆಯಲು ಸಾಧ್ಯವಾಗುತ್ತದೆ ಎಂದರು.

ಈ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ರೈತ ಸಂಘದ ಲಕ್ಕಿಕುಪ್ಪೆ ಗ್ರಾಮ ಘಟಕದ ನೂತನ ಪದಾಧಿಕಾರಿಗಳು ಹಾಗೂ ಸರ್ವ ಸದಸ್ಯರುಗಳಿಗೂ ಹಸಿರು ಶಾಲು ಹೊದಿಸಿ ಅಭಿನಂದಿಸಿ ಪ್ರಮಾಣವಚನ ಬೋಧಿಸಿ ಸಂಘದಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳುವಂತೆ ಕರೆ ನೀಡಲಾಯಿತು.


ಕಾರ್ಯಕ್ರಮದಲ್ಲಿ ಕರ್ನಾಟಕ ರಾಜ್ಯ ರೈತ ಸಂಘದ ಗ್ರಾಮ ಘಟಕದ ಅಧ್ಯಕ್ಷ ಶ್ರೀಕಂಠೇಗೌಡ, ಗೌರವಾಧ್ಯಕ್ಷ ಜವರೇಗೌಡ, ಉಪಾಧ್ಯಕ್ಷ ಗಣೇಶ್, ಕಾರ್ಯದರ್ಶಿ ರವಿ, ಖಜಾಂಚಿ ತಿಮ್ಮೇಗೌಡ, ಸಂಚಾಲಕ ರಾಮಯ್ಯ, ಪದಾಧಿಕಾರಿಗಳು, ಸರ್ವ ಸದಸ್ಯರುಗಳು, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮರಂಕಯ್ಯ, ಮಹಿಳಾ ಘಟಕದ ರಾಜ್ಯ ಕಾರ್ಯದರ್ಶಿ ನೇತ್ರಾವತಿ, ತಾಲೂಕು ಅಧ್ಯಕ್ಷ

ಎಸ್.ಬಿ.ಶೇಖರ್, ಕಾರ್ಯಾಧ್ಯಕ್ಷ ಕೃಷ್ಣೇಗೌಡ, ಪ್ರಧಾನ ಕಾರ್ಯದರ್ಶಿ ಎಸ್‌ಜಿಆರ್ ಧನಂಜಯ,

ಕೆ.ಆರ್.ನಗರ ತಾಲ್ಲೂಕು ಅಧ್ಯಕ್ಷ ನಟರಾಜು ಸೇರಿದಂತೆ ಹಲವರು ಇದ್ದರು.



# ನಿಜವಾದ ಸ್ನೇಹಿತ



| ವೀಣಾ ಹೇಮಂತ್‌ಗೌಡ ಪಾಟೀಲ್

ಅದೊಂದು ಜನನಿಬಿಡ ಮಾರುಕಟ್ಟೆ ಪ್ರದೇಶ. ಅದರ ಮೂಲೆಯ ಒಂದು ಭಾಗದಲ್ಲಿ ಬೇಕರಿಯನ್ನು ಇಟ್ಟುಕೊಂಡಿದ್ದ. ಆತ ಓರ್ವ ಪ್ರಾಮಾಣಿಕ ವ್ಯಕ್ತಿಯಾಗಿದ್ದ. ಆತನ ಅಂಗಡಿಯ ಪಕ್ಕದಲ್ಲಿಯೇ ಒಂದು ಬಟ್ಟೆ ಹೊಲಿಯುವ ದರ್ಜಿಯ ಅಂಗಡಿ ಇದ್ದು ಇಬ್ಬರೂ ಸ್ನೇಹಿತರಾಗಿದ್ದರು.. ಪ್ರತಿದಿನ ಮುಂಜಾನೆ ಪರಸ್ಪರರಿಗೆ ನಮಸ್ಕಾರವನ್ನು ಸಲ್ಲಿಸಿ ತಮ್ಮ ಅಂಗಡಿಯ ಕೆಲಸಕ್ಕೆ ತೆರಳುತ್ತಿದ್ದ ಅವರು ತಮ್ಮ ಬಿಡುವಿನ ಸಮಯದಲ್ಲಿ ಅಂಗಡಿಯ ಮುಂದೆ ಕುರ್ಚಿಗಳನ್ನು ಹಾಕಿಕೊಂಡು ಪರಸ್ಪರ ಮಾತನಾಡುತ್ತಾ ಕುಳಿತುಕೊಳ್ಳುತ್ತಿದ್ದರು.

ಅದೊಂದು ಮುಂಜಾನೆ ಅತ್ಯಂತ ಗಂಭೀರ ಮುಖಭಾವವನ್ನು ಹೊತ್ತು ದರ್ಜಿ ಬೇಕರಿಯಾತನ ಬಳಿ ಬಂದವನೇ ನಾನು ನಿನಗೊಂದು ವಿಷಯವನ್ನು ಹೇಳಲೇಬೇಕು... ಇಂದು ಮುಂಜಾನೆ ಮಾರುಕಟ್ಟೆಯ ಪ್ರದೇಶದಲ್ಲಿ ಓರ್ವ ವ್ಯಕ್ತಿ ನಿನ್ನ ಕುರಿತು ಬಹಳ ಕೆಟ್ಟದಾಗಿ ಮಾತನಾಡುತ್ತಿದ್ದ. ನೀನು ಬೇಕರಿಯ ತಿನಿಸುಗಳನ್ನು ಹಾಗೂ ಬ್ರೆಡ್ ತಯಾರಿಸಲು ಕಳಪೆ ಗುಣಮಟ್ಟದ ಹಿಟ್ಟನ್ನು ಬಳಸುತ್ತಿರುವೆ ಎಂದು ಆತ ಬೇರೆಯವರಿಗೆಲ್ಲ ಹೇಳುತ್ತಿದ್ದ... ಜೊತೆಗೆ ನೀನು ಎಲ್ಲರಿಗೂ ಮೋಸ ಮಾಡುತ್ತಿರುವೆ ಎಂದು ಜೋರು ಜೋರಾಗಿ ಹೇಳುತ್ತಿದ್ದ. ನಿನ್ನ ಬೇಕರಿಯಲ್ಲಿ ಖರೀದಿಸಬೇಡಿ ಎಂದು ಹೇಳುತ್ತಿದ್ದ ಆತ ನಿನ್ನ ಶತ್ರುವೇ ಸರಿ ಎಂದು ಹೇಳಿದ.

ಅತ್ಯಂತ ಪ್ರಾಮಾಣಿಕವಾಗಿ ತನ್ನ ವ್ಯವಹಾರವನ್ನು ನಡೆಸುತ್ತಿದ್ದ ಬೇಕರಿಯಾತ ಇದನ್ನು ಕೇಳಿ ತುಸು ಬೇಸರ ಗೊಂಡ..... ನಿಜ..ನಿಜ ಆತ ನನ್ನ ಏಳಿಗೆಯನ್ನು ಸಹಿಸುತ್ತಿಲ್ಲ, ಆತ ನನ್ನ ಶತ್ರುವೇ ಸರಿ ಎಂದು ಬೇಕರಿಯಾತ ಪುನರುಚ್ಚರಿಸಿದ.

ಮರುದಿನ ಮುಂಜಾನೆ ಮತ್ತೆ ಬಂದ ದರ್ಜಿ ಇಂದು ಮುಂಜಾನೆ ನಾನು ಪಾರ್ಕಿನಲ್ಲಿ ವಾಕಿಂಗ್ ಮಾಡಲು ಹೋದಾಗ ಇನ್ನೊಬ್ಬ ವ್ಯಕ್ತಿ ನಿನ್ನ ಕುರಿತು ತುಂಬಾ ತಪ್ಪಾಗಿ ಹೇಳುತ್ತಿದ್ದ. ನೀನೊಬ್ಬ ಕಳ್ಳ ಎಂದೂ ನೀನು ತೂಕದಲ್ಲಿ ಹಾಗೂ ಗುಣಮಟ್ಟದಲ್ಲಿ ವ್ಯತ್ಯಾಸ ಮಾಡುತ್ತಿರುವೆ ಎಂದು ನಿನ್ನ ಕುರಿತು ಅಲ್ಲಿ ನೆರೆದ ಸಾಕಷ್ಟು ಜನರ ಮುಂದೆ ಹೇಳುತ್ತಿದ್ದ. ನಿನಗೆ ಇಬ್ಬರೂ ಶತ್ರುಗಳು ಇದ್ದಾರೆ ಎಂದು ಅತ್ಯಂತ ಬೇಸರದ ಧ್ವನಿಯಲ್ಲಿ ಹೇಳಿದ.

ಬೇಕರಿಯಾತ ತಲೆತಗ್ಗಿಸಿ ನಿಜ ನಿಜ... ನನಗೆ ಇಬ್ಬರು ಶತ್ರುಗಳು ಹುಟ್ಟಿಕೊಂಡರು ಎಂದು ಹೇಳಿದ. ಮತ್ತೆ ಕೆಲಸ ಸಮಯ ಮಾತನಾಡಿ ದರ್ಜಿ ಅಲ್ಲಿಂದ ಹೊರಟು ಹೋದ.

ಮತ್ತೆ ಒಂದೆರಡು ದಿನಗಳು ಕಳೆದ ಮೇಲೆ ಬೇಕರಿಯಾತನ



ಬಳಿ ಓಡು ನಡಿಗೆಯಲ್ಲಿ ಬಂದ ದರ್ಜಿ ಕೇಳಿಲ್ಲಿ ನಿನ್ನ ಪಕ್ಕದ ಮನೆಯಾತ ನಿನ್ನ ಕುರಿತು ತುಂಬಾ ಕೆಟ್ಟದಾಗಿ ಮಾತನಾಡುತ್ತಿದ್ದ ನಿನಗೆ ಯಾವುದೋ ಒಂದು ಗುಪ್ತ ರೋಗ ಇದೆಯಂತೆ.... ತುಂಬಾ ದಿನಗಳಿಂದ ಖಾಯಿಲೆಗಳಿಂದ ಬಳಲುತ್ತಿರುವ ನೀಲಾ ಅಂಗಡಿಯಲ್ಲಿ ಯಾವುದೇ ಬೇಕರಿ ಪದಾರ್ಥಗಳನ್ನು ಖರೀದಿಸಬೇಡಿ ಎಂದು ಆತ ತನ್ನ ಸ್ನೇಹಿತರ ಬಳಗಕ್ಕೆ ಹೇಳುತ್ತಿದ್ದ ಎಂದು ಹೇಳಿದ. ನೋಡು ನೋಡು... ನಿನಗೆ ಮೂರು ಜನ ಶತ್ರುಗಳು ಇದ್ದಾರೆ ಎಂದು ಹೇಳಿದ.

ಇಲ್ಲ ನನಗೆ ಮೂರು ಜನ ಶತ್ರುಗಳಲ್ಲ ಬದಲಾಗಿ ನಾಲ್ಕು ಜನ ಶತ್ರುಗಳಿದ್ದಾರೆ ಎಂದು ಬೇಕರಿಯಾತ ಅತ್ಯಂತ ಸ್ಪಷ್ಟವಾಗಿ ಹೇಳಿದ.

ಬೇಕರಿಯಾತನ ಮಾತುಗಳನ್ನು ಕೇಳಿ ದರ್ಜಿ ಕಕ್ಕಾಬಿಕ್ಕಿ ಯಾಗಿ ಆತನ ಕಡೆಗೆ ನೋಡಿದ. ಏನು ನೀನು ಹೇಳುತ್ತಿರುವುದು ನನಗೆ ಒಂದು ಚೂರೂ ಅರ್ಥವಾಗುತ್ತಿಲ್ಲ ಎಂದು ಬೇಕರಿಯಾತನನ್ನು ಪ್ರಶ್ನಿಸಲು ಬೇಕರಿಯಾತ ದರ್ಜಿಯ ಕಣ್ಣಲ್ಲಿ ಕಣ್ಣಿಟ್ಟು ನೋಡುತ್ತಾ ನಸುನಗೆ ಬೀರಿ ಹೇಳಿದ.

ಹೌದು... ನಾನು ಸರಿಯಾಗಿ ಹೇಳುತ್ತಿದ್ದೇನೆ. ನೀನೇ ನನ್ನ ನಾಲ್ಕನೆಯ ಶತ್ರು ಎಂದು ಹೇಳಿದ. ನೀನು ಅಲ್ಲಿ ಕುಳಿತು ನನ್ನ ಕುರಿತು ಅವರು ತಪ್ಪಾಗಿ ಹೇಳುವಾಗ ಅದನ್ನು ವಿರೋಧಿಸಲಿಲ್ಲ. ಅವರು ಹೇಳುತ್ತಿರುವುದು ಸುಳ್ಳು ಎಂದು ಖಂಡಿಸಲಿಲ್ಲ... ಬದಲಾಗಿ ಅವರು ಹೇಳುವ ಎಲ್ಲ ಸುಳ್ಳುಗಳನ್ನು, ಕೆಟ್ಟ ಪದಗಳನ್ನು ಖಂಡಿಸದೆ ಅವುಗಳನ್ನು ತಂದು ನನ್ನ ಮುಂದೆ ವರದಿ ಒಪ್ಪಿಸಿದಂತೆ ಮಾಡಿ ನನ್ನ ಮನವನ್ನು ನೋಯಿಸಿದೆ.

ನಿನಗೆ ಗೊತ್ತೇ ! ಓರ್ವ ನಿಜವಾದ ಸ್ನೇಹಿತ ತನ್ನ ಸ್ನೇಹಿತನ ಮನಸ್ಸನ್ನು ನೋಯಿಸುವುದಿಲ್ಲ. ಆತ ತನ್ನ ಸ್ನೇಹಿತನ ಮೇಲೆ ಆರೋಪಗಳನ್ನು ಮಾಡಿದಾಗ ಅವರನ್ನು ಖಂಡಿಸಿ ನನ್ನ ಪರವಾಗಿ ಮಾತನಾಡುತ್ತಾನೆ... ಆದರೆ ಓರ್ವ ಶತ್ರು ಮಾತ್ರ ಆ ವಿಷಯವನ್ನು ತಂದು ನನ್ನ ಮುಂದೆ ಹೇಳಿ ನನ್ನ ಮನಸ್ಸನ್ನು ನೋಯಿಸುತ್ತಾನೆ... ಈಗ ಹೇಳು ನೀನು ನನ್ನ ಶತ್ರುವೋ ಮಿತ್ರನೋ ಎಂದು ಮರು ಪ್ರಶ್ನೆ ಮಾಡಿದನು.

ಬೇಕರಿಯಾತನ ಪ್ರಶ್ನೆಗೆ ನಿರುತ್ತರನಾದ ದರ್ಜಿ ತನ್ನ ಕೃತ್ಯಕ್ಕೆ ತಲೆತಗ್ಗಿಸಿ ಅಲ್ಲಿಂದ ಜಾಗ ಖಾಲಿ ಮಾಡಿದನು

**ನೋಡಿದಿರಾ ಸ್ನೇಹಿತರೆ,**

ಈ ಜಗತ್ತಿನಲ್ಲಿ ಎಲ್ಲ ಬಂಧಗಳಿಗಿಂತ ಸ್ನೇಹ ಬಂಧ ಅಮೂಲ್ಯವಾದದ್ದು... ಓರ್ವ ನಿಜವಾದ ಸ್ನೇಹಿತ ನಿಮ್ಮ ಸಂಕಷ್ಟ ಸಮಯದಲ್ಲಿ ತಾನು ಗುರಾಣಿಯಾಗಿರುತ್ತಾನೆಯೇ ಹೊರತು ಓರ್ವ ಸಂದೇಶಕಾರನಾಗಿ ನಿಮಗೆ ಬಂದು ಹೇಳುವ ಮೂಲಕ ಅವಹೇಳನವನ್ನು ಮಾಡುವುದಿಲ್ಲ. ನಿಜವಾದ ಸ್ನೇಹಿತರು ಬೇರೊಬ್ಬರು ನಿಮ್ಮ ಕುರಿತು ಮಾತನಾಡುವಾಗ ಕೇಳಿ ಸುಮ್ಮನೆ ಇರುವುದಿಲ್ಲ ಬದಲಾಗಿ ಅವರೊಂದಿಗೆ ವಾದ ಮಾಡುತ್ತಾರೆ. ನಿಮ್ಮ ಪರ ನಿಲುವನ್ನು ಮುಂದೆ ಇಡುತ್ತಾರೆ ನಮ್ಮ ಹೆಗಲ ಮೇಲೆ ನಾವು ತಲೆಯಿಟ್ಟು ಸಾಂತ್ವನ ಹೊಂದಲು ಸಾಧ್ಯವಿಲ್ಲ... ನಮಗೆ ಸ್ನೇಹಿತರು ಬೇಕೇ ಬೇಕು.

ಸ್ನೇಹದ ಮುಖವಾಡವನ್ನು ಹೊತ್ತ ಶತ್ರುಗಳು ಮಾತ್ರ ಬೇರೆಯವರು ನಿಮ್ಮ ಕುರಿತು ಕೆಟ್ಟ ಮಾತನಾಡುವಾಗ ಸುಮ್ಮನೆ ಇರುತ್ತಾರೆ ಹಾಗೂ ಆ ವಿಷಯವನ್ನು ತಂದು ನಿಮ್ಮ ಮುಂದೆ ಅತ್ಯಂತ ಆರಾಮದಾಯಕವಾಗಿ ಭಾವ ರಹಿತರಾಗಿ ಹೇಳುತ್ತಾರೆ.... ಕೆಲವೊಮ್ಮೆ ತಮಗೆ ಬೇಕಾದಂತೆ ಉಪ್ಪು, ಖಾರ ಹಚ್ಚಿ ಹೇಳುವ ಇಲ್ಲವೇ ಕಡೆಗಣಿಸುವ ರೀತಿಯಲ್ಲಿ ನಿಮ್ಮನ್ನು ತೇಜೋವಧೆ ಮಾಡುತ್ತಾರೆ. ಅಂತಹವರ ಸಂಖ್ಯೆ ಬಹಳ ಕಡಿಮೆ ಇದ್ದರೂ ಅವರೊಂದಿಗೆ ಅತಿಯಾದ ಸಲುಗೆ ಒಳ್ಳೆಯದಲ್ಲ.

**ಏನಂತೀರಾ ಸ್ನೇಹಿತರೆ??**

Published by Mihir Akash K.R Printed by M.S.Shivaprakash on behalf of Mihir Akash K.R. Printed at M.S. Shivaprakash, IDEAL OFFSET PRINTERS, #337, SLJ Temple Street, Old Town Mandya Dist-571401, Karnataka. Published from Mihir Akash K.R, #78, Daya Marga Near Geetha School, Siddartha Nagar Mysore-570011, Editor K.N Ravi,